


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 6 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 316 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅಪೆಕ್ಸ್ ಬ್ಯಾಂಕ್, ಕೆಎಂಎಫ್ ಅಧ್ಯಕ್ಷರ ನೇಮಕ ವಿಚಾರ

ಡಿಸಿಎಂ ಡಿಕೆಶಿ–ಸಚಿವ ರಾಜಣ್ಣ ಜಟಾಪಟಿ

- ರಾಜಣ್ಣರನ್ನು ಸಂಪುಟದಿಂದ ವಜಾ ಮಾಡುವಂತೆ ಖರ್ಗೆಗೆ ಡಿಕೆಶಿ ಮನವಿ
- ಜಾರಕಿಹೊಳಿ ನಿವಾಸದಲ್ಲಿ ವಾಲ್ಮೀಕಿ ಸಮುದಾಯದ ಶಾಸಕರ ಸಭೆ

ಬೆಂಗಳೂರು, ಮಾ.5(ಕೆಎಂಶಿ)–ಸಹಕಾರಿ ಇಲಾಖೆ ಅಡಿಯಲ್ಲಿ ಬರುವ ಅಪೆಕ್ಸ್ ಬ್ಯಾಂಕ್, ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಸೇರಿದಂತೆ ಕೆಲವು ಸಂಸ್ಥೆಗಳಿಗೆ ಅಧ್ಯಕ್ಷರ ನೇಮಕ ವಿಚಾರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಹಾಗೂ ಸಹಕಾರಿ ಸಚಿವ ಕೆ.ಎನ್. ರಾಜಣ್ಣ ನಡುವೆ ಬಹಿರಂಗ ಗುದ್ದಾಟ ನಡೆದಿದೆ.

ಶಿವಕುಮಾರ್ ಶಿಫಾರಸು ಮಾಡುವ ಯಾವುದೇ ಅಭ್ಯರ್ಥಿಗಳನ್ನು ನನ್ನ ಇಲಾಖೆಯಡಿ ಬರುವ ಸಂಸ್ಥೆಗಳಿಗೆ ನೇಮಕ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜಣ್ಣ ಸ್ಪಷ್ಟವಾಗಿ ತಿಳಿಸಿರುವುದಲ್ಲದೆ, ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನೂ ನೀಡಿದ್ದಾರೆ. ಇದನ್ನರಿತ ಶಿವಕುಮಾರ್, ಬೆಂಗಳೂರಿನಲ್ಲಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ, ರಾಜಣ್ಣ ವಿರುದ್ಧ ದೂರು ನೀಡಿರುವುದಲ್ಲದೆ, ಅವರನ್ನು ಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಮನವಿ ಮಾಡಿದ್ದಾರೆ. ಪಕ್ಷ ಸಂಘಟನೆ ಹಾಗೂ ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಸಹಕಾರಿ ಇಲಾಖೆಯಲ್ಲಿ ಅಧ್ಯಕ್ಷರ ಮತ್ತು ಸದಸ್ಯರ ನೇಮಕಾತಿ ಆಗಬೇಕಿದೆ, ಈ ವಿಷಯದಲ್ಲಿ ಅವರು ನಮ್ಮನ್ನು ಸಂಪೂರ್ಣ ಕಡೆಗಣಿಸುತ್ತಿದ್ದಾರೆ ಎಂದು ಹೇಳಿದ್ದಾರೆ.


ಡಿ.ಕೆ.ಶಿವಕುಮಾರ್


ಕೆ.ಎನ್.ರಾಜಣ್ಣ

ಆದರೆ, ಖರ್ಗೆ ಅವರು, ರಾಜಣ್ಣ ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಿ, ಈ ವಿಷಯದ ಬಗ್ಗೆ ಚರ್ಚೆ ಮಾಡಿ, ಮುಂದೆ ನೋಡೋಣ ಎಂದು ತಿಳಿ ಹೇಳಿದ್ದಾರೆ. ಖರ್ಗೆ ಅವರ ಸಲಹೆಯಂತೆ ಶಿವಕುಮಾರ್ ನಿನ್ನೆ ಮಧ್ಯಾಹ್ನ ರಾಜಣ್ಣ ಅವರಿಗೆ ಮಾಹಿತಿ ನೀಡಿ, ವಿಧಾನಸೌಧದಲ್ಲಿನ ಅವರ ಕಚೇರಿಗೆ ತೆರಳಿ, ಪಕ್ಷದ ಸಹಕಾರಿ ದಿಗ್ಗಜರ ಜೊತೆ ಸಭೆ ಮಾಡಿದರು. ಆದರೆ, ಈ ಸಭೆಗೆ ರಾಜಣ್ಣ ಬರಲೇ ಇಲ್ಲ, ನಂತರ 6ನೇ ಪುಟಕ್ಕೆ

ರೈತರಿಗೆ ಹಾಲಿನ ದರ ಏರಿಕೆ ನಿಶ್ಚಿತ



ಬೆಂಗಳೂರು, ಮಾ.5– ರೈತರಿಗೆ ಹಾಲಿನ ದರ ಏರಿಕೆ ನಿಶ್ಚಿತ. ಈ ಕುರಿತು ಈಗಾಗಲೇ ಒಂದು ಸುತ್ತಿನ ಸಭೆ ನಡೆಸಲಾಗಿದ್ದು, ಸಿಎಂ ಜತೆ ಎರಡನೇ ಸುತ್ತಿನ ಸಭೆ ನಡೆಸಿ ಶೀಘ್ರವೇ ತೀರ್ಮಾನ ಕೈಗೊಳ್ಳಲಾಗುವುದು ಎಂದು ಪಶು ಸಂಗೋಪನಾ ಸಚಿವ ವೆಂಕಟೇಶ್ ವಿಧಾನಪರಿಷತ್‌ಗೆ ತಿಳಿಸಿದರು.


ಕೆ.ವೆಂಕಟೇಶ್

ಸದಸ್ಯರಾದ ಉಮಾ ಶ್ರೀ, ಡಾ.ಎಂ.ಜಿ.ಮುಳೆ, ಹೇಮಲತಾ ನಾಯಕ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹೈನುಗಾರರಿಗೆ 656 ಕೋಟಿ ರೂ. ಪ್ರೋತ್ಸಾಹಧನ ಬಾಕಿ ಇದ್ದು ಅದನ್ನು ಆದಷ್ಟು ಬೇಗ ವಿತರಿಸಲಾಗುವುದು ಎಂದು ಹೇಳಿದರು.ರೈತರು ಹಾಲಿನ ದರವನ್ನು ಪ್ರತಿ 6ನೇ ಪುಟಕ್ಕೆ







ವಿಧಾನಸಭೆಯಲ್ಲಿ ಬೆಂಗಳೂರು ಅರಮನೆ ವಿಧೇಯಕ ಸೇರಿ 5 ಮಸೂದೆಗಳ ಮಂಡನೆ

ಬೆಂಗಳೂರು, ಮಾ.5–ಬೆಂಗಳೂರು ಅರಮನೆ ಮೈದಾನದ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವ ಉದ್ದೇಶದ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಮಸೂದೆ 2025 ಸೇರಿ ಒಟ್ಟು ಐದು ಮಸೂದೆಗಳನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಬಳ್ಳಾರಿ ಮತ್ತು ಜಯಮಹಲ್ ರಸ್ತೆ ಅಗಲೀಕರಣಕ್ಕಾಗಿ ಬೆಂಗಳೂರು ಅರಮನೆ ಮೈದಾನದ 15.39 ಎಕರೆ ಜಾಗ ಸ್ವಾಧೀನಕ್ಕೆ ಬದಲಾಗಿ ಮೈಸೂರು ರಾಜ ಮನೆತನದ ವಾರಸುದಾರರಿಗೆ ರೂ.3014 ಕೋಟಿ ವರ್ಗಾವಣೆ ಅಭಿವೃದ್ಧಿ ಹಕ್ಕುಗಳನ್ನು (ಟಿಡಿಆರ್) ಪರಿಹಾರ ನೀಡಬೇಕೆಂದು




ಸುಪ್ರೀಂಕೋರ್ಟ್ ಆದೇಶ ನೀಡಿತ್ತು ಈ ಹಿನ್ನೆಲೆಯಲ್ಲಿ ಸರ್ಕಾರದ ಈ ಮಸೂದೆ ಮಹತ್ವ ಪಡೆದುಕೊಂಡಿದೆ. ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) 6ನೇ ಪುಟಕ್ಕೆ



ಹಕ್ಕಿ ಜ್ವರ: ಕೋಳಿ ಮೊಟ್ಟೆ, ಮಾಂಸ ಸೇವಿಸುವಾಗ ಎಚ್ಚರ ವಹಿಸಿ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮನವಿ



ಬೆಂಗಳೂರು, ಮಾ.5(ಕೆಎಂಶಿ)– ಹಕ್ಕಿ ಜ್ವರ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಕೋಳಿ ಮೊಟ್ಟೆ ಮತ್ತು ಮಾಂಸ ಸೇವಿಸು ವಾಗ ಕಟ್ಟುನಿಟ್ಟಾಗಿ ಎಚ್ಚರಿಕೆಗಳನ್ನು ಪಾಲಿಸಿ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಹಕ್ಕಿ ಜ್ವರದಿಂದ ಆತಂಕ ಪಡುವ ಅಗತ್ಯವಿಲ್ಲ, ಆದರೆ, ಎಚ್ಚರಿಕೆ ವಹಿಸಬೇಕು ಎಂದು ಕಿವಿಮಾತು ಹೇಳಿದ್ದಾರೆ.

ಹಕ್ಕಿ ಜ್ವರ ಸಾಂಕ್ರಾಮಿಕ ರೋಗವಾದರೂ ಅದು ಮನುಷ್ಯರಿಗೆ ಹರಡುವುದು ಅಪರೂಪ, ಹೀಗಾಗಿ ಆತಂಕಪಡುವ ಅಗತ್ಯವಿಲ್ಲ. ಆದರೆ, ಎಚ್ಚರಿಕೆಯಿಂದಿರಿ. ಕೋಳಿ ಮೊಟ್ಟೆ ಮತ್ತು ಮಾಂಸ ಸೇವಿಸುವಾಗ ಕೆಲವು ಎಚ್ಚರಿಕೆಗಳನ್ನು ಪಾಲಿಸಿ, ಸೇವನೆಗೂ ಮುನ್ನ ಇವುಗಳನ್ನು 70 ಡಿಗ್ರಿ ಉಷ್ಣಾಂಶದಲ್ಲಿ ಅಂದರೆ, ಅರ್ಧ ಗಂಟೆಗೂ ಹೆಚ್ಚು ಕಾಲ ಬೇಯಿಸಿ ಸೇವಿಸಬೇಕು. ಸೋಂಕುಪೀಡಿತ ಕೋಳಿ ಫಾರಂ, ಮೃತ ಹಕ್ಕಿ ಅಥವಾ ಕೋಳಿಗಳ ಸಮೀಪಕ್ಕೆ ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ರಾಜ್ಯದ ವಿವಿಧ ಭಾಗಗಳಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಸಚಿವರು ಟ್ವೀಟ್ ಮೂಲಕ ಸಂದೇಶ ನೀಡಿದ್ದಾರೆ. ಹಕ್ಕಿ ಜ್ವರ ಕೆಲವೆಡೆ ವ್ಯಾಪಕವಾಗಿ ಹರಡಿ, ಆರೋಗ್ಯ ಮತ್ತು ಪಶು ಸಂಗೋಪನಾ ಇಲಾಖೆಯಿಂದ ಕೋಳಿಗಳನ್ನು ಸಾಮೂಹಿಕವಾಗಿ ಕೊಲ್ಲಲಾಗುತ್ತಿದೆ ಸೋಂಕು ಕಾಣಿಸಿಕೊಂಡ ಪ್ರದೇಶದ 1 ಕಿ.ಮೀ. ವ್ಯಾಪ್ತಿಯ ಸುತ್ತಲ ಪ್ರದೇಶಗಳಲ್ಲಿ ಕೋಳಿಗಳನ್ನು ಕೊಲ್ಲಲಾಗುತ್ತಿದೆ, ಆದರೂ, ಸೋಂಕು ಹರಡುವಿಕೆ ನಿಯಂತ್ರಣಕ್ಕೆ ಬರುತ್ತಿಲ್ಲ.

ಕಾವೇರಿ–2.0 ತಂತ್ರಾಂಶದ ಸಮಸ್ಯೆ ಬಗ್ಗೆ ಸದನದಲ್ಲಿ ಗಮನ ಸೆಳೆದ ಎಂಎಲ್‌ಸಿ ಸಿ.ಎನ್.ಮಂಜೇಗೌಡ



ಮೈಸೂರು, ಮಾ.5– ರಾಜ್ಯದಲ್ಲಿ ಕಾವೇರಿ–2.0 ತಂತ್ರಾಂಶದಲ್ಲಿ ಸಮಸ್ಯೆ ಇರುವ ಪರಿಣಾಮ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ. ಇದರಿಂದ ಸರ್ಕಾರಕ್ಕೆ ಫೆಬ್ರವರಿ ತಿಂಗಳೊಂದರಲ್ಲೇ 4ರಿಂದ 5 ಸಾವಿರ ಕೋಟಿ ನಷ್ಟವಾಗಿದೆ ಎಂದು ಎಂಎಲ್‌ಸಿ ಸಿ.ಎನ್.ಮಂಜೇಗೌಡ ಸರ್ಕಾರದ ಗಮನ ಸೆಳೆದರು.

ವಿಧಾನ ಪರಿಷತ್‌ನಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಮೇಲೆ ಮಾತನಾಡಿದ ಅವರು, ಸರ್ಕಾರ ಸಹಾಯವಾಣಿ ಟಿಕೇಟಿಂಗ್ ಅಪ್ಲಿಕೇಷನ್ ಮಾಡಿದೆ. ಆದರೆ ಯಾವುದೂ ಕೆಲಸ ಮಾಡುತ್ತಿಲ್ಲ. ಕಾವೇರಿ–2.0 ತಂತ್ರಾಂಶ ಜಾರಿಗೆ ಬಂದ ಬಳಿಕ ಅದು ಸಾಧಕ–ಬಾಧಕಗಳು ರಾಜ್ಯದ ಜನತೆಗೆ ಗೊತ್ತಾಗಿದೆ ಎಂದರು.

ಸದರಿ ತಂತ್ರಾಂಶ ಜಾರಿಗೊಂಡ ನಂತರ ನಾನೇ ಇಸಿಗಾಗಿ ಅರ್ಜಿ ಸಲ್ಲಿಸಿದ್ದು, 12 ದಿನಗಳು ಕಳೆದರೂ ಈವರೆಗೆ ಇಸಿ ಲಭ್ಯವಾಗಿಲ್ಲ. ತಂತ್ರಾಂಶದಲ್ಲಿ ಅನ್ಯಕ್ರಾಂತ ಜಮೀನುಗಳನ್ನು ಕರಾರು ಮಾಡಲು ಅನುಕೂಲ ಮಾಡಿ ಸರ್ಕಾರ ಸೂಚನೆ ನೀಡಿತ್ತು ಅದು ರದ್ದುಗೊಂಡಿತು. ಇ–ಖಾತೆ ಬ್ಲಾಕ್ ಆಗಿದೆ ಅಲಿಗೇಷನ್ ಬ್ಲಾಕ್ ಆಗಿದೆ. ಕೇಳಿದರೆ ಕಂದಾಯಕ್ಕೋಸ್ಕರ ಇ–ಖಾತೆ ಮಾಡಿದ್ದೇವೆ ಎನ್ನುತ್ತಾರೆ. ಈ ಸಮಸ್ಯೆ ಹೋಗಲಾಡಿಸಲು ತಡವಾದರೆ ಹೇಗೆ ? ಎಂದ ಅವರು ಈ ತತ್ರಾಂಶ ಬರುವುದಕ್ಕಿಂತ ಮುಂಚೆ ಸರ್ಕಾರದ ಆದಾಯ ಎಷ್ಟಿತ್ತು. ತತ್ರಾಂಶ ತಂದ ಮೇಲೆ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ ಇದಕ್ಕೆ ಸಚಿವರು ಉತ್ತರ ನೀಡಬೇಕು ಎಂದರು.

ಕಂದಾಯ ಸಚಿವ ಕೃಷ್ಣಭೈರೇಗೌಡ ಉತ್ತರಿಸಿ, ಜನವರಿ 2 ರಿಂದ ಫೆಬ್ರವರಿ 10ರವರೆಗೆ ಸಮಸ್ಯೆ ಇತ್ತು. ಜನ ತೊಂದರೆ ಅನುಭವಿಸಿದ್ದಾರೆ. ಅದನ್ನು ಈಗ ಸರಿ ಮಾಡಿದ್ದೇವೆ. ಸಿಸ್ಟಮ್‌ನಲ್ಲಿ ಏನು ನ್ಯೂನತೆ ಇದೆ ಎಂಬುದನ್ನು ತಿಳಿಯಲು ಬೆಸ್ಟ್ ಕನ್ಸಲೆಂಟ್ ನೇಮಕ ಮಾಡಿದ್ದೇವೆ. ನಮ್ಮ ಸಿಸ್ಟಮ್ ಮೇಲೆ ಬೇರೆಯವರು ಹೇಗೆ ಅಟ್ಯಾಕ್ ಮಾಡಲು ಸಾಧ್ಯವಾಯಿತು ಎಂಬ ವರದಿ ಕೇಳಿದ್ದೇವೆ. ಜನವರಿಯಲ್ಲಿ 2,23,410 ಟ್ರಾಂಜ್ಯಾಕ್ಷನ್ ಆಗಿದೆ. ಫೆಬ್ರವರಿಯಲ್ಲಿ 1 ಲಕ್ಷದ 99 ಸಾವಿರ ಟ್ರಾಂಜ್ಯಾಕ್ಷನ್ ಆಗಿದೆ. ಕರ್ನಾಟಕದಲ್ಲಿ ಕಂದಾಯ ಇಲಾಖೆ ರೆವಿನ್ಯೂಗ್ರೋಥ್ ಶೇ.17ರಷ್ಟಿದೆ. ನ್ಯೂನತೆ ಇರಬಹುದು, ಆದರೆ ಸಿಸ್ಟಮ್ ಸರಿಯಿಲ್ಲ ಅನ್ನುವುದು ಸರಿಯಿಲ್ಲ. ನಿಮ್ಮ ಸಲಹೆ ಗಳನ್ನು ತೆಗೆದುಕೊಂಡು ಮುಂದೆ ಸಮಸ್ಯೆ ಆಗದಂತೆ ಸರಿ ಮಾಡುತ್ತೇವೆ ಎಂದು ಉತ್ತರ ನೀಡಿದರು.

ಅಂಬೇಡ್ಕರ್ ಭವನ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಒತ್ತಾಯಿಸಿ ಪ್ರತಿಭಟನೆ



ಪ್ರಬುದ್ಧ ಭಾರತ ಭೀಮ್ ಸೇನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.


ಮೈಸೂರು, ಮಾ.5(ಪಿಎಂ)– ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ಅಪೂರ್ಣಗೊಂಡಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಳಿಸಲು ರಾಜ್ಯ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ವಿಶೇಷ ಅನುದಾನ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಪ್ರಬುದ್ಧ ಭಾರತ ಭೀಮ್ ಸೇನೆಯ ಮೈಸೂರು ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ಇತ್ತೀಚೆಗೆ ಪ್ರತಿಭಟನೆ ನಡೆಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಭವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಈ ಬಾರಿ ಬಜೆಟ್‌ನಲ್ಲಿ ವಿಶೇಷ ಅನುದಾನ ಬಿಡುಗಡೆ ಮಾಡಿ ಭವನದ ಕಾಮಗಾರಿ ಪೂರ್ಣಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.


ಭೀಮ್ ಸೇನೆ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಯೋಗ ನರಸಿಂಹ, ಗಂಗಾಧರ್, ಪ್ರಸನ್ನಕುಮಾರ್, ಪ್ರಭಾಕರ್, ರಂಗಸ್ವಾಮಿ, ರಾಮ್ಮಣ್ಣ, ಮಹದೇವಸ್ವಾಮಿ, ನಿಂಗರಾಜು, ನಾಗೇಶ, ರಾಮು, ಅನ್ವರ್ ಪಾಷಾ, ಸಿದ್ದಪ್ಪ, ಜವರಪ್ಪ, ಮಂಜುನಾಥ್, ದೇವೇಂದ್ರ, ಪ್ರಕಾಶ, ವೆಂಕಟೇಶ, ಶಿವಾರಂ, ಮನಜಾಕ್ಷಿ, ಸಣ್ಣಯ್ಯ, ಚಂದ್ರಶೇಖರ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಿಐಐ ಮೈಸೂರು ವಲಯ ಕೌನ್ಸಿಲ್ ನೂತನ ಪದಾಧಿಕಾರಿಗಳು

ಮೈಸೂರು,ಮಾ.5–ಮೈಸೂರು ವಲಯದ ಭಾರತೀಯ ಕೈಗಾರಿಕೆಗಳ ಒಕ್ಕೂಟ (CII), ಇತ್ತೀಚೆಗೆ ನಗರದಲ್ಲಿ 2024–25ರ ವಾರ್ಷಿಕ ಸಭೆ ನಡೆಸಿತು. ಸಭೆ 'ಸುಸ್ಥಿರ ಭವಿಷ್ಯಕ್ಕಾಗಿ ಕಾರ್ಯತಂತ್ರದ ಬೆಳವಣಿಗೆ – ವೇಗವರ್ಧನೆ ಮೈಸೂರು' ಕುರಿತು ಒಳನೋಟವುಳ್ಳ ಚರ್ಚೆ ಒಳಗೊಂಡಿತ್ತು. 2025–26ನೇ ಸಾಲಿಗೆ CII ಮೈಸೂರು ವಲಯ ಕೌನ್ಸಿಲ್‌ಗೆ ಹೊಸ ಪದಾಧಿಕಾರಿಗಳನ್ನು ಘೋಷಿಸಲಾಯಿತು. ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್‌ನ ಅಧ್ಯಕ್ಷರು ಮತ್ತು ನಿರ್ದೇಶಕ ನಾಗರಾಜ ಗರ್ಗೇಶ್ವರಿ ನೂತನ ಅಧ್ಯಕ್ಷರಾಗಿ ನೇಮಕಗೊಂಡರೆ, ಭೋರುಕಾ ಫ್ಯಾಬ್ರಿಕ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಉತ್ಸವ್ ಅಗರ್ವಾಲ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



ನಾಗರಾಜ ಗರ್ಗೇಶ್ವರಿ



ಉತ್ಸವ್ ಅಗರ್‌ವಾಲ್

ಬಸವಾಪುರ ವ್ಯಕ್ತಿ ನಾಪತ್ತೆ



ಮೈಸೂರು,ಮಾ.5–ನಂಜನಗೂಡು ತಾಲೂಕು ಬಸವಾಪುರದ ನಿವಾಸಿ ದಿವಂಗತ ಲೇಟ್ ಮಹದೇವಯ್ಯ ಅವರ ಪುತ್ರ ನಾಗೇಂದ್ರ (48) ಜ.25ರಿಂದ ಕಾಣೆಯಾಗಿದ್ದಾರೆ. ಸುತ್ತೂರು ಜಾತ್ರೆಗೆ ಹೋಗುತ್ತೇನೆಂದು ಹೇಳಿ ಹೋದವರು ಇದುವರೆಗೂ ಮನೆಗೆ ವಾಪಸ್ ಬಂದಿಲ್ಲ ಎಂದು ಪತ್ನಿ ಪಾರ್ವತಿ ಕವಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ.0821–2520040, 0821–2444800, 08221–295621 ಸಂಪರ್ಕಿಸಲು ಕೋರಲಾಗಿದೆ.

ನಿಧನ

ಶ್ರೀಮತಿ ಮಧುರಮ್ಮ



ನಂಜನಗೂಡು, ಮಾ.5–ಪಟ್ಟಣದ ಸಿದ್ದೇಗೌಡ ಬಡಾವಣೆಯ ನಿವಾಸಿ ಮಧುರಮ್ಮ (78) ಅವರು ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕಪಿಲಾ ತೀರದ ಹದಿನಾರು ಕಾಲುಮಂಟಪದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಜೀತ ಪದ್ಧತಿ ನಿರ್ಮೂಲನಾ ಕಾಯ್ದೆ ಜಾರಿಯಲ್ಲಿದ್ದರೂ ಕೆಲವೆಡೆ ಜೀವಂತ

ಜೀತ ಪದ್ಧತಿ ಕುರಿತ ಕಾರ್ಯಾಗಾರ ಉದ್ಘಾಟಿಸಿದ ಹಿರಿಯ ಸಿವಿಲ್ ನ್ಯಾಯಾಧೀಶ ದಿನೇಶ್ ವಿಷಾದ



ಮೈಸೂರಿನ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಜೀತ ಪದ್ಧತಿ ಕುರಿತ ಒಂದು ದಿನದ ಕಾರ್ಯಾಗಾರವನ್ನು ಮೈಸೂರಿನ ಹಿರಿಯ ಸಿವಿಲ್ ನ್ಯಾಯಾಧೀಶ ದಿನೇಶ್ ಉದ್ಘಾಟಿಸಿದರು.

ಮೈಸೂರು,ಮಾ.5(ಆರ್‌ಕೆ)– ನಿರ್ಮೂಲನಾ ಕಾಯ್ದೆ ಜಾರಿಯಲ್ಲಿದ್ದರೂ ಹಲವು ಕ್ಷೇತ್ರಗಳಲ್ಲಿ ಬಲವಂತದ ಜೀತ ಪದ್ಧತಿಯು ಜೀವಂತವಾಗಿದೆ ಎಂದು ಮೈಸೂರಿನ ಹಿರಿಯ ಸಿವಿಲ್ ನ್ಯಾಯಾಧೀಶ ದಿನೇಶ್ ಅವರು ವಿಷಾದಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಜಿಲ್ಲಾ ಪಂಚಾಯ್ತಿ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಜೀತ ಪದ್ಧತಿ ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಕಾಯ್ದೆ ಜಾರಿಯಲ್ಲಿದ್ದಾಗ್ಯೂ ಇನ್ನೂ ಹಲವೆಡೆ ಜೀತಗಾರಿಕೆ ನಡೆಯುತ್ತಿರುವುದು ಕಂಡು ಬರುತ್ತಿದೆ ಎಂದು ಹೇಳಿದರು.

ಸರ್ಕಾರವು 50 ಅಧಿಕಾರಿಗಳನ್ನು ಜೀತ ಪದ್ಧತಿ ನಿರ್ಮೂಲನಾ ಅಧಿಕಾರಿಗಳನ್ನಾಗಿ ನೇಮಿಸಿದೆ. ಪ್ರಮುಖವಾಗಿ ಎಲ್ಲಾ ಇಲಾಖೆಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳು ಜೀತ ಪದ್ಧತಿಯ ಕಾರ್ಮಿಕರು ಕಂಡು ಬಂದಲ್ಲಿ ಅವರ ರಕ್ಷಣೆ ಮಾಡುವುದು ಮತ್ತು ಪುನರ್ವಸತಿ ಒದಗಿಸಿ ಕೊಡುವುದು ಅವರ ಕರ್ತವ್ಯವಾಗಿದೆ. ಕಾನೂನು ವ್ಯಾಪ್ತಿಯಲ್ಲಿ ಏನೇನು ಕ್ರಮ ವಹಿಸಬೇಕೆಂಬುದರ ಬಗ್ಗೆ ವಿಷಯವನ್ನು ತಜ್ಞರು ಕಾರ್ಯಾಗಾರದಲ್ಲಿ ತಿಳಿಸಿಕೊಡಲಿದ್ದು, ಅದರನ್ವಯ ಜೀತ ಪದ್ಧತಿ ನಿರ್ಮೂಲನೆ ಎಲ್ಲರೂ ಕೈಜೋಡಿಸಿ ಎಂದು ತಿಳಿಸಿದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಹುಕೇಶ್‌ಕುಮಾರ್ ಮಾತನಾಡಿ, ಪ್ರಸ್ತುತ ದಿನಗಳಲ್ಲೂ ಜೀತ ಪದ್ಧತಿ ಚಾಲ್ತಿಯಲ್ಲಿರುವುದು ಅತ್ಯಂತ ವಿಷಾದನೀಯ. ಇದು ಸೂಕ್ಷ್ಮ ವಿಚಾರವಾಗಿದ್ದು, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿಯ ಎಲ್ಲಾ ಅಧಿಕಾರಿಗಳು ಒಗ್ಗಟ್ಟಾಗಿ ಜೀತಪದ್ಧತಿ ನಿರ್ಮೂಲನೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಸರ್ಕಾರದಿಂದ ಜೀತಪದ್ಧತಿ ನಿರ್ಮೂಲನೆಗೆ ನಿಗದಿಪಡಿಸಿರುವ ಎಸ್‌ಓಪಿಯಂತೆ ಮತ್ತು ಸರ್ಕಾರದ ಆದೇಶದಂತೆ ಸಮಯಕ್ಕೆ ಅನುಗುಣವಾಗಿ ಕೆಲಸ ಮಾಡಬೇಕಾಗಿರುತ್ತದೆ. ಈ ಬಗ್ಗೆ ಜಿಲ್ಲಾ ಪಂಚಾಯಿತಿಯು ಮೇಲ್ವಿಚಾರಣೆಯನ್ನು ಮಾಡುತ್ತದೆ. ಜೀವಿಕಾ ಸಂಸ್ಥೆಯು ಕೈಜೋಡಿಸಿ ಜೀತಪದ್ಧತಿ ನಿರ್ಮೂಲನೆ ಕುರಿತು ಸರ್ಕಾರದ ಗಮನಕ್ಕೆ ತರುತ್ತಿದ್ದು, ಎಲ್ಲಾ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.

ಹೆಚ್.ಡಿ.ಕೋಟೆ ತಾಲೂಕಿನ ಜೀವಿಕ ಸಂಸ್ಥೆ, ಸಂಪನ್ಮೂಲ ವ್ಯಕ್ತಿ ಬಸವರಾಜು ಜೀತಪದ್ಧತಿ ನಿರ್ಮೂಲನೆ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಉಪಕಾರ್ಯದರ್ಶಿ ಶ್ರೀಮತಿ ಬಿ.ಎಂ.ಸವಿತಾ, ಡಾ.ಎಂ.ಕೃಷ್ಣರಾಜು, ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಜೀವಿತ ಸಂಸ್ಥೆಯ ತಂಡದವರು, ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಾಳೆ 'ಇಂಟರ್‌ವಲ್' ಚಿತ್ರ ಬಿಡುಗಡೆ

ಮೈಸೂರು,ಮಾ.5(ಎಂಟಿವೈ)–ಮೂವರು ಯುವಕರು ಹಾಗೂ ಯುವತಿಯರಿಬ್ಬರ ನಡುವಿನ ಕಥಾಹಂದರವುಳ್ಳ 'ಇಂಟರ್‌ವಲ್' ಕನ್ನಡ ಚಲನಚಿತ್ರ ಮಾ.7ರಂದು ರಾಜ್ಯಾದ್ಯಂತ ತೆರೆಕಾಣಲಿದೆ ಎಂದು ನಾಯಕ ನಟ ಶಶಿರಾಜ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭರತ ವರ್ಷ ಪಿಕ್ಚರ್ಸ್ ಬ್ಯಾನರ್‌ನಡಿ ಸುಖೀ ಹಾಗೂ ಭರತ್ ವರ್ಷ ಒಟ್ಟುಗೂಡಿ ನಿರ್ಮಿಸಿರುವ ಇಂಟರ್‌ವಲ್ ಚಲನಚಿತ್ರ ಕುಟುಂಬ ಸದಸ್ಯ ರೆಲ್ಲರೂ ವೀಕ್ಷಿಸಬಹುದಾದ ಸಿನಿಮಾ ಆಗಿದೆ. ಮೂವರು ತುಂಟಾಟದ ಹುಡುಗರು, ಯುವತಿಯರಿಬ್ಬರ ಸುತ್ತ ನಡೆಯುವ ಹಾಸ್ಯ ಘಟನೆಗಳನ್ನೊಳಗೊಂಡ ಸನ್ನಿವೇಶ ಮುಂದಿಟ್ಟು ಕೊಂಡು ಈ ಚಿತ್ರ ನಿರ್ಮಿಸಲಾಗಿದೆ. ಪ್ರಸ್ತುತ ಯುವಕರ ಮನಸ್ಥಿತಿ, ವಿದ್ಯಾರ್ಥಿ ಜೀವನದಲ್ಲಿ ನಡೆಯುವ ಆಟ, ತುಂಟಾಟದ ಘಟನೆಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಲಾಗಿದೆ ಎಂದರು. ಚಿತ್ರದ ಕೊನೆ ಹತ್ತು ನಿಮಿಷಗಳ ಕ್ಲೈಮಾಕ್ಸ್ ದೃಶ್ಯ ವಿಶೇಷವಾಗಿ ಮೂಡಿಬಂದಿದ್ದು, ಪ್ರೇಕ್ಷಕರ ಗಮನ ಸೆಳೆಯುತ್ತದೆ. ತಾವಲ್ಲದೆ, ಪ್ರಜ್ವಲ್ ಕುಮಾರ್ ಗೌಡ, ಸುಕಿ, ರಚಿತ್ರರಾವ್, ಸಹನ ಆರಾಧ್ಯ, ಸಮೀಕ್ಷ, ದಾನಂ ಮೊದಲಾದವರು ಪ್ರಧಾನ ಪಾತ್ರದಲ್ಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಥೆ ಚಿತ್ರಕಥೆ ಬರೆದಿರುವ ಸುಖೇಶ್, ಪ್ರಜ್ವಲ್ ಕುಮಾರ್‌ಗೌಡ ಉಪಸ್ಥಿತರಿದ್ದರು.

ಎಪಿಎಂಸಿ ಕಾಯ್ದೆ ತಿದ್ದುಪಡಿ ವಿರುದ್ಧ ಪ್ರತಿಭಟನೆ



ಎಪಿಎಂಸಿ ಕಾಯ್ದೆ ತಿದ್ದುಪಡಿ ಮಾಡದಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು ಬುಧವಾರ ಎಪಿಎಂಸಿ ಅಧಿಕಾರಿಗೆ ಮನವಿ ಸಲ್ಲಿಸಿದರು.

ಮೈಸೂರು,ಮಾ.5(ಎಂಟಿವೈ)– ಅಧಿವೇಶನದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಗೆ ತಿದ್ದುಪಡಿ ಮಾಡಲು ಮುಂದಾಗಿರುವುದನ್ನು ಖಂಡಿಸಿ, ಮೈಸೂರಿನ ಎಪಿಎಂಸಿ ಮಾರುಕಟ್ಟೆಯಲ್ಲಿ ನಿಯಮ ಉಲ್ಲಂಘಿಸಿ ಚಿಲ್ಲರೆ ಹಾಗೂ ಪ್ಲಾಸ್ಟಿಕ್ ಮಾರಾಟಗಾರರಿಗೆ ನೀಡಿರುವ ಕೊಠಡಿ ಹಿಂಪಡೆಯುವಂತೆ ಆಗ್ರಹಿಸಿ ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು ಮನವಿ ಸಲ್ಲಿಸಿದರು.

ಮೈಸೂರಿನ ಎಪಿಎಂಸಿ ಆವರಣಕ್ಕೆ ಬಂದು ಎಪಿಎಂಸಿ ಅಧಿಕಾರಿಗೆ ಮನವಿ ಸಲ್ಲಿಸಿದರಲ್ಲದೆ, ಸರ್ಕಾರ ಯಾವುದೇ ಕಾರಣಕ್ಕೂ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆ ತಿದ್ದುಪಡಿ ತರಬಾರದು. ರೈತ ಹಿತಕಾಯುವುದರೊಂದಿಗೆ ಮಧ್ಯವರ್ತಿಗಳ ಹಾವಳಿ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮೈಸೂರು ಎಪಿಎಂಸಿ ರೈತರಿಗಾಗಿ, ಸಗಟು ವ್ಯಾಪಾರ ಮಾಡುವುದಕ್ಕಾಗಿ ಸ್ಥಾಪನೆಗೊಂಡಿದೆ. ಆದರೆ, ನಿಯಂಮ ಉಲ್ಲಂಘಿಸಿ ಚಿಲ್ಲರೆ ವ್ಯಾಪಾರಿಗಳಿಗೆ, ಪ್ಲಾಸ್ಟಿಕ್ ವಸ್ತುಗಳ ಮಾರಾಟಗಾರರಿಗೆ ಮಳಿಗೆ ನೀಡಲಾಗಿದೆ. ಎಪಿಎಂಸಿ ನೀಡಿದ ನಿವೇಶನವನ್ನು ಪ್ರಭಾವಿಗಳು ಪಡೆದಿದ್ದಾರೆ. ಇದರಿಂದ ಎಪಿಎಂಸಿ ನಿಯಮ ಗಾಳಿಗೆ ತೂರಿದಂತಾಗಿದೆ. ನಿಯಮ ಉಲ್ಲಂಘಿಸಿ ನಿವೇಶನ ಪಡೆದಿರುವವರಿಂದ ನಿವೇಶನ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜಸ್ ಲೋಕೇಶ್‌ಗೌಡ ಇನ್ನಿತರರು ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗಾಗಿ ರೈತರ ಪ್ರತಿಭಟನೆ



ಮೈಸೂರು ಡಿಸಿ ಕಚೇರಿ ಬಳಿ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ದಕ್ಷಿಣ ಭಾರತ ಸಂಯುಕ್ತ ಕಿಸಾನ್ ಮೋರ್ಚಾ, ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಮಾ.5(ಎಂಟಿವೈ)– ರೈತರ ಹೋರಾಟವನ್ನು ಗಂಭೀರವಾಗಿ ಪರಿಗಣಿಸಿ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿ ಕಾನೂನು ಜಾರಿ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಲ್ಲಿ ರೈತರು ಪ್ರತಿಭಟನೆ ಮಾಡಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿ ಬಳಿ ದಕ್ಷಿಣ ಭಾರತ ಸಂಯುಕ್ತ ಕಿಸಾನ್ ಮೋರ್ಚಾ, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಭಟನೆ ನಡೆಸಿ, ಕೇಂದ್ರ ಸರ್ಕಾರ ದೆಹಲಿಯಲ್ಲಿ ರೈತರು ನಡೆಸುತ್ತಿರುವ ಹೋರಾಟವನ್ನು ಗೌರವಿಸಬೇಕು. ರೈತರ ಹೋರಾಟವನ್ನು ಗಂಭೀರವಾಗಿ ಪರಿಗಣಿಸಿ, ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ದೆಹಲಿಯಲ್ಲಿ ರೈತರು ಹೋರಾಟ ನಡೆಸುತ್ತಿದ್ದರೂ ಕೇಂದ್ರ ಸರ್ಕಾರ ರೈತರ ಬೇಡಿಕೆಗಳ ಬಗ್ಗೆ ಯಾವುದೇ ನಿರ್ಧಾರ ಮಾಡಿಲ್ಲ. ಕಳೆದ ವರ್ಷ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಘೋಯಲ್ ನೇತೃತ್ವದಲ್ಲಿ ಐದು ಸಭೆಗಳು ನಡೆದಿದ್ದು, ಯಾವುದೇ ಪ್ರಯೋಜನವಾಗಿಲ್ಲ. ರೈತ ಚಳವಳಿಗೆ ಒಂದು ವರ್ಷ ತುಂಬಿದ ನಂತರ ಕೇಂದ್ರ ಆಹಾರ ಸಚಿವ ಪ್ರಹ್ಲಾದ್ ಜೋಶಿ ಹಾಗೂ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾನ್ ನೇತೃತ್ವದಲ್ಲಿ 2 ಸಭೆ ನಡೆಸಿದ್ದಾರೆ. 3ನೇ ಸಭೆ ಮಾ.19ಕ್ಕೆ ನಿಗದಿಯಾಗಿದೆ. ಕೇಂದ್ರ ಸರ್ಕಾರ ಕೇವಲ ಸಭೆ ನಡೆಸಿ ವಿಳಂಬ ಧೋರಣೆ ತೋರುತ್ತಿರುವುದು ಸರಿಯಲ್ಲ ಎಂದು ಅಸಮಾದಾನ ವ್ಯಕ್ತಪಡಿಸಿದರು.

ಎಂಎಸ್‌ಪಿ ಗ್ಯಾರಂಟಿ ಖಾತ್ರಿ ಕಾನೂನು ಜಾರಿಗೊಳಿಸಬೇಕು. ರೈತರ ಸಾಲ ಸಂಪೂರ್ಣ ಮನ್ನಾ ಮಾಡಬೇಕು. ಡಾ.ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿಗೊಳಿಸಬೇಕು. 60 ವರ್ಷ ತುಂಬಿದ ರೈತರಿಗೆ ಪಿಂಚಣಿ ಯೋಜನೆ ಜಾರಿ ಮಾಡಬೇಕು. ಕಬ್ಬಿನ ಎಫ್‌ಆರ್‌ಪಿ ದರವನ್ನು ರೈತನ ಹೊಲದಲ್ಲಿನ ದರ ಎಂದು ನಿಗದಿ ಮಾಡಬೇಕು. ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ಕೈಬಿಡಬೇಕು. ಕೃಷಿ ಸಾಲ ನೀತಿ ನಿಯಮ ಬದಲಾಗಬೇಕು. ಪ್ರಧಾನ ಮಂತ್ರಿ ಫಸಲ್ ಭೀಮಾ ಬೆಳೆ ವಿಮೆ ಬದಲಾಗಬೇಕು. ಮಾ.19 ರಂದು ನಡೆಯುವ ಸಭೆಯಲ್ಲಿ ಅಂತಿಮ ತೀರ್ಮಾನ ಆಗಲೇಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ದಕ್ಷಿಣ ಭಾರತ ಸಂಯುಕ್ತ ಕಿಸಾನ್ ಮೋರ್ಚಾ, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಬೆನಕನಹಳ್ಳಿ ಬಿ.ಪಿ.ಪರಶಿವಮೂರ್ತಿ, ಪ್ರದೀಪ್, ರವಿಕುಮಾರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಮಾ. 5–ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಮಾ.11ರಿಂದ 15ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ವರೆಗೆ ಎರಡು ಅವಧಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9480476825, 9483589825 ಸಂಪರ್ಕಿಸಬಹುದು.

ವ್ಯಕ್ತಿ ನಾಪತ್ತೆ



ಮೈಸೂರು,ಮಾ.5–ಮೈಸೂರಿನ ಯರಗನಹಳ್ಳಿ ವಾಸಿ ಬಿ.ಜೆ. ಶ್ರೀನಿವಾಸ ಎಂಬುವರು 2025ರ ಫೆ.24ರ ಸಂಜೆ 4 ಗಂಟೆಯಿಂದ ನಾಪತ್ತೆಯಾಗಿದ್ದಾರೆ. ಇವರ ಸುಳಿವು ಪತ್ತೆಯಾದಲ್ಲಿ ಆಲನಹಳ್ಳಿ ಪೊಲೀಸ್ ಠಾಣೆ (0821–2418311) ಅಥವಾ ಮೊ.6363159279/8951072067ಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.03.2025 ಗುರುವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025 ರಿಂದ 16.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಶ್ರೀ ಕ್ಷೇತ್ರ ದಂಡಿನಮಾರಮ್ಮ ದೇವಸ್ಥಾನ :** ಶ್ರೀ ಮನೆ ಮಂಚಮ್ಮ, ದಂಡಿನಮಾರಮ್ಮ ಮತ್ತು ಬಿಸಿಲುಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ, ಕನ್ನಡ ವಿಭಾಗ, ಐಕ್ಯೂಎಸಿ:** ಸರಣಿ ಉಪನ್ಯಾಸ ಮಾಲಿಕೆ, ಅಲ್ಲಮನ ವಚನಗಳ ಚಿಂತನೆ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ, ಪ್ರೊ. ಎನ್.ಎಂ.ತಳವಾರ ಅವರಿಂದ ದೇವರದಾಸಿಮಯ್ಯ ಅವರ ವಚನ ಚಿಂತನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ.ಪುಟ್ಟರಾಜ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಬೆಳಗ್ಗೆ 11ಕ್ಕೆ.


■ **ಯುವರಾಜ ಕಾಲೇಜು, ಐಕ್ಯೂಎಸಿ ಮತ್ತು ವಿಜ್ಞಾನ ವೇದಿಕೆ:** ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಜೀವನ ವಿಧಾನವಾಗಿ ವಿಜ್ಞಾನ: ಯುವಕರ ಒಳಗೊಳ್ಳುವಿಕೆ ಕುರಿತು ಡಾ.ಎಸ್.ಶಿಶುಪಾಲ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಮಹದೇವಮೂರ್ತಿ, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ಮಧ್ಯಾಹ್ನ 12 ರಿಂದ ಹರಿಕಥಾ, ಕಥಾ ಕೀರ್ತನ ಕಾರ್ಯಕ್ರಮ, ರಾಘವೇಂದ್ರ ಪಟ್ಟಾಭಿಷೇಕ ವೈಭವ, ಮುಖ್ಯ ಅತಿಥಿಗಳು : ಕಲಾಪೋಷಕ ಶ್ರೀ ಎಂ.ಎಸ್. ರಾಘವೇಂದ್ರಾಚಾರ್, ಹರಿಕಥಾ ವಿದುಷಿ ಡಾ. ಮಾಲಿನಿ, ಸನ್ಮಾನಿತರು : ಎಂ.ಎಸ್. ರಾಘವೇಂದ್ರ, ಸ್ಥಳ: ರಾಘವೇಂದ್ರ ಆಚಾರ್ ಎಂ.ಎಸ್. ಸಭಾಂಗಣ, ರಾಮಾನುಜ ರಸ್ತೆ.

■ **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯರಥಾರೋಹಣ ಮಹೋತ್ಸವ, ರಾತ್ರಿ ಅಂಕುರಾರ್ಪಣೆ, ಸ್ಥಳ: ದೇವಸ್ಥಾನ, ಹಳೇ ಸಂತೇಪೇಟೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಪರೀಕ್ಷಾ ಸುಧಾರಣೆಗಳು ಕುರಿತು ಕಾರ್ಯಾಗಾರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಡಾ. ಎನ್. ನಾಗರಾಜ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಸಚಿವ ಡಾ. ಹೆಚ್. ವಿಶ್ವನಾಥ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ : ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಪಿ.ಸುರಭಿ, ದೀಪಿಕಾ ಪಾಂಡುರಂಗಿ, ಅಂಬಯ್ಯನುಲಿ, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.35–ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು, 2.40 ಉರ್ದು ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ಸಂಧ್ಯಾರಾಗ–ಹಿರಿಯ ಚುಕ್ಕಿ ಚಿತ್ರ ಕಲಾವಿದರಾದ ಮೋಹನ ವರ್ಗೀಕರ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಜಿ.ಶಾಂತಕುಮಾರ್, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಜೋಳ ಹಾಗೂ ಭತ್ತದ ಬೇಸಾಯ ಹಂಚಿಬಾಲಂಗಿ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಯೋಗೇಂದ್ರಪ್ಪಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಂಬಂಧವಾಗಿ ಯುವಜನರಿಗೆ ಸ್ಫೂರ್ತಿ ನೀಡುವ ಸಾಧಕ ಮಹಿಳೆಯರು ಕುರಿತು ಮಾತುಕತೆ, ಭಾಗವಹಿಸುತ್ತಾರೆ–ಮೈಸೂರಿನ ಎಂಎಂಕೆ–ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಾದ ನಿಸರ್ಗ ಮಹೇಶ್, ರಚನಾ, ಮುಕ್ತಾ ಜೈನ್ ಮತ್ತು ಪ್ರೀತಾಶ್ರೀ ಎನ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಪ್ರಾದೇಶಿಕ ಲಘು ಹಾಗೂ ಜನಪದ ಸಂಗೀತ ರಾಷ್ಟ್ರೀಯ ಕಾರ್ಯಕ್ರಮ, ಅನುರಾಧಾ ಕುಬೇರ್–ಲೈಟ್ ಮರಾಠಿ. ಚಂದನ್ ದಾಸ್ – ಗಜಲ್, 10.30 ಸವಿನೆನಪು


ಸ್ವಾಮಿ ವಿವೇಕಾನಂದರ ಸಮಾಜಸೇವೆ ಪರಿಕಲ್ಪನೆ ಅತ್ಯಂತ ವಿಶಾಲ

● ವಿವೇಕ ವಿದ್ಯಾವಾಹಿನಿ ಟ್ರಸ್ಟ್ ಸಂಸ್ಥಾಪಕ ನಿತ್ಯಾನಂದ ವಿವೇಕವಂಶಿ ಅಭಿಮತ ● ಸ್ವಾಮಿ ಶಾಂಭವಾನಂದಜೀ ಸ್ಮರಣಾರ್ಥ ಉಪನ್ಯಾಸ

ಮೈಸೂರು,ಮಾ.5(ಪಿಎಂ)– ಸ್ವಾಮಿ ವಿವೇಕಾನಂದರ ಸಮಾಜ ಸೇವೆಯ ಪರಿಕಲ್ಪನೆ ಅತ್ಯಂತ ವಿಶಾಲವಾದುದು. ಅವರ ಮೂಲಭೂತ ಗುಣವೇ ಸಮಾಜ ಸೇವೆಯಾಗಿದ್ದು, ಅವರಿಗೆ ತ್ಯಾಗ ಮನೋಭಾವ ಬಾಲ್ಯದಿಂದಲೇ ಬಂದಿತ್ತು ಎಂದು ವಿವೇಕ ವಿದ್ಯಾವಾಹಿನಿ ಟ್ರಸ್ಟ್ ಸಂಸ್ಥಾಪಕ ನಿತ್ಯಾನಂದ ವಿವೇಕವಂಶಿ ಹೇಳಿದರು.

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ವಾರ್ಷಿಕೋತ್ಸವ ಹಾಗೂ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 190ನೇ ಜನ್ಮ ದಿನೋತ್ಸವದ ಪ್ರಯುಕ್ತ ಆಶ್ರಮದ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ವಾಮಿ ಶಾಂಭವಾನಂದಜೀ ಸ್ಮರಣಾರ್ಥದ ಉಪನ್ಯಾಸದಲ್ಲಿ 'ಸಮಾಜ ಸೇವೆ ಕುರಿತಾದ ಸ್ವಾಮಿ ವಿವೇಕಾನಂದರ ಪರಿಕಲ್ಪನೆಗಳು' ಕುರಿತು ಅವರು ಮಾತನಾಡಿದರು. ಬಾಲ್ಯದಲ್ಲಿ ನರೇಂದ್ರನಾಗಿದ್ದ ವಿವೇಕಾನಂದರು ತಮ್ಮ ಮನೆಯಲ್ಲಿ ಯಾವುದೇ ಕಾರ್ಯಕ್ರಮವಾದರೂ ದಾನ ಕೊಡುವ ಪರಿಪಾಠ ಹೊಂದಿದ್ದರು. ಅವರ ತಂದೆಯವರಿಗೂ ಅದೇ ಗುಣ ಇದ್ದಿತು. ಅವರ ತಾತಾ ಸಹ ಆಧ್ಯಾತ್ಮಿಕ ಜೀವನದಲ್ಲಿ ಒಲವು ಹೊಂದಿ ಇಡೀ ಜೀವನವನ್ನು ತ್ಯಾಗ ಮಾಡಿದ್ದರು. ಹೀಗಾಗಿ ಇಂತಹ ಪರಂಪರೆಯಿಂದ ಬಂದ ವಿವೇಕಾನಂದರು ಸಹ ಸೇವಾ ಮನೋಭಾವ ಬೆಳೆಸಿಕೊಂಡರು ಎಂದರು.

ಅವರ ತಾಯಿ ಮಹಾಸಾಧ್ವಿ. ಸದಾ ಕಾಲ ಉಪವಾಸ, ಪೂಜೆ ಕೈಂಕರ್ಯದಲ್ಲಿ ಅವರು ನಿರತರಾಗಿರುತ್ತಿದ್ದರು. ಇಂತಹ ಕೌಟುಂಬಿಕ ಹಿನ್ನೆಲೆಯಲ್ಲಿ ಬಂದ ವಿವೇಕಾನಂದರಿಗೆ ದಾನ ಮಾಡುವ ಪ್ರವೃತ್ತಿ ಸಹಜವಾಗಿಯೇ ಬಂದಿತ್ತು. ಅವರು ದೊಡ್ಡವರಾದ ಮೇಲೆ ರಾಮಕೃಷ್ಣ ಪರಮಹಂಸರ ಸಾನ್ನಿಧ್ಯಕ್ಕೆ ಬಂದು ಅವರಿಂದ ಸನ್ಯಾಸ ಸ್ವೀಕರಿಸಿ ಇಡೀ ದೇಶವನ್ನು ಪರ್ಯಟನೆ ಮಾಡಿದರು. ಈ ವೇಳೆ ಅವರ ಸಮಾಜ ಸೇವೆ ಪರಿಕಲ್ಪನೆ ಅತ್ಯಂತ ಸ್ಪಷ್ಟರೂಪದೊಂದಿಗೆ ವಿಶಾಲತೆ ಪಡೆಯಿತು ಎಂದು ತಿಳಿಸಿದರು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಬುಧವಾರ ವಿವೇಕ ವಿದ್ಯಾವಾಹಿನಿ ಟ್ರಸ್ಟ್ ಸಂಸ್ಥಾಪಕ ನಿತ್ಯಾನಂದ ವಿವೇಕವಂಶಿ ಮಾತನಾಡಿದರು. ಮತ್ತೊಂದು ಚಿತ್ರದಲ್ಲಿ ಸ್ವಾಮಿ ಶಾಂಭವಾನಂದಜೀ ಕುರಿತು ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ನಿವೃತ್ತ ಪ್ರಾಂಶುಪಾಲ ಎಸ್.ಬಾಲಾಜಿ ಮಾತನಾಡುತ್ತಿರುವುದನ್ನು ಕಾಣಬಹುದು.

ಸೇವೆಗೆ ಮತ್ತೊಂದು ಹೆಸರೇ ಶಾಂಭವಾನಂದಜೀ: ಸ್ವಾಮಿ ಶಾಂಭವಾನಂದಜೀ ಅವರ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ನಿವೃತ್ತ ಪ್ರಾಂಶುಪಾಲ ಎಸ್.ಬಾಲಾಜಿ, ಸೇವೆ ಮತ್ತು ಶಿಸ್ತಿಗೆ ಮತ್ತೊಂದು ಹೆಸರೇ ಸ್ವಾಮಿ ಶಾಂಭವಾನಂದಜೀ. ಕೊಡಗು ಜಿಲ್ಲೆಯ ಹಾಲುಗುಂದ ಗ್ರಾಮದ ತೇಲಪಂಡ ಕುಟುಂಬದ ಮುತ್ತಣ್ಣ ಮತ್ತು ಚಿನ್ನವ್ವ ದಂಪತಿ ಸುಪುತ್ರನೇ ಚೆಂಗಪ್ಪ. ಇವರು ಮುಂದೆ ಬೆಳೆದು ಸನ್ಯಾಸ ಸ್ವೀಕರಿಸಿ ಸ್ವಾಮಿ ಶಾಂಭವಾನಂದಜೀ ಆದರು ಎಂದು ಸ್ಮರಿಸಿದರು.

ಸೇವಾ ಕ್ಷೇತ್ರವನ್ನೇ ಕಾರ್ಯಕ್ಷೇತ್ರ ಮಾಡಿಕೊಂಡ ಸ್ವಾಮಿ ಶಾಂಭವಾನಂದಜೀ, 1941ರಲ್ಲಿ ಮೈಸೂರಿಗೆ ಆಗಮಿಸಿ, 1972ರ ವರೆಗೆ ವಿಜೃಂಭಿಸುತ್ತಾರೆ. ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಇತಿಹಾಸವನ್ನು ಸುವರ್ಣಾಕ್ಷರದಲ್ಲಿ ಬರೆಯುವಂತಹ ಸಾಧನೆ ಮಾಡಿದರು. ಶ್ರೀರಾಮಕೃಷ್ಣ ವಿದ್ಯಾಶಾಲೆ ಹಾಗೂ ಶ್ರೀ ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಬೆಳೆಸಿದ ಸಂತ ಸ್ವಾಮಿ ಶಾಂಭವಾನಂದಜೀ ಮಹಾರಾಜ್. ರಾಮಕೃಷ್ಣ ವಿದ್ಯಾಶಾಲೆಗೆ 73 ವರ್ಷಗಳಾಗಿದ್ದು, ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಗೆ 50 ವರ್ಷಗಳಾಗಿವೆ. ನಮ್ಮ ಆಶ್ರಮಕ್ಕೆ ಕೆಲವೇ ತಿಂಗಳಲ್ಲಿ ಶತಮಾನೋತ್ಸವ ಬರುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

53 ವರ್ಷಗಳ ಹಿಂದೆ ಇಹಲೋಕ ತ್ಯಜಿಸಿದ ಸ್ವಾಮಿ ಶಾಂಭವಾನಂದಜೀ ಅವರು ತಮ್ಮ ವಿಚಾರಧಾರೆ ಮತ್ತು ಸೇವಾ ಕಾರ್ಯಗಳ ಮೂಲಕ ಇಂದಿಗೂ ನಮ್ಮ ನಡುವೆ ಇದ್ದಾರೆ. ನಾನು ವಿದ್ಯಾಶಾಲೆಯ ಶಿಕ್ಷಕನಾಗಿ ಕಾರ್ಯನಿರ್ವಹಿಸುವ ವೇಳೆ ಅಲ್ಲಿಯ ಸುವ್ಯವಸ್ಥಿತ ವಾತಾವರಣದಲ್ಲಿ ಸ್ವಾಮಿ ಶಾಂಭವಾನಂದಜೀ ಅವರ ಕೊಡುಗೆ ಹಾಗೂ ಸೇವಾ ಕಾರ್ಯಗಳನ್ನು ಅರಿತೆನು. ನೇರವಾಗಿ ಆ ಪೂಜ್ಯರ ಮಾರ್ಗದರ್ಶನ ಪಡೆದವರು ನಿಜಕ್ಕೂ ಭಾಗ್ಯವಂತರು ಎಂದರು.

ಶಾಂಭವಾನಂದಜೀ ಅವರು ಆತ್ಮವಿಶ್ವಾಸದ ಪ್ರತೀಕ. ಅವರ ಪ್ರಭಾವಕ್ಕೆ ಒಳಗಾಗದವರು ಉನ್ನತ ವ್ಯಕ್ತಿತ್ವ ರೂಪಿಸಿಕೊಂಡರು. ಪೂಜ್ಯರದ್ದು ಬಹುಮುಖ ಪ್ರತಿಭೆಯಾಗಿತ್ತು. ಶಿಕ್ಷಣ ತಜ್ಞರಾಗಿದ್ದ ಅವರು ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಮಕ್ಕಳಿಗೆ ಕೌಶಲ ಮತ್ತು ಮೌಲ್ಯ ಎರಡೂ ಶಿಕ್ಷಣದಲ್ಲಿ ದೊರೆಯುವಂತೆ ಮಾಡಿದರು. ಆ ಮೂಲಕ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಕಾರಣರಾದರು. ಜೊತೆಗೆ ಸೇವಾ ಮನೋಭಾವ ಬೆಳೆಸುವ ಶಿಕ್ಷಣ ವಿಧಾನ ರೂಪಿಸಿದರು. ಅವರು ತಮ್ಮ ಸೇವೆ, ಕೊಡುಗೆ ಮತ್ತು ಪ್ರಖರ ಚಿಂತನೆಗಳ ಮೂಲಕ ಇಂದಿಗೂ ಸಮಾಜಕ್ಕೆ ಪ್ರಸ್ತುತವಾಗಿದ್ದಾರೆ ಎಂದು ಹೇಳಿದರು. ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಸೇರಿದಂತೆ ಭಕ್ತರು ಹಾಜರಿದ್ದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಾಳೆ ವಿವಿಧ ಸ್ಪರ್ಧೆಗಳ ಆಯೋಜನೆ

ಮೈಸೂರು, ಮಾ.5–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಾಮುಂಡಿ ವಿಹಾರ ಕ್ರೀಡಾಂಗಣ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವು ಸಹ ಅಂತಾರಾಷ್ಟ್ರೀಯ ಮಹಿಳಾ ದಿವವನ್ನು ಮಾ.8 ರಂದು ಆಚರಣೆ ಮಾಡಲಾಗು ತ್ತಿದ್ದು, ಈ ಸಂಬಂಧ ಮಾರ್ಚ್ 7ರಂದು 18 ವರ್ಷ ಮೇಲ್ಪಟ್ಟ ಮಹಿಳೆಯರಿಗಾಗಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ಇಲ್ಲಿ ಆಯೋಜಿಸಲಾಗಿದ್ದು, ಈ ಕೆಳಕಂಡ ಕ್ರೀಡೆಗಳನ್ನು ನಡೆಸಲು ತೀರ್ಮಾನಿಸಲಾಗಿರುತ್ತದೆ.

ಶೂಟ್ ಇನ್ ದಿ ಬಾಸ್ಕೆಟ್(ಬಾಸ್ಕೆಟ್ ಬಾಲ್), ಡ್ರಿಬ್ಲಿಂಗ್‌ರೇಸ್ (ಬಾಸ್ಕೆಟ್‌ಬಾಲ್), ಪೆನಾಲ್ಟಿ ಶೂಟ್ (ಹಾಕಿ), ಮ್ಯೂಸಿಕಲ್ ಛೇರ್, ಹಗ್ಗ–ಜಗ್ಗಾಟ, ಲೆಮನ್ &ಸ್ಪೂನ್ ಮೇಲ್ಕಂಡ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಮೆಡಲ್ಸ್ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು. ಸದರಿ ಕ್ರೀಡಾಕೂಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಮೈಸೂರು ದೂ.0821–2564179

ಭಕ್ತಿ–ಭಾವದ ಶ್ರೀ ಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ



ಶ್ರೀ ಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ ಪ್ರಯುಕ್ತ ಬುಧವಾರ ಮಾಕನಹುಂಡಿ ಗ್ರಾಮದಲ್ಲಿ ದೇವರ ಮೆರವಣಿಗೆ ನಡೆಯಿತು.

ಮೈಸೂರು, ಮಾ.5(ಎಸ್‌ಪಿಎನ್)– ತಾಲೂಕಿನ ಮಾಕನಹುಂಡಿ ಗ್ರಾಮದಲ್ಲಿ ಶ್ರೀ ಶನೈಶ್ಚರಸ್ವಾಮಿ 57ನೇ ವರ್ಷದ ಆರಾಧನಾ ಮಹೋತ್ಸವ ಬುಧವಾರ ಭಕ್ತಿ–ಭಾವದಿಂದ ಜರುಗಿತು.

ಬೆಳಗ್ಗೆ ದೇವಸ್ಥಾನದಲ್ಲಿ ಹೋಮ–ಹವನದೊಂದಿಗೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ಮಧ್ಯಾಹ್ನ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀ ಶನೇಶ್ವರಸ್ವಾಮಿ ಮೂರ್ತಿ ಮೆರವಣಿಗೆ ನಡೆಯಿತು. ವಿವಿಧ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರುಗು ನೀಡಿದವು. ಆರಾಧನಾ ಮಹೋತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ವಿವಿಧ ಪುಷ್ಪಗಳಿಂದ ಅಲಂಕೃತಗೊಳಿಸಲಾಗಿತ್ತು.

ಚಿಕ್ಕೇಗೌಡನಹುಂಡಿ, ಹೊಸಹುಂಡಿ, ಹಡಜನ, ಮಾರಶೆಟ್ಟಹಳ್ಳಿ, ಜಂತಗಳ್ಳಿ, ರಾಯನಹುಂಡಿ, ಕಡಕೊಳ, ದಡದಹಳ್ಳಿ, ಮಂಡಕಳ್ಳಿ, ಹಳ್ಳಿದಿಡ್ಡಿ, ಬೀರೇಗೌಡನ ಹುಂಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶನೇಶ್ವರ ಸ್ವಾಮಿ ಕೃಪೆಗೆ ಪಾತ್ರ ರಾದರು. ಈ ವೇಳೆ ವಿವಿಧೆಡೆಯಿಂದ ಆಗಮಿಸಿದ್ದ ಸಹಸ್ರಾರು ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಗುಡ್ಡಪ್ಪ ಲೇ.ಪುಟ್ಟಸ್ವಾಮಿ ಅವರ ಪುತ್ರ ಗುಡ್ಡಪ್ಪ ರವಿಕುಮಾರ್ ಸಕಲ ಧಾರ್ಮಿಕ ವಿಧಿ–ವಿಧಾನಗಳೊಂದಿಗೆ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಈ ಕಾರ್ಯಕ್ಕೆ ರವಿ, ರಾಮು ಹಾಗೂ ಗ್ರಾಮಸ್ಥರು ಸಾಥ್ ನೀಡಿದರು. ಸಂಜೆ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ದೀಪೋತ್ಸವ, ಬಾಣ ಬಿರುಸಿನೊಂದಿಗೆ ಪಟಾಕಿಗಳನ್ನು ಸಿಡಿಸಲಾಯಿತು. ರಾತ್ರಿ ಹರಿಕಥೆ ಕಾರ್ಯಕ್ರಮ ನಡೆಯಿತು.

ನಕ್ಕರೆ ಅದೇ ಸ್ವರ್ಗ

ನನ್ನ ಸ್ನೇಹಿತೆ ಮದುವೆಗಿಂತ ಮೊದಲು ಅವಳ ಹುಡುಗನನ್ನು ಸಿಂಹ ಅಂತ ಕರೀತಿದ್ಲು..

ಮದುವೆ ಆದ ಮೇಲೆ ನಾನು ಫೋನ್ ಮಾಡಿ ಕೇಳಿದೆ. ಈಗ ಸಿಂಹ ಏನು ಮಾಡುತ್ತಿದೆ ಅಂತ..!

ಅವಳು ಸಿಂಹ ಬೆಳ್ಳುಳ್ಳಿ ಸುಲಿಯುತ್ತಾ ಇದೆ ಅಂದ್ಲು

ಮೈಸೂರು ಮಿತ್ರ

ಗುರುವಾರ, 6 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಒಳ್ಳೆಯ ಸಂಬಂಧಗಳನ್ನು ಪ್ರೀತಿ ಕೊಟ್ಟು ಉಳಿಸಿಕೊಳ್ಳಿ, ಕೆಟ್ಟ ಸಂಬಂಧಗಳನ್ನು ಮೌನವಾಗಿದ್ದು ಕಳೆದುಕೊಳ್ಳಿ– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರೆಲ್ಲ ದೋಚಿಕೊಂಡು ಹೋದ ಮೇಲೆ ಕೋಟೆ ಬಾಗಿಲು ಹಾಕಿದರಂತೆ

ನಿಮ್ಮ ಪತ್ರಗಳು

■ ಸದನದಲ್ಲಿ ಶಾಸಕರ ನಡೆ ಆದರ್ಶಪ್ರಾಯವಾಗಿರಲಿ

ಮಾನ್ಯರೆ,

ಉತ್ತರಪ್ರದೇಶದ ವಿಧಾನಸಭೆಯ ಮುಖ್ಯ ಸಭಾಂಗಣದ ಪ್ರವೇಶದ್ವಾರದಲ್ಲಿ ಸದಸ್ಯರೊಬ್ಬರು ಕಾರ್ಪೆಟ್ ಮೇಲೆ ಪಾನ್ ಮಸಾಲ ಉಗುಳಿದ್ದಕ್ಕೆ ಸ್ಪೀಕರ್ ಸತೀಶ್ ಮಹಾನಾ ಆಕ್ಷೇಪ ವ್ಯಕ್ತಪಡಿಸಿ, ಸದನದ ಘನತೆಯನ್ನು ಪ್ರತಿಯೊಬ್ಬ ಸದಸ್ಯರು ಕಾಪಾಡಿಕೊಳ್ಳಬೇಕೆಂದು ಶಿಸ್ತಿನ ಪಾಠ ಬೋಧಿಸಿ ತಿಳಿ ಹೇಳಿರುವುದು ಮಾಧ್ಯಮಗಳಲ್ಲಿ ವರದಿ ಆಗಿದೆ. ಅಲ್ಲದೇ ಆ ಸದಸ್ಯ ಯಾರೆಂದು ನನಗೆ ತಿಳಿದಿದೆ. ವಿಡಿಯೊ ಲಭ್ಯವಿದೆ. ಆದರೆ ನಾನು ಯಾರನ್ನೂ ಅವಮಾನಿಸುವ ಉದ್ದೇಶ ಹೊಂದಿಲ್ಲವಾದ್ದರಿಂದ ಸಾರ್ವಜನಿಕವಾಗಿ ಹೆಸರು ಹೇಳಲು ಬಯಸುವುದಿಲ್ಲ. ಹಾಗೆ ಮಾಡಿದ ಸದಸ್ಯರು ನನ್ನನ್ನು ಭೇಟಿಯಾಗಬೇಕು, ಇಲ್ಲದಿದ್ದರೆ ನಾನು ಅವರನ್ನು ಕರೆಸುವಂತೆ ಒತ್ತಾಯಿಸಲಾಗುತ್ತದೆ ಎಂಬ ಖಡಕ್ ಎಚ್ಚರಿಕೆಯ ಕ್ರಮ ಕೂಡ ಶ್ಲಾಘನೀಯ.

ಪವಿತ್ರವಾದ ವಿಧಾನಸಭೆಯ ಮೊಗಸಾಲೆಯಲ್ಲಿ ಪಾನ್ ಮಸಾಲಾವನ್ನು ಜಗಿದು ಎಲ್ಲೆಂದರಲ್ಲಿ ಉಗಿಯುವುದು ಶಾಸಕರಿಗೆ ಶೋಭೆ ತರುವುದಿಲ್ಲ. ಇದಿಷ್ಟೇ ಅಲ್ಲ. ವಿಧಾನಸಭೆಯ ಕೆಲ ಸದಸ್ಯರು ಸದನದಲ್ಲಿಯೇ ಕೈ ಕೈ ಮಿಲಾಯಿಸುವುದು, ಬಟ್ಟೆ ಹರಿದುಕೊಂಡು ರಂಪಾಟ ಮಾಡುವುದು, ಇದನ್ನೆಲ್ಲಾ ತಡೆಯಲು ಬರುವ ಮಾರ್ಷಲ್‌ಗಳ ಮೇಲೆಯೇ ಕೈ ಎತ್ತುವುದು, ಸದನದಲ್ಲಿ ಹಾಳೆಗಳನ್ನು ಹರಿದು ಬಿಸಾಡುವುದು, ಅಶ್ಲೀಲ ವಿಡಿಯೋಗಳನ್ನು ವೀಕ್ಷಿಸುವುದು, ಇಷ್ಟು ಸಾಲದೆಂಬಂತೆ ಘನ ಸಭೆಗಳು ಸದನದಲ್ಲಿ ನಡೆಯುತ್ತಿರುವ ಸಮಯದಲ್ಲಿಯೇ ನಿದ್ದೆಗೆ ಜಾರಿ ಬಿಡುವುದು. ಈ ರೀತಿಯ ಹಲವು ಪ್ರಸಂಗ ಹಾಗೂ ಘಟನೆಗಳನ್ನು ನಾವು ನೀವುಗಳೆಲ್ಲರೂ ಮಾಧ್ಯಮಗಳಲ್ಲಿ ಕಣ್ಣಾರೆ ನೋಡಿದ್ದೇವೆ ಹಾಗೂ ಗಮನಿಸಿದ್ದೇವೆ!

ನಾಡಿನ ಕೋಟ್ಯಾಂತರ ಜನರು ವಿಧಾನಸಭೆಯ ಮೇಲೆ ತಮ್ಮದೇ ಆದ ಗೌರವ ಮತ್ತು ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೆ. ಈ ನಿಟ್ಟಿನಲ್ಲಿ ಸದನದ ಘನತೆಯನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ಶಾಸಕ, ಸದಸ್ಯರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ. ಒಬ್ಬ ಜನಪ್ರತಿನಿಧಿಗೆ ಇಡೀ ರಾಜ್ಯ ಹಾಗೂ ದೇಶವನ್ನು ಪ್ರಗತಿಪಥದತ್ತ ಕೊಂಡೊಯ್ಯುವ ಮಹತ್ತರವಾದ ಜವಾಬ್ದಾರಿ ಇರುತ್ತದೆ. ಹೀಗಿರುವಾಗ ಶಾಸಕರೇ ಈ ರೀತಿ ಅಶಿಸ್ತಿನಿಂದ ನಡೆದುಕೊಂಡರೆ ಹೇಗೆ? ಒಬ್ಬ ಉತ್ತಮ ಶಾಸಕ ರಾಜ್ಯದ ಜನತೆಗೆ ಮಾದರಿಯಾಗಬೇಕು. ಅಲ್ಲದೆ ಆತನ ನಡವಳಿಕೆಯು ಸದನದಲ್ಲಾಗಲಿ ಅಥವಾ ಹೊರಗಡೆಯಾಗಲಿ ಆದರ್ಶಪ್ರಾಯವಾಗಿರಬೇಕಿದ್ದು, ಶಾಸಕಾಂಗದ ಘನತೆಗೆ ಕುಂದುಂಟಾಗದಂತೆ ನಡೆದುಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಜನಪ್ರತಿನಿಧಿಗಳು ಆಲೋಚಿಸುವುದೊಳಿತು.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಬಜೆಟ್ ಮೇಲಿನ ವಿದ್ಯಾರ್ಥಿಗಳ ನಿರೀಕ್ಷೆ

ಮಾನ್ಯರೆ,

ಸರ್ಕಾರದ ಈ ಬಾರಿಯ ಬಜೆಟ್ ಮೇಲೆ ವಿದ್ಯಾರ್ಥಿ ಸಮೂಹವು ಬಹಳ ನಿರೀಕ್ಷೆ ಇಟ್ಟುಕೊಂಡಿದೆ. ಪ್ರತಿ ಜಿಲ್ಲೆಯಲ್ಲೂ ಹೊಸ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಬೇಕು. ಪದವಿ ವಿದ್ಯಾರ್ಥಿಗಳು ಮತ್ತು ವೃತ್ತಿಪರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಬೇಕು. ಸೈಕಲ್ ವಿತರಣೆ ಯೋಜನೆಯನ್ನು ಮರು ಜಾರಿಗೊಳಿಸಬೇಕು. ವಿದ್ಯಾಸಿರಿ, ವಿದ್ಯಾನಿಧಿಯಂತಹ ಯೋಜನೆಗಳಿಗೆ ಹೆಚ್ಚು ಅನುದಾನ ಮೀಸಲಿಡಬೇಕು. ಶಾಲಾ ಕಾಲೇಜುಗಳ ಪ್ರವೇಶ ಶುಲ್ಕ ಕಡಿಮೆಗೊಳಿಸಬೇಕು. ಸರ್ಕಾರಿ ಶಾಲೆಗಳನ್ನು ಪುನರ್ ನಿರ್ಮಿಸಬೇಕು ಮತ್ತು ಶಿಕ್ಷಕರ ಭರ್ತಿ ಮಾಡಬೇಕು. ಇವು ವಿದ್ಯಾರ್ಥಿಗಳ ಬೇಡಿಕೆ ಮತ್ತು ನಿರೀಕ್ಷೆ. –ಚೇತನ್ ಎನ್ ಆರ್, ನಗರ್ಲೆ, ನಂಜನಗೂಡು

■ ಬೀದಿದೀಪ ಅಳವಡಿಸಿ, ಅಪಘಾತ ತಪ್ಪಿಸಿ

ಮಾನ್ಯರೆ,

ದಕ್ಷಿಣ ಕಾಶಿ ಎಂದೇ ಖ್ಯಾತಿ ಪಡೆದಿರುವ ನಂಜನಗೂಡು ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಮುಂಭಾಗದಿಂದ ಚಾಮರಾಜನಗರಕ್ಕೆ ಹೋಗುವ ಹೆದ್ದಾರಿಯಲ್ಲಿ ಸುಮಾರು ಒಂದು ಕಿಲೋಮೀಟರ್‌ವರೆಗೂ ರಸ್ತೆಯಲ್ಲಿ ವಿದ್ಯುತ್ ದೀಪಗಳಿಲ್ಲದೆ, ಬರೀ ವಿದ್ಯುತ್ ಕಂಬಗಳು ನಿಂತಿವೆ. ಇದರಿಂದ ವಾಹನ ಸವಾರರಿಗೆ ರಾತ್ರಿಯ ವೇಳೆ ವಾಹನ ಚಲಾಯಿಸುವುದು ಕಷ್ಟವಾಗುತ್ತಿದೆ. ಈ ರಸ್ತೆಯಲ್ಲಿ ತಿರುವು ಇರುವುದರಿಂದ ಕೆಲವು ಸಮಯ ವೇಗವಾಗಿ ಬಂದಂತಹ ಹಲವಾರು ವಾಹನಗಳು ಹಾಗೆಯೇ ತಿರುಗುವುದರಿಂದ ಸಾರ್ವಜನಿಕರು ಸೇರಿ ಈ ಭಾಗದಲ್ಲಿ ವಾಸಿಸುವ ಜನರು ಕೂಡ ಭಯಭೀತರಾಗಿದ್ದಾರೆ. ಇಂತಹ ಕಷ್ಟದ ಸಮಯದಲ್ಲಿರುವಾಗ ರಾತ್ರಿವೇಳೆ ವಿದ್ಯುತ್ ದೀಪಗಳು ಇಲ್ಲದಿರುವುದು ಸರಿಯೇ?. ಹೀಗೆ ಮುಂದುವರೆದರೆ ಹತ್ತಿರವಿರುವ ಯುಗಾದಿ ಹಬ್ಬಕ್ಕೆ ಶ್ರೀ ನಂಜುಂಡೇಶ್ವರ ಸ್ವಾಮಿ ಸನ್ನಿಧಿಗೆ ಈ ರಸ್ತೆಯ ಮೂಲಕವೇ ಹೋಗಿ ದೇವರ ದರ್ಶನ ಪಡೆಯಲು ಹೆಚ್ಚಿನ ಭಕ್ತಾದಿಗಳು ಆಗಮಿಸುತ್ತಾರೆ. ಇಂತಹ ಸಮಯ ರಾತ್ರಿಯ ವೇಳೆಯಲ್ಲಿ ರಸ್ತೆಯಲ್ಲಿ ವಿದ್ಯುತ್ ದೀಪಗಳು ಇಲ್ಲದೆ ಹೋದರೆ ಈ ಸ್ಥಳದಲ್ಲಿ ಅಪಘಾತಗಳಾಗುವ ಸಂಭವ ಹೆಚ್ಚಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಮತ್ತು ನಂಜನಗೂಡು ಪಟ್ಟಣಕ್ಕೆ ಸೇರಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಮಂಡಳಿ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಈ ಕೂಡಲೇ ಸಮಸ್ಯೆ ಬಗೆಹರಿಸಿ, ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

■ ಹರ್ಷ ಬಾರ್ ಬಳಿ ಸಿಗ್ನಲ್ ಲೈಟ್ ಅಳವಡಿಸಿ

ಮಾನ್ಯರೆ,

ಮೈಸೂರು ನಗರದಲ್ಲಿ ಇತ್ತೀಚೆಗೆ ಹಲವಾರು ಸರ್ಕಲ್‌ಗಳಲ್ಲಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿದ್ದಾರೆ. ಆದರೆ ವಾಹನ ದಟ್ಟಣೆ ಹೆಚ್ಚು ಇರುವ ಕಡೆಗಳಲ್ಲಿ ಸಿಗ್ನಲ್ ಲೈಟ್ ಅಳವಡಿಸಿಲ್ಲ. ಉದಾಹರಣೆಗೆ ಬೋಗಾದಿ ಮುಖ್ಯ ರಸ್ತೆಯ ಹರ್ಷ ಬಾರ್ ಬಳಿ ಬೆಳಗ್ಗೆಯಿಂದ ರಾತ್ರಿವರೆಗೂ ವಾಹನ ಸಂಚಾರ ದಟ್ಟಣೆ ಇರುತ್ತದೆ. ಈ ಸರ್ಕಲ್ ಮೈಸೂರು ನಗರಕ್ಕೆ, ವಿಜಯನಗರ, ಟಿ.ಕೆ.ಲೇಔಟ್ ಮತ್ತು ಬೋಗಾದಿ–ಗದ್ದಿಗೆಗೆ ಈ ಸರ್ಕಲ್ ಮೂಲಕವೇ ಸಂಚರಿಸಬೇಕು. ಈ ಸರ್ಕಲ್ ಬಳಿ ಪ್ರತಿ ದಿನ ಒಂದಿಲ್ಲೊಂದು ರಸ್ತೆ ಅಪಘಾತಗಳು ಸಂಭವಿಸುತ್ತಲೇ ಇದ್ದರೂ ಇಲ್ಲಿ ಸಿಗ್ನಲ್ ಲೈಟ್ ಅಳವಡಿಸಿರುವುದಿಲ್ಲ. ಸಂಚಾರ ಪೊಲೀಸರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಮೈಸೂರು



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ


ಕನ್ನಡ ಸಾಹಿತ್ಯದ ಕೋಲ್ಮಿಂಚು ಕೊಡಗಿನ ಗೌರಮ್ಮ



ಕೊಡಗಿನ ಗೌರಮ್ಮ



ತ್ರಿವೇಣಿ



ಮಹಾತ್ಮ ಗಾಂಧೀಜಿ



ಕೂಡಕಂಡಿ ಓಂ ಶ್ರೀ ದಯಾನಂದ

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಲೇಖಕಿಯರು ತಮ್ಮ ಅನನ್ಯ ಕೊಡುಗೆಯ ಮೂಲಕ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವುದು ಮಾತ್ರವಲ್ಲ. ಅವಜ್ಞೆಗೆ ಒಳಗಾಗಿದ್ದ ಸ್ತ್ರೀಲೋಕದ ತುಮುಲಗಳನ್ನು ಸಾರ್ವತ್ರಿಕವಾಗಿ ದಾಖಲಿಸಿ, ತಮ್ಮ ವ್ಯಕ್ತಿತ್ವದ ವೈವಿಧ್ಯಮಯ ಆಯಾಮಗಳನ್ನು ಎಲ್ಲರಿಗೂ ತಿಳಿಯಪಡಿಸಿದ್ದಾರೆ.

ಕನ್ನಡದ ಜನಪ್ರಿಯ ಲೇಖಕಿಯರ ಸುಂದರ ಸಮಾಗಮದ ಬಗ್ಗೆ ಕಳೆದ ಬಾರಿ ಬರೆದಿದ್ದೆ. ಈಗ ಮಹಿಳಾ ದಿನಾಚರಣೆಯ ಹೊಸ್ತಿಲಲ್ಲಿರುವಾಗ, ಕನ್ನಡ ಮಹಿಳಾ ಸಾಹಿತ್ಯದ ಆರಂಭಿಕ ದಿನಗಳಲ್ಲಿ ಹೊಸತೊಂದು ಆಶಾಭಾವ ಮೂಡಿಸಿ, ಮಿಂಚಿ ಮರೆಯಾದ ಲೇಖಕಿಯ ಹುಟ್ಟಿದ ದಿನ ಬರುವುದು ಅವರನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಲು ಸುಸಂದರ್ಭ ಎಂದೇ ಹೇಳಬೇಕು.

ಮಾರ್ಚ್ 5 ಕೊಡಗಿನ ಗೌರಮ್ಮ ಅವರ ಹುಟ್ಟಿದ ದಿನ. ಕೇವಲ 27 ವರ್ಷಗಳ ಕಾಲ ಬದುಕಿದ್ದ ಅಲ್ಪಾಯುಷಿ ಗೌರಮ್ಮನವರು ತಮ್ಮ ಅಲ್ಪ ಕಾಲದಲ್ಲಿಯೇ ಸಾಹಿತ್ಯ ಲೋಕದಲ್ಲಿ ಮೂಡಿಸಿದ ಸಂಚಲನ ಅದ್ಭುತವಾದದ್ದು, ಅನನ್ಯವಾದದ್ದು. ಅಂತಾರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಅಂತಹ ಅಪರೂಪದ ಲೇಖಕಿಯನ್ನು ನೆನೆಯುವುದು ಪುಣ್ಯವೇ ಸರಿ.

ತ್ರಿವೇಣಿ ಅವರಂತೆಯೇ ಕೊಡಗಿನ ಗೌರಮ್ಮರ ಜೀವಿತಾವಧಿ ಅತ್ಯಲ್ಪ. ತ್ರಿವೇಣಿ ಅವರ ಬರಹಗಳನ್ನು ಈಗಲೂ ನಾವು ಮತ್ತೆ ಮತ್ತೆ ಓದುವ ಸಂದರ್ಭ ಬಂದಾಗಲೆಲ್ಲಾ ಅವರ ದುರ್ಮರಣದ ಬಗ್ಗೆ ಮರುಗದೇ ಇರಲಾಗುವುದಿಲ್ಲ. ಅವರು ತಮ್ಮ ಪೂರ್ಣ ಆಯುಸ್ಸನ್ನು ಕಳೆದಿದ್ದರೆ ಕನ್ನಡ ಸಾಹಿತ್ಯಕ್ಕೆ ಅದೆಂತಹ ಮಹತ್ತಾದ ಕೊಡುಗೆಗಳನ್ನು ನೀಡುತ್ತಿದ್ದರೋ ಎಂಬ ಉದ್ಗಾರ ನಮ್ಮ ಬಾಯಿಂದ ಬರದೇ ಇರುವುದಕ್ಕೆ ಸಾಧ್ಯವೇ ಇಲ್ಲ. ಅಷ್ಟರಮಟ್ಟಿಗೆ ತ್ರಿವೇಣಿ ಅವರು ತಮ್ಮೆಲ್ಲ ಓದುಗರಿಗೆ ಹತ್ತಿರವಾಗಿದ್ದರು, ಆಪ್ತರೆನಿಸಿದ್ದರು.

ತ್ರಿವೇಣಿ ಅವರು ಹುಟ್ಟಿದಾಗ ಗೌರಮ್ಮನವರಿಗೆ 16 ವರ್ಷಗಳು, ಗೌರಮ್ಮನವರು ನಿಧನರಾದಾಗ ತ್ರಿವೇಣಿ ಅವರಿಗೆ 11 ವರ್ಷಗಳು. ಕೇವಲ ಒಂದೂವರೆ ದಶಕದ ಸುಮಾರಿನ ಅವಧಿಯಲ್ಲಿ ಇಬ್ಬರು ಧ್ರುವತಾರೆಗಳಂತಹ ಲೇಖಕಿಯರು ಒಟ್ಟಿಗೇ ಜೀವಿಸಿದ್ದರು ಎಂಬುದೇ ಪುಳಕ ತರುವ ವಿಷಯ. ಇಬ್ಬರೂ ತಮ್ಮ ಪೂರ್ಣ ಕೊಡುಗೆಯನ್ನು ನೀಡುವಂತಾಗಿದ್ದರೆ ಎಂದು ಎಂತಹಾ ಸಾಹಿತ್ಯ ಪ್ರೇಮಿಗೂ ಅನಿಸದೇ ಇರಲಾರದು.

ತ್ರಿವೇಣಿಯವರು ಬಿಎಂಶ್ರೀ, ವಾಣಿ ಅವರಂತಹ ದಿಗ್ಗಜರ ಕುಟುಂಬದಲ್ಲಿ ಜನಿಸಿ ಅದೇ ಪರಂಪರೆಯನ್ನು ಮುಂದುವರೆಸಿದರೆ, ಕೊಡಗಿನ ಗೌರಮ್ಮನವರು ಅಂತಹ ಯಾವುದೇ ಹಿನ್ನೆಲೆಯಿರದ ಕುಟುಂಬದಲ್ಲಿ ಹುಟ್ಟಿದವರು. ಕೊನೆಯ ಮಗುವಾಗಿ ಜನಿಸಿದ ಗೌರಮ್ಮನವರದು ಸ್ಫಟಿಕದಂತಹ ವ್ಯಕ್ತಿತ್ವ. ಹೆಣ್ಣುಮಕ್ಕಳಿಗೆ ಶಿಕ್ಷಣವೆಂಬುದು ನನಸಾಗದ ಕಾಲದಲ್ಲಿ ಕಾನ್ವೆಂಟಿನಲ್ಲಿಯೇ ಓದುತ್ತೇನೆಂದ ಅವರ ಹಠವನ್ನು ಪ್ರೀತಿಯಿಂದ ಮನ್ನಿಸಿದವರು ಅವರ ತಂದೆ. ದೂರದ ಕಾಶೀಯಾತ್ರೆಗೆ ಹೊರಟಾಗಲೂ ಬೆಂಬಿಡದ 6 ವರ್ಷದ ಪುಟ್ಟ ಬಾಲಕಿಯನ್ನು ಜೊತೆಯಲ್ಲಿ ಒಯ್ದ ಗೌರಮ್ಮನವರ ತಂದೆ ಎನ್.ಎಸ್.ರಾಮಯ್ಯ ಅವರು ವಕೀಲರಷ್ಟೇ ಅಲ್ಲದೆ ಕಾಫಿ ಪ್ಲಾಂಟರ್ ಆಗಿದ್ದರು. ಕಾಶೀಯಾತ್ರೆಯ ಸಮಯದಲ್ಲಿಯೇ ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿಯನ್ನು ಕಳೆದುಕೊಂಡ ಗೌರಮ್ಮನವರು ತಾವೂ ಕಾಶಿಯ ಜನಜಂಗುಳಿಯಲ್ಲಿ ಸಿಲುಕಿ, ಕಣ್ಮರೆಯಾಗುವುದರಲ್ಲಿದ್ದರು. ಹೇಗೋ ಮತ್ತೆ ತಂದೆಯ ಮಡಿಲು ಸೇರಿದ ಗೌರಮ್ಮನವರಿಗೆ ತಾಯಿಯಿಲ್ಲದ ಕೊರಗು ಕಾಡದಂತೆ ನೋಡಿಕೊಂಡವರು ಅವರ ತಂದೆ.

ಕಾನ್ವೆಂಟ್ ಸೇರಿದ ಗೌರಮ್ಮನವರ ವಿದ್ಯಾಭ್ಯಾಸ ಅಬಾಧಿತವಾಗಿ ಸಾಗುತ್ತಿತ್ತಾದರೂ, ಆ ಕಾಲದ ನಿಯಮದಂತೆ ಗೌರಮ್ಮನವರು ಮದುವೆಗೆ ಒಪ್ಪಲೇಬೇಕಾಗಿತ್ತು. ಮದುವೆಗೆ ಒಪ್ಪಿಕೊಂಡರೂ, ಮೆಟ್ರಿಕ್ ಮುಗಿಯುವವರೆಗೂ ಗಂಡನ ಮನೆಗೆ ಹೋಗುವುದಿಲ್ಲವೆಂಬ ಷರತ್ತನ್ನು ಹಾಕಿದ ದಿಟ್ಟೆ ಗೌರಮ್ಮನವರು! ಮೆಟ್ರಿಕ್ ಮುಗಿಸಿ ಗಂಡನ ಮನೆಗೆ ಕಾಲಿಟ್ಟ ಗೌರಮ್ಮನವರ ವ್ಯಕ್ತಿತ್ವಕ್ಕೆ ಕೊಂಚವೂ ಕುಂದು ಬರದಂತೆ ನೋಡಿಕೊಂಡವರು ಅವರ ಪತಿ ಬಿ.ಟಿ.ಗೋಪಾಲಕೃಷ್ಣರು. ಕಾನ್ವೆಂಟಿನಲ್ಲಿ ಓದುತ್ತಲೇ ಬರಹದ ಅಭ್ಯಾಸವನ್ನು ಇಟ್ಟುಕೊಂಡ ಗೌರಮ್ಮನವರು ಟೆನ್ನಿಸ್ ಮತ್ತು ಈಜುವುದರಲ್ಲಿ ಕೂಡ ಪರಿಣತಿ ಹೊಂದಿದ್ದರು.

> ಕೆಲವೇ ವರ್ಷಗಳು ಜೀವಿಸಿದ್ದ ಗೌರಮ್ಮನವರು ನೋಡಿದ ಬದುಕಿನ ಅರಹು ತೀರಾ ಚಿಕ್ಕದು. ಅದರಲ್ಲೂ ಮನಸ್ಸಿಗೆ ನಾಟುವಂತಹ ವಿಷಯಗಳನ್ನು ಆರಿಸಿಕೊಂಡು ಮನೋಹರವಾಗಿ ಬರೆಯುತ್ತಿದ್ದ ಗೌರಮ್ಮನವರು ಬದಲಾವಣೆಯನ್ನು ಬಯಸಿದವರು, ಬದಲಾವಣೆ ತರಲು ಯತ್ನಿಸಿದವರು. ಮತ್ತೆ ಅದೇ ಪ್ರಶ್ನೆ ಬರುತ್ತದೆ, ಅವರು ಬದುಕಿ ಇದ್ದಿದ್ದರೆ? ಅದೆಷ್ಟು ಚೆನ್ನಾಗಿ ಮನುಷ್ಯನ ಮನಸಿನ ಮೂಲೆ ಮೂಲೆಗಳಲ್ಲಿನ ಕಸಗಳನ್ನು ಹೆಕ್ಕಿ ಗುಡಿಸುತ್ತಿದ್ದರು ಎಂದು! ಬದಲಾಗಿರುವ; ಸ್ತ್ರೀಗೆ ಸ್ವಾತಂತ್ರ್ಯ–ಮನ್ನಣೆ ದೊರೆತಿರುವ ಈ ಕಾಲವನ್ನು ನೋಡಿ ಅದೆಷ್ಟು ಸಂಭ್ರಮಿಸುತ್ತಿದ್ದರೋ ಎನಿಸುತ್ತದೆ. ಏನೇ ಆದರೂ ಇದೆಲ್ಲ ಅಂದುಕೊಳ್ಳುವುದು ನಮ್ಮ ಬರೀ ಕಲ್ಪನೆಗಳೇ! ಇರಲಿ ಅವೂ ರಮ್ಯವೇ ತಾನೇ!

ಸ್ವಾತಂತ್ರ್ಯ ಹೋರಾಟಕ್ಕೆ ನೇರ ಇಳಿಯುವ ಅವಕಾಶ ಅವರಿಗೆ ದೊರಕಲಿಲ್ಲವಾದರೂ ತಮ್ಮದೇ ಮಿತಿಯಲ್ಲಿ ಸ್ವತಂತ್ರ ಹೋರಾಟಕ್ಕೆ ತಮ್ಮ ಪೂರ್ಣ ಬೆಂಬಲವನ್ನು ನೀಡಿದವರು. ಗಾಂಧೀಜಿ ಆರಂಭಿಸಿದ ಕರ ನಿರಾಕರಣೆ ಮತ್ತು ಖಾದಿ ಚಳುವಳಿಗಳು ಅವರ ಮೇಲೆ ಗಾಢ ಪ್ರಭಾವವನ್ನು ಉಂಟುಮಾಡಿದ್ದವು. ತಮ್ಮ 16ನೇ ವಯಸ್ಸಿನಲ್ಲಿಯೇ ಕೇವಲ ಖಾದಿ ತೊಡುವ ನಿರ್ಧಾರ ತೆಗೆದುಕೊಂಡರು. ಗಾಂಧೀಜಿ ಕೊಡಗಿಗೆ ಬಂದಾಗ, ಹಠ ಹಿಡಿದು ತಮ್ಮ ಮನೆಗೆ ಬರಮಾಡಿಕೊಂಡು ಅವರಿಗೆ ತಮ್ಮೆಲ್ಲ ಒಡವೆಗಳನ್ನು ದಾನ ಮಾಡಿದಾಗ ಕೊಡಗಿನ ಗೌರಮ್ಮನವರಿಗೆ ಕೇವಲ 22ರ ವಯಸ್ಸು. ನಂತರ ಕೂಡ ಹೆಚ್ಚು ಒಡವೆಗಳನ್ನು ಧರಿಸದೆ ಅಗತ್ಯವಿದ್ದ ಅತ್ಯಲ್ಪ ಒಡವೆಗಳನ್ನು ಧರಿಸುತ್ತಿದ್ದರು ಎಂದು ಅವರ ಮಗ ಹೆಮ್ಮೆಯಿಂದ ನೆನೆಯುತ್ತಾರೆ.

ತಮ್ಮ 19ನೇ ವಯಸ್ಸಿನಲ್ಲಿಯೇ ತಮ್ಮ ಮೊದಲ ಕಥೆ ಬರೆದ ಗೌರಮ್ಮನವರ ಓದಿನ ಹರಹು ಬಹಳ ವಿಶಾಲವಾಗಿತ್ತು. ಕನ್ನಡ ಮಾತ್ರವಲ್ಲದೆ ಇಂಗ್ಲಿಷ್ ಭಾಷೆಯಲ್ಲಿ ಕೂಡಾ ಪುಸ್ತಕಗಳನ್ನು ಓದುತ್ತಿದ್ದ ಗೌರಮ್ಮನವರು ಬರೆದದ್ದು ಮಾತ್ರ ಕನ್ನಡದಲ್ಲಿ. ಚಿಕ್ಕಂದಿನಿಂದ ಸಾಹಿತ್ಯದಲ್ಲಿ ತೀವ್ರ ಪ್ರೇಮವನ್ನು ಬೆಳೆಸಿಕೊಂಡಿದ್ದ ಗೌರಮ್ಮನವರಿಗೆ ಸಾಹಿತಿ ದಿಗ್ಗಜರ ಒಡನಾಟ ದೊರೆತಿತ್ತು. ವರಕವಿ ಬೇಂದ್ರೆ ಅವರೇ ಗೌರಮ್ಮನವರ ಮೊದಲ ಕೃತಿಗೆ ಮುನ್ನುಡಿ ಬರೆದು ಹಾರೈಸಿದ್ದರು. ಕೊಡಗಿನಲ್ಲಿ ಡಿವಿಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಗೌರಮ್ಮನವರು ಮನೆ ಸಮಾರಂಭವೆಂಬಂತೆ ಸಂಭ್ರಮದಿಂದ ಓಡಾಡಿದ್ದರು. ಆರ್.ಕಲ್ಯಾಣಮ್ಮನವರಿಂದಲೂ ಪ್ರಭಾವಿತರಾಗಿದ್ದ ಗೌರಮ್ಮ, ಅವರೊಡನೆ ಪತ್ರಗಳ ಮೂಲಕ ಸಂಪರ್ಕ ಇರಿಸಿಕೊಂಡಿದ್ದರು. ಆರ್.ಕಲ್ಯಾಣಮ್ಮನವರಂತೆಯೇ ತಾವೂ ಕೂಡಾ ಪ್ರಖರ ಸ್ತ್ರೀವಾದವನ್ನು ರೂಢಿಸಿಕೊಂಡಿದ್ದರು.

ಗೌರಮ್ಮನವರಿಗೆ ಪತಿಯ ಮೇಲೆ ಪ್ರೀತಿ ಮಾತ್ರವಲ್ಲ, ಭಕ್ತಿ ಗೌರವಗಳೂ ಇದ್ದವು. ಪತ್ನಿಯ ಜವಾಬ್ದಾರಿಗಳನ್ನು ಅತ್ಯಂತ ಪ್ರೇಮದಿಂದ ಮಾಡುತ್ತಿದ್ದರು ಎಂದು ಅವರನ್ನು ಹತ್ತಿರದಿಂದ ಬಲ್ಲ ನಿಕಟವರ್ತಿಗಳು ಹೇಳುತ್ತಾರೆ. ಮಗನನ್ನು ಮಾತೃಪ್ರೇಮದಲ್ಲಿ ತೋಯಿಸಿದ್ದ ಗೌರಮ್ಮನವರಿಗೆ ಏಕಮಾತ್ರ ಪುತ್ರ ವಸಂತನ ಮೇಲೆ ತೀರದ ಅಭಿಮಾನ–ಪ್ರೀತಿ. ಮನೆಯ ಆಳುಗಳನ್ನೂ ಪ್ರೀತಿ ಗೌರವದಿಂದ ನಡೆಸಿಕೊಳ್ಳುತ್ತಿದ್ದ ಗೌರಮ್ಮನವರು, ಉದಾತ್ತ ವಿಚಾರಧಾರೆಯುಳ್ಳವರಾಗಿದ್ದರು. ಜಾತಿಭೇದವನ್ನು ಮಾಡದೆ ಎಲ್ಲ ವರ್ಗದವರನ್ನು ಅಂತಃಕರಣದಿಂದ ಸಲಹುತ್ತಿದ್ದರು.

ನೀರಿನಲ್ಲಿ ಮೀನಿನಂತೆ ಈಜುತ್ತಿದ್ದ ಗೌರಮ್ಮನವರ ಪ್ರಾಣ ಹಾಗೆ ಈಜುವಾಗಲೇ ಹೋಗಿದ್ದು ವಿಪರ್ಯಾಸವೆಂದೇ ಹೇಳಬೇಕು. ಅವರು ಯಾವಾಗಲೂ ಮೇಲಿನಿಂದ ಹಾರಿ ಈಜುತ್ತಿದ್ದ ಮಡುವಿನಲ್ಲಿಯೇ ದುರಂತಕ್ಕೀಡಾದದ್ದು ವಿಧಿವಿಲಾಸವಷ್ಟೇ.

ಅಷ್ಟು ಚಿಕ್ಕವಯಸ್ಸಿಗೇ ಗೌರಮ್ಮನವರು ಗಳಿಸಿದ್ದ ಪ್ರೌಢತೆ ಬಗ್ಗೆ ಅಚ್ಚರಿಯೆನಿಸುತ್ತದೆ. ಆಗಿನ ಸಮಾಜದಲ್ಲಿ ಪ್ರಚಲಿತವಿದ್ದ ಅರ್ಷೇಯ ಲೋಕಾರೂಢಿ ವಿಚಾರಗಳನ್ನು ನೇರವಾಗಿ ಪ್ರತಿಭಟಿಸುತ್ತಿದ್ದರು. ತಮ್ಮ 19ನೇ ವಯಸ್ಸಿನಲ್ಲಿಯೇ ಪುನರ್ವಿವಾಹ ಎಂಬ ಮೊದಲ ಕತೆ ರಚಿಸಿದ ಗೌರಮ್ಮನವರು ಅಂದಿನ ಸಮಾಜದ ರೀತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವಲೋಕಿಸಿ, ಮಾನವೀಯವಲ್ಲದ ಪದ್ಧತಿಗಳಾಚರಣೆ ನೋಡಿ ವಿಷಾದಪಡುತ್ತಿದ್ದರು. ಆದ್ದರಿಂದಲೇ ಅವರು ಬರೆದಿರುವ 21 ಕತೆಗಳಲ್ಲಿ, ವಿಧವಾ ವಿವಾಹ, ಬಾಲ್ಯವಿವಾಹ ಹಾಗೂ ವಿಧವಾ ಸಮಸ್ಯೆಗಳ ಬಗ್ಗೆ ಒಳನೋಟವಿದೆ. ಜೊತೆಗೆ, ಮೂಲತಃ ಲವಲವಿಕೆಯ ಸ್ವಭಾವದವರಾಗಿದ್ದ ಗೌರಮ್ಮನವರು ತಮ್ಮ ಕಾನ್ವೆಂಟ್ ಶಿಕ್ಷಣ ಪಡೆಯುವಾಗಿನ ಅನುಭವಗಳನ್ನು ಹಗುರಾಗಿ ಹಾಸ್ಯದ ತೆಳುಲೇಪನದೊಂದಿಗೆ ನಮಗೆ ಉಣಬಡಿಸುತ್ತಾರೆ. ಪ್ರೇಮಕತೆಗಳೂ ಗೌರಮ್ಮನವರ ಕಥಾವೈವಿಧ್ಯದಲ್ಲಿ ಪಾಲು ಪಡೆದಿವೆ ಎಂಬುದು ಗಮನಾರ್ಹ.

ವಿಧವಾ ವಿವಾಹ, ಬಾಲ್ಯವಿವಾಹದಂತಹ ಪಿಡುಗುಗಳ ಬಗ್ಗೆ ಗೌರಮ್ಮನವರು ಬರೆದಿದ್ದರಾದರೂ, ಅವರು ಜೀವಿಸಿದ್ದ ಕಾಲದ ಕಟ್ಟುಪಾಡುಗಳನ್ನು ಅವರು ತೊರೆದು ಬರೆಯಲು ಸಾಧ್ಯವಾಗದಿರುವುದು ಗೌರಮ್ಮನವರ ತಪ್ಪಲ್ಲ, ಬದಲಾಗಿ ಅವರು ಜೀವಿಸಿದ್ದ ಕಾಲದ ಸಂಸ್ಕೃತಿ ಎಂಬುದನ್ನು ನಾವು ಅರಿಯಬೇಕಾಗುತ್ತದೆ. ಉದಾಹರಣೆಗೆ, ಅವರು ಬರೆದ ಮೊದಲ ಕತೆ ಪುನರ್ವಿವಾಹದಲ್ಲಿ, ನಾಯಕ 35ರ ಹರೆಯದ ವಿದುರ. ಅವನಿಗೆ ಚಿಕ್ಕ ಹುಡುಗಿಯನ್ನು ಮದುವೆಯಾಗುವಾಸೆ. ತಾನೇ ಹಿಂದೆ ಬಿದ್ದು ಮದುವೆ ನಿಶ್ಚಯಿಸುವ ಆತ, ಆಕೆ ಬಾಲವಿಧವೆಯೆಂದು ತಿಳಿದ ತಕ್ಷಣ ಆಕೆಯನ್ನೇ ದೂಷಿಸುತ್ತಾನೆ. ಬಾಲಕಿಯ ಕಣ್ತೆರೆಸುವ ಮಾತುಗಳ ನಂತರ ಆತ ವಿಧವೆಯರ ಉದ್ಧಾರಕ್ಕಾಗಿ ಕೆಲಸ ಮಾಡುತ್ತೇನೆ ಎನ್ನುತ್ತಾನೆಯೇ ಹೊರತು, ವಿಧವೆಯನ್ನು ಮದುವೆಯಾಗಲು ತಾನು ಸಿದ್ಧ ಎನ್ನಲು ಅವನಿಗೆ, ಅವನನ್ನು ಚಿತ್ರಿಸಿದ ಗೌರಮ್ಮನವರು ಬದುಕಿದ್ದ ಕಾಲ, ಅವಕಾಶವನ್ನೀಯುವುದಿಲ್ಲ. ಅದೇ ಸ್ವಲ್ಪ ಹೊಸಕಾಲದವರಾದ ತ್ರಿವೇಣಿ, ಹಣ್ಣೆಲೆ ಚಿಗುರಿದಾಗ, ಕಾದಂಬರಿಯ ತನ್ನ ನಾಯಕಿಗೆ ಮದುವೆ ಮಾಡಿಸುತ್ತಾರೆ. ಇಲ್ಲಿ, ಅಕಸ್ಮಾತ್ ಗೌರಮ್ಮನವರೇನಾದರೂ ಬದುಕಿದ್ದರೆ ಅವರ ಪ್ರಗತಿಪರ ವಿಚಾರಗಳ ಪ್ರಖರತೆ ಹೇಗಿರುತ್ತಿತ್ತು ಎಂದು ಬೆರಗಿನಿಂದ ಯೋಚಿಸುವ ಹಾಗಾಗುತ್ತದೆ.

ಅವರ ಮತ್ತೊಂದು ಅತ್ಯಂತ ಸೂಕ್ಷ್ಮ ವಿಚಾರದ ಕತೆ ವಾಣಿಯ ಸಮಸ್ಯೆ ಅವರ ಶ್ರೇಷ್ಠ ಕತೆಯೆಂದೇ ನನ್ನ ಭಾವನೆ. ಅತೀವ ನಂಬಿಕೆಯಿಡುವ ಸ್ವಭಾವದ ಮುಗ್ಧ ವಾಣಿ, ಅಕಸ್ಮಾತ್ ಊರಿಗೆ ಹೋಗಬೇಕಾಗಿ ಬಂದಾಗ, ಆಕೆಯ ನೆರೆಮನೆಯಲ್ಲಿ ವಾಸಿಸುವ ಆಕೆಯ ಸ್ನೇಹಿತೆ ಬಾಲವಿಧವೆ ಇಂದುವಿನ ಮೇಲೆ ವಾಣಿಯ ಗಂಡನಿಗೆ ಪ್ರೇಮ ಹುಟ್ಟುತ್ತದೆ. ಚಿಕ್ಕ ವಯಸ್ಸಿನ ಇಂದುವಿನ ಮನಸ್ಸೂ ಸ್ಥಿರತೆ ಕಳೆದುಕೊಂಡು ಹೊಯ್ದಾಡುತ್ತದೆ. ಆದರೆ ತನ್ನ ನೈತಿಕ ಜವಾಬ್ದಾರಿಯನ್ನು ಅರಿತ ಇಂದು, ತಾನೆಂದೂ ಹೋಗಲಾರೆ ಎಂದುಕೊಂಡಿದ್ದ ನೆಂಟರ ಮನೆಗೆ ಶಾಶ್ವತವಾಗಿ ಹೊರಟು ಹೋಗುತ್ತಾಳೆ. ಊರಿನಿಂದ ಹಿಂತಿರುಗಿದ ಮುಗ್ಧ ವಾಣಿಗೆ, ಇಂದು ಸಮಸ್ಯೆಯಾಗಿಯೇ ಉಳಿದು ಹೋಗುತ್ತಾಳೆ. ಸಂಸಾರದ ಜವಾಬ್ದಾರಿ ಹೊರಲು ಇನ್ನೂ ಸಿದ್ಧಳಾಗಿರದ ವಾಣಿಯ ಮುಂದೆ ಇಂದು, ವಾಣಿಯ ಪತಿಗೆ ತನಗೆ ಸೂಕ್ತಳೆನ್ನಿಸಿ ಪ್ರಿಯವಾಗುತ್ತಾಳೆ. ಇಲ್ಲಿ ಗಂಡಿನ ಸಹಜ ಚಂಚಲತೆಯನ್ನು ಯಾವುದೇ ಪೂರ್ವಾಗ್ರಹವಿಲ್ಲದೆ, ದೂಷಣೆ ಮಾಡದೆ ಕುಸುರಿಯಂತೆ ಸೂಕ್ಷ್ಮವಾಗಿ ಚಿತ್ರಿಸಿರುವ ಗೌರಮ್ಮನವರ ಪ್ರೌಢಿಮೆ ಅಚ್ಚರಿ ತರಿಸುತ್ತದೆ.

ವೇಶ್ಯೆಯೊಬ್ಬಳ ನಿರ್ಮಲ ಪ್ರೇಮದ ಕತೆ ಮನುವಿನ ರಾಣಿ ವಿಮರ್ಶಕರ ಅತೀವ ಕರತಾಡನ ಗಿಟ್ಟಿಸಿಕೊಂಡಿರುವ ಗೌರಮ್ಮನವರ ಕತೆ. ವೇಶ್ಯೆಗೂ ನಿಜವಾದ ಪ್ರೀತಿಸುವ ಪ್ರಾಮಾಣಿಕ ಮನಸಿರುತ್ತದೆ ಎಂದು ಬಿಂಬಿಸುವ ಈ ಕತೆ ಪ್ರೇಮದ ನಿರ್ಮಲತೆಯ ಪುರಾವೆಯಂತಿದೆ. ತಮ್ಮ ಹಲವು ಕತೆಗಳನ್ನು ಕಾಗದದ ರೂಪದಲ್ಲಿ ಬರೆದಿರುವುದು ಗೌರಮ್ಮನವರ ವಿಶಿಷ್ಟ ಶೈಲಿ. ಎರಡು ವ್ಯಕ್ತಿಗಳ ನಡುವಿನ ಪತ್ರವ್ಯವಹಾರದ ಮೂಲಕ ಅವರ ಅಂತರಂಗವನ್ನು ಶೋಧಿಸುವ ಪರಿ ಅನನ್ಯ.


ತೆಳುವಾದ ಹಾಸ್ಯ, ನವಿರು ಪ್ರೇಮ, ತುಂಟಾಟ ತರಲೆಗಳನ್ನು ಸಮರ್ಥವಾಗಿ ಗೌರಮ್ಮನವರು ಕತೆಗಳಲ್ಲಿ ಕಾಣಿಸುತ್ತಾರೆ. ಅವರ, ಸನ್ಯಾಸಿ ರತ್ನ, ಪಾಪನ ಮದುವೆ, ಮರದ ಗೊಂಬೆ ಕತೆಗಳು ಇದಕ್ಕೆ ಉದಾಹರಣೆ. ಇವುಗಳ ಜೊತೆ ಪ್ರೇಮ ವೈಫಲ್ಯ, ವಿರಹ, ದುರಂತದ ಕತೆಗಳನ್ನೂ ಬಹಳ ಸಶಕ್ತವಾಗಿ ಕಟ್ಟಿಕೊಟ್ಟಿರುವ ಗೌರಮ್ಮನವರ ಮನೋಸಾಮರ್ಥ್ಯ, ಸಹೃದಯತೆ, ಮೃದು ಮನಸುಗಳು ಅವರ ಸಾಹಿತ್ಯಕ ಪ್ರೌಢಿಮೆಗೆ ಮೂಲದ್ರವ್ಯ.

ಕೆಲವೇ ವರ್ಷಗಳು ಜೀವಿಸಿದ್ದ ಗೌರಮ್ಮನವರು ನೋಡಿದ ಬದುಕಿನ ಅರಹು ತೀರಾ ಚಿಕ್ಕದು. ಅದರಲ್ಲೂ ಮನಸ್ಸಿಗೆ ನಾಟುವಂತಹ ವಿಷಯಗಳನ್ನು ಆರಿಸಿಕೊಂಡು ಮನೋಹರವಾಗಿ ಬರೆಯುತ್ತಿದ್ದ ಗೌರಮ್ಮನವರು ಬದಲಾವಣೆಯನ್ನು ಬಯಸಿದವರು, ಬದಲಾವಣೆ ತರಲು ಯತ್ನಿಸಿದವರು. ಮತ್ತೆ ಅದೇ ಪ್ರಶ್ನೆ ಬರುತ್ತದೆ. ಅವರು ಬದುಕಿ ಇದ್ದಿದ್ದರೆ? ಅದೆಷ್ಟು ಚೆನ್ನಾಗಿ ಮನುಷ್ಯನ ಮನಸಿನ ಮೂಲೆ ಮೂಲೆಗಳಲ್ಲಿನ ಕಸಗಳನ್ನು ಹೆಕ್ಕಿ ಗುಡಿಸುತ್ತಿದ್ದರು ಎಂದು! ಬದಲಾಗಿರುವ; ಸ್ತ್ರೀಗೆ ಸ್ವಾತಂತ್ರ್ಯ–ಮನ್ನಣೆ ದೊರೆತಿರುವ ಈ ಕಾಲವನ್ನು ನೋಡಿ ಅದೆಷ್ಟು ಸಂಭ್ರಮಿಸುತ್ತಿದ್ದರೋ ಎನಿಸುತ್ತದೆ. ಏನೇ ಆದರೂ ಇದೆಲ್ಲ ಅಂದುಕೊಳ್ಳುವುದು ನಮ್ಮ ಬರೀ ಕಲ್ಪನೆಗಳೇ! ಇರಲಿ ಅವೂ ರಮ್ಯವೇ ತಾನೇ!

ಇಂತಹ ಮಹತ್ವದ ಲೇಖಕಿಯನ್ನು ಓದುಗರ, ಸಾಹಿತ್ಯಪ್ರಿಯರ ಮನಸ್ಸಿನಲ್ಲಿ ಸದಾ ಹಸಿರಾಗಿ ಇಡಬೇಕೆಂದೇ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು 21 ವರ್ಷಗಳಿಂದ ಅವರ ಹೆಸರಿನಲ್ಲಿಯೇ ಪ್ರಶಸ್ತಿಗಳನ್ನು ನೀಡುತ್ತಿದೆ. ಈವರೆಗೆ 21 ಮಹಿಳಾ ಸಾಹಿತಿಗಳು ಈ ಪ್ರತಿಷ್ಠಿತ ಪ್ರಶಸ್ತಿಗೆ ಭಾಜರಾಗಿದ್ದಾರೆ. 2024–25ನೇ ಸಾಲಿನ ಪ್ರಶಸ್ತಿ ಶ್ರೀಮತಿ ಕೂಡಕಂಡಿ ಓಂಶ್ರೀ ದಯಾನಂದ ಅವರಿಗೆ ದೊರೆತಿರುವುದು ಸಂತಸದ ವಿಚಾರ. ಈ ಪುರಸ್ಕಾರ ಪ್ರದಾನ ಸಮಾರಂಭ ಗೌರಮ್ಮನವರ ಕರ್ಮಭೂಮಿ ಕೊಡಗಿನ ಮೂರ್ನಾಡಿನಲ್ಲಿ 7ರಂದು ನೆರವೇರುತ್ತಿದೆ. ಕನ್ನಡ ಸಾಹಿತ್ಯಕ್ಕೆ ಹೊಸ ಮಜಲನ್ನು ತೋರಿಸಿದ ಕೊಡಗಿನ ಗೌರಮ್ಮ ಅವರನ್ನು ನೆನೆಯುತ್ತಾ ಅವರ ನೂತನ ವಿಚಾರಧಾರೆಗಳು ನಮ್ಮವಾಗಲಿ ಎಂದು ನಾವು ಆಶಿಸೋಣ. ಬದಲಾವಣೆಗೆ ಪ್ರಯತ್ನಿಸೋಣ.

ನಾಳೆ, ನಾಡಿದ್ದು ಮೈಸೂರು ವಿಭಾಗೀಯ ರೋವರ್ಸ್, ರೇಂಜರ್ಸ್ ಸಮಾವೇಶ

ಮೈಸೂರು,ಮಾ.5(ಎಂಟಿವೈ)– ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಸಮಿತಿ ವತಿಯಿಂದ ಮೈಸೂರಲ್ಲಿ ಮಾ.7 ಮತ್ತು 8ರಂದು ಮೈಸೂರು ವಿಭಾಗ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಸಮಾವೇಶ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್, ಸ್ಕೌಟ್ಸ್ ಮತ್ತ ಗೈಡ್ಸ್ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತ ಪಿ.ವಿಶ್ವನಾಥ್ ತಿಳಿಸಿದ್ದಾರೆ.



ಮಾಜಿ ಮೇಯರ್ ಪಿ.ವಿಶ್ವನಾಥ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಘಟಕ ಹಾಗೂ ಗೋಕುಲಂನ ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಸಂಯುಕ್ತಾಶ್ರಯದಲ್ಲಿ ಮಾ.7ರಂದು ಬೆಳಗ್ಗೆ 9.30ಕ್ಕೆ ವಿವಿಸಿಎ ಆವರಣದಲ್ಲಿರುವ ಹೆಚ್.ಕೆಂಪೇಗೌಡ ಒಳಾಂಗಣ ಕ್ರೀಡಾಂಗಣದಲ್ಲಿ ಮೈಸೂರು ವಿಭಾಗ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಸಮಾವೇಶ ಆಯೋಜಿಸಲಾಗಿದೆ. ಸಮಾವೇಶವನ್ನು ಮಾಜಿ ಸಚಿವ, ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಉದ್ಘಾಟಿಸಲಿದ್ದಾರೆ. ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಚಿತ್ರನಟ ಸುರೇಶ್ ಹೆಬ್ಳೀಕರ್, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಹಾಯಕ ರಾಜ್ಯ ಆಯುಕ್ತ ಬಿ.ಕೆ.ಬಸವರಾಜು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆ 10.45ಕ್ಕೆ ಪ್ರೊ.ಸಿ.ನಾಗಣ್ಣ ಅವರು 'ಬಲಿಷ್ಠ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ' ಕುರಿತು ಸಂವಾದ ನಡೆಸಿಕೊಡಲಿದ್ದಾರೆ. ಸಂವಾದದಲ್ಲಿ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಕೃಷ್ಣ ಹೊಂಬಾಳ್, ಎನ್‌ಐಇ ಸೊಸೈಟಿ ನಿರ್ದೇಶಕ ಡಾ.ಅಶೋಕ್ ರಾವ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಂಯೋಜಕ ಜಿ.ಎಲ್.ತ್ರಿಪುರಾಂತಕ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಪರಿಸರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಹೆಚ್.ಜಿ. ಲಿಂಗರಾಜು ಇನ್ನಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಮಧ್ಯಾಹ್ನ 1.30ಕ್ಕೆ 'ಸುಸ್ಥಿರ ಅಭಿವೃದ್ಧಿ ಗುರಿಗಳು' ವಿಷಯ ಕುರಿತು ನೃತ್ಯ ಸ್ಪರ್ಧೆ ನಡೆಯಲಿದೆ. ಅಲ್ಲದೆ, ವಿದ್ಯಾರ್ಥಿಗಳು ಸಹಾ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಈಡೇರಿಸುವಲ್ಲಿ ಯುವಕರ ಪಾತ್ರ ಕುರಿತು ಮಾತನಾಡಲಿದ್ದಾರೆ. ಸಂಜೆ ನಾಲ್ಕಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಪಿ.ಜಿ.ಆರ್. ಸಿಂಧ್ಯಾ ಸಮಾರೋಪ ಭಾಷಣ ಮಾಡಲಿದ್ದಾರೆ. ಸಮಾವೇಶದಲ್ಲಿ 60ಕ್ಕೂ ಹೆಚ್ಚು ಕಾಲೇಜುಗಳಿಂದ ಸುಮಾರು ಸಾವಿರ ಮಂದಿ ರೋವರ್ಸ್ ಮತ್ತು ರೇಂಜರ್ಸ್ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ರಾಜ್ಯ ಆಯುಕ್ತೆ ಗೀತಾ ನಟರಾಜ್ ಮಾತನಾಡಿ, ಮಾ.8ರಂದು ಬೆಳಗ್ಗೆ 9ಕ್ಕೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಮಾಜಿ ಮೇಯರ್ ಪಿ.ವಿಶ್ವನಾಥ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮಂಗಳೂರಿನ ಎನಪೋಯ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ವಿಜಯ ಕುಮಾರ್, ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಹಣಕಾಸು ಅಧಿಕಾರಿ ಕೆ.ಬಿ. ಗುರುಮೂರ್ತಿ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಅಂದು ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಇದೇ ವೇಳೆ ನಿವೃತ್ತ ವಿಜ್ಞಾನಿ ಟಿ.ಕೆ. ಅನುರಾಧ ಅವರನ್ನು ಸನ್ಮಾನಿಸಲಾಗುವುದು. ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪದಾಧಿಕಾರಿಗಳಾದ ಪುಷ್ಪವಲ್ಲಿ, ಎಸ್.ಬಿ.ರಾಧಾ ವೆಂಕಟೇಶ್, ಗಿರೀಶ್, ಅಬ್ದುಲ್ ಜಮೀರ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ರಾಜ್ಯ ಮಟ್ಟದ ವಕೀಲರ ಕ್ರೀಡಾಕೂಟ

ಹಾಸನ ಜಿಲ್ಲಾ ವಕೀಲರ ಸಂಘಕ್ಕೆ ಚಾಂಪಿಯನ್ ಪಟ್ಟ



ಹಾಸನ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಟಿ.ಪ್ರಸನ್ನ ಮಾತನಾಡಿದರು.

ಹಾಸನ,ಮಾ.5–ಉಡುಪಿಯ ಎಂಜಿಎಂ ಮೈದಾನದಲ್ಲಿ ನಡೆದ ರಾಜ್ಯ ಮಟ್ಟದ ವಕೀಲರ ವಿವಿಧ ಕ್ರೀಡಾಕೂಟದಲ್ಲಿ ಹಾಸನ ಜಿಲ್ಲಾ ವಕೀಲರ ಸಂಘವು ಗೆಲುವು ಪಡೆಯುವುದರ ಮೂಲಕ ಚಾಂಪಿಯನ್ಸ್ ಆಗಿ ಹೊರಹೊಮ್ಮಿದೆ ಎಂದು ವಕೀಲರ ಸಂಘದ ಅಧ್ಯಕ್ಷ ಡಿ.ಟಿ ಪ್ರಸನ್ನ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಎರಡು ದಿನಗಳ ಹಿಂದೆ ವಕೀಲರ ಸಂಘವು ಉಡುಪಿಯಲ್ಲಿ ಜಿಲ್ಲಾ ವಕೀಲರ ಸಂಘದ ಆಶ್ರಯದಲ್ಲಿ ರಾಜ್ಯ ಮಟ್ಟದ ವಕೀಲರಿಗೆ ನಾನಾ ಮಟ್ಟದ ಕ್ರೀಡಾಕೂಟವನ್ನು ಏರ್ಪಡಿಸಿತ್ತು. ಹಲವಾರು ಜಿಲ್ಲೆಗಳ ವಕೀಲರ ಸಂಘದವರು ಇದರಲ್ಲಿ ಭಾಗವಹಿಸಿದ್ದು ನಮ್ಮ ಹಾಸನ ಚಾಂಪಿಯನ್ ಪಟ್ಟವನ್ನು ತನ್ನ ಮುಡಿಗೇರಿಸಿಕೊಂಡಿದೆ. ಹಾಸನ ಜಿಲ್ಲಾ ವಕೀಲರ ಸಂಘವು ಕ್ರಿಕೆಟ್, ಥ್ರೋಬಾಲ್ ಮತ್ತು ಷಟಲ್ ಬ್ಯಾಡ್ಮಿಂಟನ್‌ನಲ್ಲಿ ಭಾಗವಹಿಸಿದ್ದವು. ಮಹಿಳಾ ವಕೀಲರು ಬ್ಯಾಡ್ಮಿಂಟನ್ ಡಬಲ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದು, ಪುರುಷರು ಕ್ರಿಕೆಟ್‌ನಲ್ಲಿ ರಾಜ್ಯ ಮಟ್ಟದ ಚಾಂಪಿಯನ್ಸ್ ಆಗಿ ಹೊರಹೊಮ್ಮಿದ್ದಾರೆ ಹಾಗೂ ಮಹಿಳೆಯರು ಥ್ರೋಬಾಲ್‌ನಲ್ಲಿ ತೃತೀಯ ಸ್ಥಾನವನ್ನು ಪಡೆದು ಹಾಸನದ ವಕೀಲರ ಸಂಘಕ್ಕೆ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಇದು ಸಂತೋಷದ ವಿಷಯ ಎಂದರು.

ಪುರುಷರ ಕ್ರಿಕೆಟ್ ತಂಡವು ಮಂಗಳೂರು ತಂಡದ ವಿರುದ್ಧ ಜಯಗಳಿಸಿ ಟ್ರೋಫಿ ಮತ್ತು 1,11,111 ರೂ.ಗಳ ನಗದು ಬಹುಮಾನವನ್ನು ಪಡೆದುಕೊಂಡಿದೆ. ಮಹಿಳಾ ಥ್ರೋಬಾಲ್ ತಂಡವು ಕುಮುಟ ವಕೀಲರ ಸಂಘದ ವಿರುದ್ಧ ಜಯಗಳಿಸಿ ತೃತೀಯ ಸ್ಥಾನವನ್ನು ಪಡೆದು 11,111 ರೂ.ಗಳ ನಗದು ಬಹುಮಾನವನ್ನು ಪಡೆದುಕೊಂಡಿದೆ. ಮಹಿಳೆಯರ ಷಟಲ್‌ನಲ್ಲಿ ಡಬಲ್ಸ್ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಪಡೆದು 11,111 ರೂಗಳ ನಗದು ಬಹುಮಾನ ಪಡೆದುಕೊಂಡಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಂ.ಸಂತೋಷ್, ಖಜಾಂಚಿ ಹೆಚ್.ಎನ್.ಪ್ರತಾಪ್, ಉಪಾಧ್ಯಕ್ಷ ಹೆಚ್.ಎನ್.ಯೋಗೀಶ್, ಜಂಟಿ ಕಾರ್ಯದರ್ಶಿ ರೂಪ ಕರೀಗೌಡ, ಕ್ರಿಕೆಟ್ ತಂಡದ ಕ್ಯಾಪ್ಟನ್ ಅನ್‌ಷಾದ್, ಥ್ರೋಬಾಲ್ ತಂಡದ ಕ್ಯಾಪ್ಟನ್ ರೋಷಿನಿ ಇತರರು ಉಪಸ್ಥಿತರಿದ್ದರು.

ಇಂದು ಜೆಡಿಎಸ್ ಪ್ರತಿಭಟನಾ ಮೆರವಣಿಗೆ



ಹಾಸನ, ಮಾ.5– ಜೆಡಿಎಸ್ ಪಕ್ಷದ ವತಿಯಿಂದ ರಾಜ್ಯ ಸರ್ಕಾರದ ವಿರುದ್ಧ ಮಾ.6ರಂದು ಹೇಮಾವತಿ ಪ್ರತಿಮೆಯಿಂದ ಡಿಸಿ ಕಚೇರಿಯವರೆಗೂ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಯೋಜನೆಗಳು ಯಾವುದೂ ಜನಸಾಮಾನ್ಯರಿಗೆ ತಲುಪುತ್ತಿಲ್ಲ. ಬದಲಾಗಿ ಸರ್ಕಾರ ಸುಮ್ಮನೇ ಬಡಾಯಿ ಕೊಚ್ಚಿಕೊಳ್ಳುತ್ತಿದೆ ಎಂದು ಸರ್ಕಾರದ ವಿರುದ್ಧ ತಮ್ಮ ಆಕ್ರೋಶವನ್ನು ಹೊರಹಾಕಿದರು. ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಎಲ್ಲಾ ದಿನನಿತ್ಯ ವಸ್ತುಗಳ ಬೆಲೆಯನ್ನು ಏರಿಕೆ ಮಾಡಿ ಸಾರ್ವಜನಿಕರ ಮೇಲೆ ಹೆಚ್ಚು ಒತ್ತಡವನ್ನು ಹೇರುತ್ತಿದ್ದಾರೆ, ಹಾಗೆಯೇ ಯಾವುದೇ ರೀತಿಯ ಉಪಯೋಗಗಳು ಇದರಿಂದ ಆಗುತ್ತಿಲ್ಲಾ ಎಂದರು. ಯಾವುದೇ ರೀತಿಯ ಅನ್ನಭಾಗ್ಯವನ್ನು ಸಿದ್ದರಾಮಯ್ಯ ಅವರ ಸರ್ಕಾರ ನೀಡುತ್ತಿಲ್ಲಾ, ಬದಲಾಗಿ ಅನ್ನರಾಮಯ್ಯ ಎಂದು ಕರೆಸಿಕೊಳ್ಳುತ್ತಿದ್ದಾರೆ ಇದು ಅವರಿಗೆ ನಾಚಿಕೆಯಾಗುವ ಸಂಗತಿ. ಗೃಹ ಲಕ್ಷ್ಮೀ, ಗೃಹ ಜ್ಯೋತಿ, ಯುವ ನಿಧಿ, ಪ್ರೋತ್ಸಾಹ ಧನ, ಗಂಗಾ ಕಲ್ಯಾಣ, ಶಕ್ತಿ ಯೋಜನೆ ಇವುಗಳು ಯಾವುದು ಸರಿಯಾದ ರೀತಿಯಲ್ಲಿ ಜನರನ್ನು ತಲುಪುತ್ತಿಲ್ಲಾ, ಬದಲಾಗಿ ಸರ್ಕಾರ ಸುಮ್ಮನೇ ಹಣವನ್ನು ಉಪಯೋಗಿಸದೆ ಜನರನ್ನು ಮೋಸ ಮಾಡುತ್ತಿದೆ ಎಂದರು.

ಈ ಮೇಲಿನ ಎಲ್ಲಾ ಕಾರಣಗಳಿಂದ ನಾಳೆ ನಗರದ ಹೇಮಾವತಿ ಪ್ರತಿಮೆಯಿಂದ ಡಿಸಿ ಕಚೇರಿಯವರೆಗೂ ಪ್ರತಿಭಟನೆ ಮೆರವಣಿಗೆಯನ್ನು ಮಾಡಿ ಡಿಸಿ ಅವರಿಗೆ ಮನವಿಯನ್ನು ಕೊಡುತ್ತೇವೆ ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಜೆಡಿಎಸ್ ಕಾರ್ಯಕರ್ತರು, ಶಾಸಕರು ಹಾಗೂ ನಗರಸಭಾ ಅಧ್ಯಕ್ಷರು ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಗರಸಭೆ ಅಧ್ಯಕ್ಷ ಎಂ.ಚಂದ್ರೇಗೌಡ, ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು, ಜೆಡಿಎಸ್ ತಾಲೂಕು ಅಧ್ಯಕ್ಷ ದ್ಯಾವೇಗೌಡ, ಮಾಜಿ ಅಧ್ಯಕ್ಷ ಸಯ್ಯದ್ ಅಕ್ಬರ್, ವಕೀಲ ಶೇಷಾದ್ರಿ ಇತರರಿದ್ದರು.

ಸಮಾಜಶ್ರೀ ಸೇವಾ ಪ್ರಶಸ್ತಿ



ಸಾಂಸ್ಕೃತಿಕ ಅನ್ವೇಷಣಾ ಅಕಾಡೆಮಿಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ಮೈಸೂರಿನ ಸತೀಶ ಮೇತ್ರಿ ಅವರಿಗೆ ಸಮಾಜಶ್ರೀ ರಾಜ್ಯ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ನಟ, ನಿರ್ದೇಶಕ, ನಿರ್ಮಾಪಕ ಎಸ್.ನಾರಾಯಣ್, ನಟ ಸುಚೇಂದ್ರ ಪ್ರಸಾದ್, ಅಕಾಡೆಮಿ ತಂಡದವರು ಉಪಸ್ಥಿತರಿದ್ದರು.

ಕಲಬೆರಕೆ ಆಹಾರದ ವಿರುದ್ಧ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಸಮರ

ಇಂದಿನಿಂದ ಜೇನಿನ ಮಾದರಿ ಸಂಗ್ರಹದ ಕಾರ್ಯಾಚರಣೆ ಆರಂಭ



ಜೇನುತುಪ್ಪದ ಕಲಬೆರಕೆ ವಿರುದ್ಧ ಚಾಮರಾಜನಗರದಲ್ಲಿ ಕಾರ್ಯಾಚರಣೆ ಆರಂಭಿಸಿರುವ ಆಹಾರ ಸುರಕ್ಷಿತ ಅಧಿಕಾರಿಗಳು, ಜೇನುತುಪ್ಪದ ಮಾದರಿಗಳನ್ನು ಸಂಗ್ರಹಿಸಿದ್ದಾರೆ.

ಮೈಸೂರು,ಮಾ.5(ಬಿಎಲ್‌ಯ)– ಕಲಬೆರಕೆ ಹಾಗೂ ಗುಣಮಟ್ಟರಹಿತ ಆಹಾರ ವಸ್ತುಗಳ ವಿರುದ್ಧ ಸಮರ ಸಾರಿರುವ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಈಗ ನಕಲಿ ಜೇನುತುಪ್ಪ ಮಾರಾಟದ ವಿರುದ್ಧ ನಾಳೆಯಿಂದ ಕಾರ್ಯಾಚರಣೆ ಆರಂಭಿಸಲಿದ್ದಾರೆ.

ಇಡ್ಲಿ, ಹೋಳಿಗೆ ಸೇರಿದಂತೆ ಇತರೆ ಆಹಾರ ತಯಾರು ಮಾಡುವ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಸಿರುವುದರ ವಿರುದ್ಧ ಕಾರ್ಯಾಚರಣೆ ನಡೆಸಿರುವ ಪ್ರಾಧಿಕಾರದ ಅಧಿಕಾರಿಗಳು ಕೆಲವು ಹೋಟೆಲ್‌ನವರಿಗೆ ದಂಡ ವಿಧಿಸಿದ್ದಾರೆ. ಇದರಿಂದ ಎಚ್ಚೆತ್ತ ಹೋಟೆಲ್ ಹಾಗೂ ಫಾಸ್ಟ್‌ಫುಡ್‌ನವರು ಪ್ಲಾಸ್ಟಿಕ್ ತಯಾರಿಕೆ ಬಿಟ್ಟು ಈಗ ಬಾಳೆ ಎಲೆ ಬಳಸುತ್ತಿದ್ದಾರೆ. ಜನರು ಸೇವಿಸುವ ಆಹಾರ ತಯಾರಿಕೆಗೆ ಬಗ್ಗೆ ಕಾಳಜಿ ವಹಿಸಿರುವ ಪ್ರಾಧಿಕಾರ ಇಂತಹ ಕಾರ್ಯಾಚರಣೆ ನಡೆಸುತ್ತಿದೆ. ಈ ಹಿನ್ನೆಲೆ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಕರ್ನಾಟಕ ಆಹಾರ ಸುರಕ್ಷತಾ ಮತ್ತು ಔಷಧಿ ಆಡಳಿತ ಆಯುಕ್ತ ಶ್ರೀನಿವಾಸ್ ಅವರು ಜಿಲ್ಲಾ ಮಟ್ಟದಲ್ಲಿ ಕಾರ್ಯಾಚರಣೆ ನಡೆಸುವಂತೆ ಆದೇಶಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಆಹಾರ ಸುರಕ್ಷತಾ ಮತ್ತು ಔಷಧಿ ಆಡಳಿತ ಇಲಾಖೆಯ ಅಂಕಿತ ಅಧಿಕಾರಿ ಡಾ.ರವೀಂದ್ರ ಅವರ ನೇತೃತ್ವದಲ್ಲಿ ಮೈಸೂರು ಮತ್ತು ಚಾಮರಾಜನಗರದಲ್ಲಿ ನಾಳೆಯಿಂದ ಕಾರ್ಯಾಚರಣೆ ಆರಂಭವಾಗಲಿದೆ.

ಚಾಮರಾಜನಗರದ ಬಿಳಿಗಿರಿರಂಗನ ಬೆಟ್ಟದಲ್ಲಿ ಜೇನು ಕೃಷಿಯ ಸಹಕಾರ ಸಂಘಗಳಿಗೆ ಭೇಟಿ ನೀಡಿರುವ ಯಳಂದೂರಿನ ಆಹಾರ ಸುರಕ್ಷಿತ ಅಧಿಕಾರಿ ಶ್ರೀನಿವಾಸ್ ಅವರು ಜೇನಿನ ಮಾದರಿಯನ್ನು ಸಂಗ್ರಹಿಸಿದ್ದಾರೆ. ಇನ್ನು ಹಲವೆಡೆ ಜೇನಿನ ಮಾದರಿ ಸಂಗ್ರಹಿಸಿ ಅದನ್ನು ಮೈಸೂರು ಮತ್ತು ಬೆಂಗಳೂರಿನ ಪ್ರಾಧಿಕಾರದ ಪ್ರಯೋಗಾಲಯಕ್ಕೆ ಕಳುಹಿಸಲಿದ್ದಾರೆ. ಪ್ರಯೋಗಾಲಯದ ವರದಿಯಲ್ಲಿ ಕಲಬೆರಕೆ ಎಂದು ದೃಢಪಟ್ಟರೆ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಿದ್ದಾರೆ.

ಇನ್ನು ಮೈಸೂರು ನಗರದಲ್ಲಿ ಆಹಾರ ಸುರಕ್ಷಿತ ಅಧಿಕಾರಿಗಳಾದ ದಾಕ್ಷಾಯಿಣಿ, ರವೀಶ್ ಹಾಗೂ ಡಾ.ರವೀಂದ್ರ ಅವರು ಜೇನಿನ ಮಾದರಿಗಳನ್ನು ನಾಳೆಯಿಂದ ಸಂಗ್ರಹಿಸಲಿದ್ದಾರೆ. ತರುವಾಯ ಜೇನಿನ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿ ವರದಿಯಲ್ಲಿ ಕಲಬೆರಕೆ ಎಂದು ದೃಢಪಟ್ಟರೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಿದ್ದಾರೆ.

ಹಿಂದೂಸ್ತಾನಿ ಸಂಗೀತಕ್ಕೆ ಮೈಸೂರು ಮಹಾರಾಜರು ಪ್ರೇರಣೆ

ಪ್ರಖ್ಯಾತ ಹಿಂದೂಸ್ತಾನಿ ಸಂಗೀತ ಗಾಯಕಿ ವೈಷ್ಣವಿ ಹಾನಗಲ್ ಅಭಿಪ್ರಾಯ

ಮೈಸೂರು, ಮಾ.5(ಬಿಎಲ್‌ಯು)– ಹಿಂದೂಸ್ತಾನಿ ಸಂಗೀತಕ್ಕೆ ಮೈಸೂರು ಮಹಾರಾಜರು ನೀಡಿದ ಪ್ರೋತ್ಸಾಹದಿಂದ ಹುಬ್ಬಳ್ಳಿ–ಧಾರವಾಡ ಸೇರಿದಂತೆ ಇತರೆಡೆ ಹಿಂದೂಸ್ತಾನಿ ಗಾಯಕರು ಹುಟ್ಟಿಕೊಳ್ಳಲು ಕಾರಣವಾಯಿತು ಎಂದು ಪ್ರಖ್ಯಾತ ಹಿಂದೂಸ್ತಾನಿ ಸಂಗೀತ ಗಾಯಕಿ ವೈಷ್ಣವಿ ಹಾನಗಲ್ ಅಭಿಪ್ರಾಯಪಟ್ಟರು.

ಮೈಸೂರಿನ ಲಕ್ಷ್ಮಿ ಪುರಂನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಇಂದು ಪದ್ಮವಿಭೂಷಣ ಡಾ.ಗಂಗೂಬಾಯಿ ಹಾನಗಲ್‌ರವರ 112ನೇ ಜನ್ಮದಿನೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಕರ್ನಾಟಕ ಸಂಗೀತ ಮಾತ್ರ ಕಲಿಯುತ್ತಿದ್ದವರಿಗೆ ಹಿಂದೂಸ್ತಾನಿ ಸಂಗೀತದಲ್ಲಿ ಕೂಡ ಪ್ರೌಢಿಮೆ ಬೆಳೆಸಿಕೊಳ್ಳಲು ಮೈಸೂರು ಮಹಾರಾಜರು ಉತ್ತೇಜಿಸಿದರು.

ಜಯಚಾಮರಾಜೇಂದ್ರ ಒಡೆಯರ್ ಅವರು ಮೀರತ್‌ನ ಕರೀಂ ಖಾನ್ ಸಾಬ್ ಅವರನ್ನು ತಮ್ಮ ಆಸ್ಥಾನದಲ್ಲಿ ಹಿಂದೂಸ್ತಾನಿ ಗಾಯಕರಾಗಿ ನೇಮಕ ಮಾಡಿಕೊಂಡಿದ್ದರು. ಇವರ ಮೂಲಕ ಮಹಾರಾಜರು ಹಿಂದೂಸ್ತಾನಿ ಸಂಗೀತ ಕಲಿಕೆಗೆ ಪ್ರೇರಣೆ ನೀಡುತ್ತಿದ್ದರು. ಇದರಿಂದ ಹುಬ್ಬಳ್ಳಿ–ಧಾರವಾಡ ಮಾತ್ರವಲ್ಲದೆ ಕರ್ನಾಟಕದಲ್ಲಿ ಹಿಂದೂಸ್ತಾನಿ ಸಂಗೀತಗಾರರು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿಕೊಳ್ಳಲು ಸಾಧ್ಯವಾಯಿತು ಎಂದು ವೈಷ್ಣವಿ ಹಾನಗಲ್ ಅವರು ಹೇಳಿದರು.



ಮೈಸೂರಿನ ಲಕ್ಷ್ಮಿ ಪುರಂನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಬುಧವಾರ ಪದ್ಮವಿಭೂಷಣ ಡಾ.ಗಂಗೂಬಾಯಿ ಹಾನಗಲ್ ಅವರ 112ನೇ ಜನ್ಮದಿನೋತ್ಸವದಲ್ಲಿ ಪ್ರಖ್ಯಾತ ಹಿಂದೂಸ್ತಾನಿ ಸಂಗೀತ ಗಾಯಕಿ ವೈಷ್ಣವಿ ಹಾನಗಲ್ ಮಾತನಾಡಿದರು.

> “ಡಾ.ಗಂಗೂಬಾಯಿ ಹಾನಗಲ್ ಅವರ ಸಂಗೀತ ಪರಂಪರೆಯನ್ನು ನಾವು ಅನುಸರಿಸಬೇಕು. ಇದರಿಂದ ಸಂಗೀತದಲ್ಲಿ ನಾವು ಕೂಡ ಪ್ರಸಿದ್ಧಿ ಪಡೆಯಬಹುದು. ಯಾವುದೇ ಸಾಧನೆ ಮಾಡಬೇಕಾದರೆ ನಮ್ಮ ಗುರಿ ಹಿಂದೆ ಗುರು ಇರಬೇಕು. ಈ ಹಿನ್ನೆಲೆ ಗುರುಗಳ ಮಾರ್ಗದರ್ಶನದಲ್ಲಿ ಸಂಗೀತವನ್ನು ಉಸಿರಾಗಿ ಪರಿಗಣಿಸಿ ಪ್ರಾವೀಣ್ಯತೆ ಪಡೆಯಬೇಕು. –ವೈಷ್ಣವಿ ಹಾನಗಲ್

ಕುಂದಗೋಳಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸವಾಯಿ ಗಂಧರ್ವ ಎಂಬ ಬಾಲಕನ ಸಂಗೀತಕ್ಕೆ ಮಾರುಹೋದ ಕರೀಂ ಖಾನ್ ಅವರು, ತಮ್ಮ ಜೊತೆಗೆ ಆ ಬಾಲಕನನ್ನು ಕರೆದುಕೊಂಡು ಬಂದು ಪ್ರಖ್ಯಾತ ಹಿಂದೂಸ್ತಾನಿ ಗಾಯಕನಾಗಿ ರೂಪಿಸಿದರು ಎಂದು ವೈಷ್ಣವಿ ಹಾನಗಲ್ ತಿಳಿಸಿದರು.

ಆ ವೇಳೆಗಾಗಲೇ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಸಂಗೀತ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತ್ತು. ಆ ಸಂದರ್ಭದಲ್ಲಿ ಡಾ.ಗಂಗೂಬಾಯಿ ಹಾನಗಲ್ ಅವರ ತಾಯಿ ಅಂಬಾಬಾಯಿ ಪ್ರಸಿದ್ಧ ಕರ್ನಾಟಕ ಸಂಗೀತ ಪಂಡಿತರಾಗಿದ್ದರು. ತಮ್ಮ ಪುತ್ರಿ ಗಂಗೂಬಾಯಿ ಹಾನಗಲ್ ಅವರಿಗೆ ಹಿಂದೂಸ್ತಾನಿ ಸಂಗೀತ ಹೇಳಿ ಕೊಡುವ ಉದ್ದೇಶದಿಂದ ಕರ್ನಾಟಕ ಸಂಗೀತ ಬಿಟ್ಟು ಹಿಂದೂಸ್ತಾನಿ ಸಂಗೀತ ಕಲಿಸಲು ಮುಂದಾದರು ಎಂದು ಹೇಳಿದರು.

ಗಂಗೂಬಾಯಿ ಹಾನಗಲ್ ಅವರಲ್ಲಿದ್ದ ಹಿಂದೂಸ್ತಾನಿ ಸಂಗೀತದ ಆಸಕ್ತಿ ಗಮನಿಸಿ, ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ಬಂದರು. ಅಲ್ಲಿ ಡಾ.ಗಂಗೂಬಾಯಿ ಹಾನಗಲ್ ಅವರಿಗೆ ಕರ್ನಾಟಕ ಸಂಗೀತದ ಜೊತೆಗೆ ಹಿಂದೂಸ್ತಾನಿ ಸಂಗೀತ ಕಲಿಸಿ ಅದರಲ್ಲಿ ಪ್ರಖ್ಯಾತಿ ಗಳಿಸಿದರು ಎಂದು ವಿವರಿಸಿದರು. ಸಂಗೀತ ವಿಶ್ವವಿದ್ಯಾನಿಲಯದ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ, ಕುಲಸಚಿವೆ ಕೆ.ಎಸ್.ರೇಖಾ, ಮೌಲ್ಯಮಾಪನ ಕುಲಸಚಿವ ಡಾ.ಎಂ.ಜಿ. ಮಂಜುನಾಥ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ವೀರಣ್ಣ ಎಂ.ಅರ್ಕಸಾಲಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಭಾರತೀಯ ಜೈನ್ ಸಂಘಟನೆ ಲೇಡೀಸ್ ವಿಂಗ್ ಸ್ಥಾಪನೆ

ಬಿಜೆಎಸ್ ರಾಜ್ಯಾಧ್ಯಕ್ಷರ ಅಧಿಕೃತ ಭೇಟಿ

ಮೈಸೂರು,ಮಾ.5–ಭಾರತೀಯ ಜೈನ್ ಸಂಘಟನೆ, ಮೈಸೂರು ಚಾಪ್ಟರ್‌ನ ಪ್ರಥಮ ವಾರ್ಷಿಕ ಮಹಾಸಭೆ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ನವಕಾರ ಮಹಾಮಂತ್ರ ಪಠಣದ ನಂತರ ಸಭೆ ಆರಂಭವಾಯಿತು. ಅಧ್ಯಕ್ಷ ಎಸ್. ರಾಜನ್ ಬಾಗ್‌ಮಾರ್ ಸ್ವಾಗತಿಸಿ, 2025–26ನೇ ಸಾಲಿನ ನೂತನ ಪದಾಧಿಕಾರಿಗಳನ್ನು ಘೋಷಣೆ ಮಾಡಿದರು.

ಭಾರತೀಯ ಜೈನ್ ಸಂಘಟನೆ, ಮೈಸೂರು ಮಹಿಳಾ ವಿಭಾಗ ರಚನೆಯನ್ನು ಪ್ರಸ್ತಾಪಿಸಲಾಯಿತು. ಮತ್ತು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಮಾಜಿ ಅಧ್ಯಕ್ಷರಾದ ಅಶೋಕ್ ಸಲೇಚಾ ಮತ್ತು ವಿಮಲ್ ಪಿಟಾಲಿಯಾ ಮಹಿಳಾ ಘಟಕದ ಮಹತ್ವದ ಬಗ್ಗೆ ತಿಳಿಸಿದರು.



ಭಾರತೀಯ ಜೈನ್ ಸಂಘಟನೆ, ಮೈಸೂರು ಚಾಪ್ಟರ್‌ನ ಪ್ರಥಮ ವಾರ್ಷಿಕ ಮಹಾಸಭೆ.

ಬಿಜೆಎಸ್ ಮೈಸೂರು ಸಂಸ್ಥೆಯ ಭವಿಷ್ಯದ ಯೋಜನೆಗಳನ್ನು ಪ್ರಕಟಿಸಿದ ಉಪಾಧ್ಯಕ್ಷ ಅಮಿತ್‌ಕುಮಾರ್ ಚೌಹಾಣ್, ಮೈಸೂರು ನಗರಪಾಲಿಕೆ ಸಹಯೋಗದೊಂದಿಗೆ ಹಿರಿಯ ನಾಗರಿಕರಿಗೆ ಆಯುಷ್ಮಾನ್ ಆರೋಗ್ಯ ಕಾರ್ಡ್ ಪಡೆಯಲು ಶಿಬಿರವನ್ನು ನಡೆಸುವುದಾಗಿ ಘೋಷಿಸಿದರು. ರಾಜೇಶ್ ಸಂಚೇತಿ ಅವರು ಮಾರ್ಚ್ 22ರಂದು ನಡೆಯಲಿರುವ ವಿಶ್ವ ಜಲ ದಿನಾಚರಣೆ ಕಾರ್ಯಕ್ರಮದ ವಿವರಗಳನ್ನು ಹಂಚಿಕೊಂಡರು. ಜಲ ಸಂರಕ್ಷಣೆ ಮತ್ತು ನಿರ್ವಹಣೆ ಕುರಿತು ವಿಚಾರ ಸಂಕಿರಣಗಳು, ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಬಿ.ಕೆ.ದೀಪಕ್ ಕುಮಾರ್ ಜೈನ್ (ಬೊಹ್ರಾ) ಮುಂಬರುವ ದಿನಗಳಲ್ಲಿ ಜೈನ ಮುನಿಯ ಕುರಿತಾದ ಚಲನಚಿತ್ರ ಪ್ರದರ್ಶನ ಮತ್ತು ಪುರಾತತ್ವ ಇಲಾಖೆ ಸಹಯೋಗದೊಂದಿಗೆ ಎಪಿಗ್ರಫಿ ಪ್ರದರ್ಶನದ ಬಗ್ಗೆ ಮಾಹಿತಿ ನೀಡಿದರು. ಅಭಿಷೇಕ್ ಸಿಂಘವಿ ಮತ್ತು ಹಿತೇಶ್ ಶಾ ಸದಸ್ಯರು ಮತ್ತು ಅವರ ಕುಟುಂಬಗಳಿಗೆ ಗುಂಪು ವಿಮೆ ಪಡೆಯುವಂತೆ ಸಲಹೆ ನೀಡಿದರು.

ಏಕಾಗ್ರತೆ ಒಂದೇ ಯಶಸ್ಸಿನ ಕೀಲಿ ಕೈ

ಡಿವೈನ್ ಪಾರ್ಕ್ ಟ್ರಸ್ಟ್‌ನ ಡಿ.ಎಸ್.ಯಶವಂತ ಅಭಿಮತ



ಮೈಸೂರು, ಮಾ. 5– ಕನ್ನಡ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಸಂವಾದ ಕಾರ್ಯಕ್ರಮವನ್ನು ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಿವೈನ್ ಪಾರ್ಕ್ ಟ್ರಸ್ಟ್ ಸಂಸ್ಥೆಯ ಡಿ.ಎಸ್.ಯಶವಂತ ಮಾತನಾಡಿ, ಸಂಸ್ಕಾರವಿಲ್ಲದ ಜೀವನ ಆತ್ಮವಿಲ್ಲದ ದೇಹದಂತೆ. ಇಂದಿನ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನ ಸಂಪಾದನೆಯನ್ನು ಕಾಣುತ್ತೇವೆ. ಆದರೆ ಆಧ್ಯಾತ್ಮಿಕ ಹಾಗೂ ಧಾರ್ಮಿಕವಾಗಿ ಕೊರತೆ ಇರುವುದನ್ನು ನಾವು ಗಮನಿಸಬೇಕು. ಜಗತ್ತಿಗೆ ಚೇತನರಾಗಿದ್ದ ಸ್ವಾಮಿ ವಿವೇಕಾನಂದರು ಈ ನಿಟ್ಟಿನ ಆಲೋಚನೆಯನ್ನು ಯುವಕರಿಗೆ ನೀಡಿದ್ದಾರೆ ಎಂದರು.

ವಿವೇಕಾನಂದರ ಚಿಂತನೆಗಳು ಹಾಗೂ ಅವರ ಆಲೋಚನಾ ಶಕ್ತಿ ಜಗತ್ತಿಗೆ ಸ್ಫೂರ್ತಿದಾಯಕವಾಗಿತ್ತು. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿವೇಕಾನಂದರ ಯೋಚನೆಗಳು ಪರಿಣಾಮಕಾರಿಯಾದ ಬುನಾದಿಗಳನ್ನು ಕಲ್ಪಿಸಿತು. ದೇಶಭಕ್ತಿಯ ಜೊತೆಗೆ ಆಧ್ಯಾತ್ಮಿಕ ಆಲೋಚನೆ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದು ಅವರು ತಿಳಿಸಿದರು.

ಸೇವಾ ಮನೋಭಾವ ಯುವಕರ ಮುಖ್ಯ ಧ್ಯೇಯವಾಗಬೇಕು. ಸ್ವಾರ್ಥ ರಹಿತವಾದ ಸೇವೆ ಮಾಡುವವರು ಸಮಾಜದ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಯಾರು ಇತರರಿಗಾಗಿ ಬಾಳುತ್ತಾರೋ ಅವರದು ಜೀವನ. ಸುಮ್ಮನೆ ಬದುಕುವುದು ತಿರುಗಾಡುವ ಹೆಣದಂತೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಗೀತಾ, ಸಹ ಪ್ರಾಧ್ಯಾಪಕಿ ಡಾ.ವಿನೋದಮ್ಮ, ಸಹಾಯಕ ಪ್ರಾಧ್ಯಾಪಕರಾದ ನಾಗೇಶ, ಕಿರಣಕುಮಾರ್ ದೇಸಾಯ್, ಮನೋಜ್ ಕುಮಾರ್, ಹಂಸವೇಣಿ, ವಿದ್ಯಾ, ಸುಲ್ತಾನ ಪೂರ್ಣಿಮಾ ಪಿ.ಆರ್.ಓ, ಡಿವೈನ್ ಪಾರ್ಕ್ ಭಕ್ತರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆಕಾಶವಾಣಿಗೆ 90 ವರ್ಷ: ನಾಳೆ ‘ನುಡಿ ನಾದ ಸಂಗಮ’

ಮೈಸೂರು, ಮಾ.5(ಎಂಟಿವೈ)– ಮೈಸೂರು ಆಕಾಶವಾಣಿಗೆ 90 ವರ್ಷ ಸಂದಿರುವ ಹಿನ್ನೆಲೆಯಲ್ಲಿ ಮಾ.7ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಯಾದವಗಿರಿಯ ಆಕಾಶವಾಣಿ ಆವರಣದಲ್ಲಿ ‘ನುಡಿ ನಾದ ಸಂಗಮ’ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಆಕಾಶವಾಣಿಯ ಉಪನಿರ್ದೇಶಕ ಎಸ್.ಎಸ್.ಉಮೇಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1935ರ ಸೆ.10ರಂದು ಸ್ಥಾಪಿತವಾದ ಮೈಸೂರು ಆಕಾಶವಾಣಿಗೆ 90 ವರ್ಷ ಸಂದಿದೆ. ಈ ಹಿನ್ನೆಲೆಯಲ್ಲಿ ನುಡಿ ನಾದ ಸಂಗಮ ಕಾರ್ಯಕ್ರಮ ಆಯೋಜಿಸಿ ಶ್ರೋತೃ ಬಳಗವನ್ನು ಮತ್ತಷ್ಟು ಹೆಚ್ಚಿಸಲು ಉದ್ದೇಶಿಸಲಾಗಿದೆ. ಮಾ.7ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೂ ಮೈಸೂರು ಆಕಾಶವಾಣಿ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಕಾಶವಾಣಿಯ ಉಪನಿರ್ದೇಶಕ ಎಸ್.ಎಸ್.ಉಮೇಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ನುಡಿ ನಾದ ಸಂಗಮ ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ 7.30ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಆಕಾಶವಾಣಿವರೆಗೆ ಸೈಕಲ್ ಜಾಥಾ ಏರ್ಪಡಿಸಲಾಗಿದ್ದು, ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಸೈಕಲ್ ಜಾಥಾಕ್ಕೆ ಚಾಲನೆ ನೀಡಲಿದ್ದಾರೆ. ನೂರಕ್ಕೂ ಹೆಚ್ಚು ಮಂದಿ ಸೈಕಲ್ ಸವಾರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಆಕಾಶವಾಣಿ ಆವರಣದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. ಈ ಕಾರ್ಯಕ್ರಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ. ಸವಿತಾ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 10.30ಕ್ಕೆ ವಿವಿಧ ಮಳಿಗೆಗಳನ್ನು ಎಂಎಎಚ್‌ಎಎನ್ ಉಪಾಧ್ಯಕ್ಷ ಕೆ.ಎಸ್.ಗುರುರಾಜ್ ಉದ್ಘಾಟಿಸಲಿದ್ದಾರೆ. ಸಂಜೆ 4.30ಕ್ಕೆ ವಿವಿಧ ಜನಪದ ಕಲಾತಂಡಗಳಿಂದ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಹೇಳಿದರು.

ಸಂಜೆ 5 ಗಂಟೆಗೆ ನುಡಿ ನಾದ ಸಂಗಮದ ಮುಖ್ಯ ಕಾರ್ಯಕ್ರಮ ಜರುಗಲಿದ್ದು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಆಕಾಶವಾಣಿ ನವದೆಹಲಿ ಸುದ್ದಿ ವಿಭಾಗದ ಮಹಾ ನಿರ್ದೇಶಕ ಡಾ. ಪ್ರಜ್ಞಾ ಪಾಲಿವಾಲ್ ಗೌರ್ ಉದ್ಘಾಟಿಸಲಿದ್ದಾರೆ. ರಾಜ ವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಹಿರಿಯ ವಿದ್ವಾಂಸರಾದ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ಆಕಾಶವಾಣಿಯ ಸಹಾಯಕ ನಿರ್ದೇಶಕ ಟಿ.ವಿ.ವಿದ್ಯಾಶಂಕರ್, ಸಹಾಯಕ ಅಭಿಯಂತರ ಪಿ.ಆನಂದನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಕಾಶವಾಣಿ ಉಪನಿರ್ದೇಶಕ ಎಸ್.ಎಸ್.ಉಮೇಶ್ ವಹಿಸಲಿದ್ದಾರೆ ಎಂದು ತಿಳಿಸಿದರು.

ಆಕಾಶವಾಣಿಯೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿರುವ ಡಾ.ಎಂ.ವಿ.ಗೋಪಾಲಸ್ವಾಮಿ ಕುಟುಂಬಸ್ಥರು, ನಾ.ಕಸ್ತೂರಿ ಕುಟುಂಬಸ್ಥರು, ಡಾ.ಆರ್.ವಿಶ್ವೇಶ್ವರನ್(ಸಂಗೀತ), ಡಾ.ಮಣಿಕರ್ಣಿಕ(ವೈದ್ಯಕೀಯ), ಡಾ.ಪಿ.ಕೆ.ರಾಜಶೇಖರ್(ಜಾನಪದ), ಪ್ರೊ.ಸಿ.ನಾಗಣ್ಣ(ಸಾಹಿತ್ಯ), ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್(ವಿಜ್ಞಾನ), ಡಾ.ಪುಷ್ಪಾವತಿ(ಶಿಕ್ಷಣ), ಡಾ.ಗಾಂಧಿದಾಸ್(ಸಂಶೋಧನೆ), ರೆ.ಫಾ.ಅಲೆಕ್ಸ್ ಪ್ರಶಾಂತ್ ಸಿಕ್ವೇರ(ಸಮಾಜ ಸೇವೆ), ಮಹೇಶ್ ಚಂದ್ರಗುರು (ಗ್ರಾಮೀಣಾಭಿವೃದ್ಧಿ), ಸೈಯದ್ ನಾಸಿರ್ ಅಹಮದ್(ಕೃಷಿ), ಪಿ.ರಮೇಶ್(ಸಹಕಾರ), ಎನ್.ನಾಗೇಂದ್ರ(ನಾಟಕ) ಹಾಗೂ ಸಮುದ್ಯತಾ ಶ್ರೋತೃ ಬಳಗವನ್ನು ಸನ್ಮಾನಿಸಲಾಗುತ್ತಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಆಕಾಶವಾಣಿಯ ಸಹಾಯಕ ನಿರ್ದೇಶಕ ಟಿ.ವಿ.ವಿದ್ಯಾಶಂಕರ್, ಉದ್ಘೋಷಕ ಡಾ.ಮೈಸೂರು ಉಮೇಶ್ ಇದ್ದರು.

ಮಾ.8ರಂದು ಬೃಹತ್ ಉದ್ಯೋಗ ಮೇಳ

ಮೈಸೂರು: ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಹಾಗೂ ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತಾಂಡವಪುರ ಸಹಯೋಗದಲ್ಲಿ ಮಾ.8ರಂದು ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆವರಣದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಉದ್ಯೋಗ ಮೇಳಕ್ಕೆ ಮೈಸೂರು–ಬೆಂಗಳೂರಿನ ಹೆಸರಾಂತ ಕಂಪನಿಗಳು ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ಆಯ್ಕೆಮಾಡಿಕೊಳ್ಳಲಿದ್ದು, ಜಿಲ್ಲೆಯ ನಿರುದ್ಯೋಗಿ ಅಭ್ಯರ್ಥಿಗಳು ಅಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಮಹಾರಾಜ ಇಸ್ಟಿಟ್ಯೂಟ್ ಆಫ್ ಟೆಕ್ನಾಲಿಜಿಯಲ್ಲಿ ಎಸ್.ಎಸ್.ಎಲ್.ಸಿ ಪಾಸು/ಫೇಲು, ಪಿಯುಸಿ/ಪದವಿ/ಐಟಿಐ/ಡಿಪ್ಲೋಮಾ/ಎಂ.ಬಿ.ಎ/ಸ್ನಾತಕೋತ್ತರದಲ್ಲಿ ತೇರ್ಗಡೆ ಹೊಂದಿದ 18ರಿಂದ 35 ವರ್ಷ ವಯೋಮಿತಿ ಹೊಂದಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಉದ್ಯೋಗ ಮೇಳ ಮೂಲಕ ಆಯ್ಕೆ ಮಾಡಿಕೊಳ್ಳತ್ತಿದೆ. ಮಾಹಿತಿಗಾಗಿ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ, ಮೈಸೂರು ಇವರನ್ನು ಕಚೇರಿ ವೇಳೆಯಲ್ಲಿ ಅಥವಾ ದೂ.ಸಂ: 0821–2970815, 8095856846 ಸಂಪರ್ಕಿಸಬಹುದು.

ಮೈಸೂರು ಪಾಲಿಕೆಗೆ ಚುನಾವಣೆ ನಡೆಸುವಂತೆ ಆಗ್ರಹಿಸಿ ಪ್ರತಿಭಟನೆ

ಮೈಸೂರು, ಮಾ.5(ಎಂಟಿವೈ)– ಜನಪ್ರತಿನಿಧಿಗಳಿಲ್ಲದೆ ಅಭಿವೃದ್ಧಿ ಕುಂಠಿತವಾಗಿರುವ ಮೈಸೂರು ಮಹಾನಗರ ಪಾಲಿಕೆಗೆ ಕೂಡಲೇ ಚುನಾವಣೆ ನಡೆಸುವಂತೆ ಒತ್ತಾಯಿಸಿ ಮೈಸೂರು ಮಹಾನಗರಪಾಲಿಕೆ ಚುನಾವಣೆ ಹೋರಾಟ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಮಹಾನಗರ ಪಾಲಿಕೆ ಕಚೇರಿ ಮುಂಭಾಗ ಬುಧವಾರ ವಿವಿಧ ಪಕ್ಷಗಳ ಕಾರ್ಯಕರ್ತರನ್ನೊಳಗೊಂಡಂತೆ ಮೈಸೂರು ಮಹಾನಗರ ಪಾಲಿಕೆ ಚುನಾವಣೆ ಹೋರಾಟ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಮೈಸೂರು ಮಹಾನಗರ ಪಾಲಿಕೆಯ ಆಡಳಿತಾವಧಿ ಮುಗಿದು ಒಂದೂವರೆ ವರ್ಷವಾದರೂ ಚುನಾವಣೆ ನಡೆಸಿಲ್ಲ. ಬೃಹತ್ ಮೈಸೂರು ಮಹಾನಗರಪಾಲಿಕೆ ಮಾಡುವ ನೆಪದಲ್ಲಿ ಚುನಾವಣೆಯನ್ನು ಮುಂದೂಡಲು ಯತ್ನಿಸಲಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದಂತೆ ಚುನಾವಣಾ ಆಯೋಗಕ್ಕೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಅಧಿಕಾರ ನೀಡಿದೆ. ಚುನಾವಣೆ ಸಮಯದಲ್ಲಿ ಸರ್ಕಾರಕ್ಕಿಂತ ಚುನಾವಣಾ ಆಯೋಗಕ್ಕೆ ಸರ್ವಾಧಿಕಾರ ನೀಡಲಾಗಿದೆ.



ಮೈಸೂರು ಪಾಲಿಕೆಗೆ ಚುನಾವಣೆ ನಡೆಸುವಂತೆ ಆಗ್ರಹಿಸಿ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು.


ಆದರೆ, ಆಡಳಿತಾವಧಿ ಮುಗಿದು ಒಂದೂವರೆ ವರ್ಷವಾದರೂ ಚುನಾವಣೆ ನಡೆಸದ ಆಯೋಗ ಸರ್ಕಾರದ ಕೈಗೊಂಬೆಯಾಗಿ ಕೆಲಸ ನಿರ್ವಹಿಸುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅವಧಿ ಮುಗಿಯುವುದರೊಳಗೆ ಚುನಾವಣೆ ನಡೆಯುತ್ತದೆ. ಆದರೆ, ಸ್ಥಳೀಯ ಸಂಸ್ಥೆಗಳ ಅವಧಿ ಮುಗಿಯುವುದರೊಳಗೆ ಚುನಾವಣಾ ನಡೆಸಲು ಮನಸ್ಸು ಮಾಡುತ್ತಿಲ್ಲ. ಚುನಾವಣಾ ಆಯೋಗ ಸಿದ್ಧವಿದ್ದರೂ ಮೀಸಲಾತಿಯ ನೆಪವೊಡ್ಡಿ ಮುಂದೂಡುತ್ತಾ ಬಂದಿರುವುದು ಸಂವಿಧಾನಕ್ಕೆ ಮಾಡುತ್ತಿರುವ ದ್ರೋಹ ಎಂದು ದೂರಿದರು.

ಕೂಡಲೇ ಮೈಸೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸಬೇಕು. ಪಾಲಿಕೆ ಸದಸ್ಯರಿಲ್ಲದೆ ಆಡಳಿತಾತ್ಮಕ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ಅಭಿವೃದ್ಧಿ ಕಾರ್ಯ ಕುಂಠಿತವಾಗಿದೆ. ಅಧಿಕಾರಿಗಳಿಂದ ಪರಿಣಾಮಕಾರಿ ಆಡಳಿತ ನಡೆಸಲು ಸಾಧ್ಯವಾಗದ ಕಾರಣ ಚುನಾವಣೆ ನಡೆಸಬೇಕು. ಸ್ಥಳೀಯ ಸಂಸ್ಥೆಗಳಿಗೆ ಕೂಡಲೇ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪ್ರೊ.ನಂಜರಾಜೇ ಅರಸ್, ಕೆಆರ್‌ಎಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ಆಮ್ ಆದ್ಮಿ ಪಕ್ಷದ ಸದಸ್ಯ ಸೋಸಲೆ ಸಿದ್ದರಾಜು, ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ಸೋಮರಾಜ ಅರಸು, ರಾಮಯ್ಯ, ಮಾ.ಸ.ಪ್ರವೀಣ್, ನಾಗೇಂದ್ರ, ಎಂ.ಎಫ್.ಕಲೀಂ, ಸುರೇಶ್ ಬಾಬು, ನಾಲಾಬೀದಿ ರವಿ, ಕೆಆರ್‌ಎಸ್, ಬಿಎಸ್‌ಪಿ, ಆಮ್ ಆದ್ಮಿ, ಎಸ್‌ಡಿಪಿಐ, ಸಿಪಿಐ ಹಾಗೂ ಕಾರ್ಮಿಕ ಸಂಘಟನೆಯ ಮುಖಂಡರು ಪಾಲ್ಗೊಂಡಿದ್ದರು.

ಶ್ರೀ ಕ್ಷೇತ್ರ ಆದಿಚುಂಚನಗಿರಿಯಲ್ಲಿ ನಾಳೆಯಿಂದ ಜಾತ್ರಾ ಮಹೋತ್ಸವ



ನಾಗಮಂಗಲ, ಮಾ.5– ಪರಶಿವನ ತಪೋ ಭೂಮಿ, ದೇವಾನುದೇವತೆಗಳು ನೆಲೆಸಿರುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರವಾದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಮಾ.7ರಿಂದ 15ರವರೆಗೆ ಒಂಬತ್ತು ದಿನಗಳ ಕಾಲ ಜಾತ್ರಾ ಮಹೋತ್ಸವ ನಡೆಯಲಿದೆ. ಈ ಪ್ರಯುಕ್ತ ಶ್ರೀ ಕ್ಷೇತ್ರದಲ್ಲಿ ವಿವಿಧ ಪೂಜಾ ಕೈಂಕರ್ಯ, ಹಲವು ಧಾರ್ಮಿಕ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಮಾ.7ರ ಬೆಳಗ್ಗೆ 6.30ಕ್ಕೆ ಶ್ರೀ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ನಂದಿ ಪೂಜೆ ಹಾಗೂ ಧರ್ಮ ಧ್ವಜಾರೋಹಣ ನೆರವೇರಿಸಲಿದ್ದಾರೆ. ಈ ಮೂಲಕ 9 ದಿನಗಳ ಜಾತ್ರಾ ಮಹೋತ್ಸವಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡುವರು. ಅದೇ ದಿನ ಬೆಳಗ್ಗೆ 10ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ.

ಮಾ.8ರ ಸಂಜೆ 6 ಗಂಟೆಗೆ ಸರ್ವಾಲಂಕೃತ ಶ್ರೀ ಚಂದ್ರಮೌಳೇಶ್ವರಸ್ವಾಮಿ ಉತ್ಸವ ನಡೆಯಲಿದೆ. ಮಾ.9ರ ಸಂಜೆ 6ಕ್ಕೆ ಸರ್ವಾಲಂಕೃತ ಶ್ರೀ ಮಲ್ಲೇಶ್ವರಸ್ವಾಮಿಯ ಉತ್ಸವ ನಡೆಯಲಿದೆ. ಮಾ.10ರ ಬೆಳಗ್ಗೆ 9.30ಕ್ಕೆ ಸರಳ ಸಾಮೂಹಿಕ ವಿವಾಹ ಮತ್ತು ಹಿರಿಯ ದಂಪತಿಗಳಿಗೆ ಸನ್ಮಾನ ಸಮಾರಂಭ ಸಂಜೆ 6 ಗಂಟೆಗೆ ಸಿದ್ದೇಶ್ವರ ಸ್ವಾಮಿ ಉತ್ಸವ. ಮಾ 11. ಬೆಳಗ್ಗೆ 7.30ಕ್ಕೆ ಶ್ರೀ ಕಾಲಭೈರವೇಶ್ವರ ಸ್ವಾಮಿಗೆ ಸುವರ್ಣ ಕವಚಾಲಂಕಾರ ಪೂಜೆ ಮತ್ತು ಶ್ರೀ ಗಂಗಾಧರೇಶ್ವರ ಸ್ವಾಮಿಗೆ ರಜತ ನಾಗಾಭರಣ ಅಲಂಕಾರ ಪೂಜೆ ನಡೆಯಲಿದೆ. ಸಂಜೆ 6ಕ್ಕೆ ಶ್ರೀ ಕಾಲಭೈರವೇಶ್ವರಸ್ವಾಮಿ ಹೂವಿನ ಪಲಕ್ಕಿ ಉತ್ಸವ ಮತ್ತು ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಲಿದೆ.

ಮಾ.12ರ ಸಂಜೆ 6ಕ್ಕೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಜ್ವಾಲಾ ಪೀಠಾರೋಹಣ ಮತ್ತು ಸಿದ್ಧ ಸಿಂಹಾಸನ ಪೂಜೆ ನಡೆಯಲಿದೆ. ಹಾಗೂ ರಾತ್ರಿ 8ಕ್ಕೆ ಚಂದ್ರ ಮಂಡಲೋತ್ಸವ ಪೂಜೆ ನಡೆಯಲಿದೆ.

ಮಾ.13ರ ಸಂಜೆ 6.30ಕ್ಕೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ದಿವ್ಯಸಾನಿಧ್ಯದಲ್ಲಿ ಸರ್ವಧರ್ಮ ಸಮ್ಮೇಳನ ನಡೆಯಲಿದೆ. ರಾತ್ರಿ 8 ಗಂಟೆಗೆ ಶ್ರೀ ಕಾಲಭೈರವೇಶ್ವರ ಸ್ವಾಮಿಯ ತಿರುಗಣಿ ಉತ್ಸವ, ರಾತ್ರಿ 9ಕ್ಕೆ ಶ್ರೀ ಕಾಲಭೈರವೇಶ್ವರ ಸ್ವಾಮಿಗೆ ಪುಷ್ಕರಣಿಯಲ್ಲಿ ತೆಪ್ಪೋತ್ಸವ ರಾತ್ರಿ 9.30ಕ್ಕೆ ನಾಟಕ ಪ್ರದರ್ಶನಗಳು ನಡೆಯಲಿವೆ.

ಮಾ.14ರ ಮುಂಜಾನೆ ನಡೆಯಲಿರುವ ಬ್ರಾಹ್ಮಿ ಮೂಹೂರ್ತದಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿಯ ಮಹಾರಥೋತ್ಸವ ಹಾಗೂ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಅಡ್ಡ ಪಲ್ಲಕ್ಕಿ ಉತ್ಸವ ಬಹಳ ವಿಜೃಂಭಣೆಯಿಂದ ಜರುಗಲಿದೆ. ನಾಡಿನಾದ್ಯಂತ ಸಾವಿರಾರು ಭಕ್ತರು ಈ ರಥೋತ್ಸವಕ್ಕೆ ಸಾಕ್ಷಿಯಾಗಲಿದ್ದಾರೆ. ಹಾಗೆಯೇ ಸಂಜೆ 6ಕ್ಕೆ ವಿವಿಧ ಗ್ರಾಮಗಳ ನೂರಾರು ಗ್ರಾಮದೇವತೆಗಳ ಮೆರವಣಿಗೆ ಮುಖಾಂತರ ಗಿರಿ ಪ್ರದಕ್ಷಿಣೆ ನಡೆಯಲಿದೆ. ಬಳಿಕ ಸಂಜೆ 6ಕ್ಕೆ ಶ್ರೀ ಸೋಮೇಶ್ವರ ಸ್ವಾಮಿಯ ಉತ್ಸವ ಜರುಗಲಿದೆ.

ಏ.7ಕ್ಕೆ ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ

ಏ.2ರಿಂದ ಧಾರ್ಮಿಕ ಕಾರ್ಯಕ್ರಮಗಳು, ಸೂಕ್ತ ಸಿದ್ಧತೆ ಕೈಗೊಳ್ಳಲು ಡಿಸಿ ಸೂಚನೆ

ಮಂಡ್ಯ: ಜಿಲ್ಲಾಡಳಿತದ ವತಿಯಿಂದ ಮೇಲುಕೋಟೆಯ ಚಲುವರಾಯಸ್ವಾಮಿಯ ಶ್ರೀ ವೈರಮುಡಿ ಬ್ರಹ್ಮೋತ್ಸವವು ಏ.7ರಂದು ನಡೆಯಲಿದ್ದು, ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿ ವೈರಮುಡಿ ಉತ್ಸವದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಏಪ್ರಿಲ್ 2 ರಿಂದ 14ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಉತ್ಸವಗಳು ನಡೆಯಲಿದೆ. ಯಾವುದೇ ಲೋಪವಿಲ್ಲದೇ ಕಾರ್ಯಕ್ರಮಗಳನ್ನು ನಡೆಸಲು ಸಮಿತಿ ರಚಿಸಿ ವಿವಿಧ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸಿದರು ಎಂದರು.

ಲಕ್ಷಾಂತರ ಜನರು ಕಾರ್ಯಕ್ರಮದಲ್ಲಿ ಭಾಗವಹಿಸುವ ಹಿನ್ನೆಲೆಯಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು. ನೀರನ್ನು ಪರೀಕ್ಷೆಗೆ ಒಳಪಡಿಸಿ ಕುಡಿಯಲು ಯೋಗ್ಯವಾಗಿರುವ ಬಗ್ಗೆ ಖಾತ್ರಿ ಪಡಿಸಬೇಕು. ಹಾಲಿ ಇರುವ ನಲ್ಲಿಗಳು, ನೀರಿನ ಟ್ಯಾಂಕ್ ಹಾಗೂ ತೊಂಬೆಗಳನ್ನು ಸ್ವಚ್ಛಗೊಳಿಸಬೇಕು. ಅವಶ್ಯವಿರುವ ಕಡೆ ಹೆಚ್ಚುವರಿ ತಾತ್ಕಾಲಿಕ ನಲ್ಲಿಗಳನ್ನು ಅಳವಡಿಸಬೇಕು ಎಂದರು.



19 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನ ಹಾಗೂ ಸುತ್ತುಮುತ್ತಲಿನ ಪ್ರದೇಶದಲ್ಲಿ ಖಾಯಂ ಆಗಿ ಸಿ.ಸಿ ಕ್ಯಾಮರಾ ಅಳವಡಿಸಲು ಯೋಜನೆ ರೂಪಿಸಿದ್ದು, ಸಿ.ಸಿ. ಕ್ಯಾಮರಾದ ನಿರ್ವಹಣೆಯನ್ನು ಮುಂದಿನ ದಿನಗಳಲ್ಲಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿಯಿಂದ ನಿರ್ವಹಿಸುವಂತೆ ತಿಳಿಸಿದರು.

ದೇವಾಲಯದ ಒಳ ಹಾಗೂ ಹೊರ ಆವರಣಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವುದು. ದೂಳು ನಿಯಂತ್ರಿಸಲು ಟ್ಯಾಂಕರ್ ಮೂಲಕ ನೀರು ಚಿಮುಕಿಸುವುದು. ಸ್ವಚ್ಛತೆಗಾಗಿ ಹೆಚ್ಚು ಸಿಬ್ಬಂದಿಗಳನ್ನು ನಿಯೋಜಿಸುವುದು ಎಂದರು.

ಅಗತ್ಯವಿರುವ ಸ್ಥಳಗಳಲ್ಲಿ ಹಾಗೂ ಪಾರ್ಕಿಂಗ್ ಸ್ಥಳದಲ್ಲಿ ತಾತ್ಕಾಲಿಕ ಶೌಚಾಲಯಗಳನ್ನು ತೆರೆಯುವುದು. ಆರೋಗ್ಯ ಇಲಾಖೆಯಿಂದ ವೈರಮುಡಿ ಉತ್ಸವದ ದಿನದಂದು ದಿನದ 24 ಗಂಟೆಗಳ ಕಾಲ ವೈದ್ಯರ ಕೆಲಸ ನಿರ್ವಹಣೆಗಾಗಿ 3 ಪಾಳಿಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಬೇಕು ಎಂದರು.

ಮೇಲುಕೋಟೆಗೆ ವಿವಿಧ ಭಾಗಗಳಿಂದ ಸಂಪರ್ಕಿಸುವ ಮುಖ್ಯರಸ್ತೆಗಳು ಹಾಗೂ ಗ್ರಾಮ ವ್ಯಾಪ್ತಿಯ ರಸ್ತೆಗಳ ದುರಸ್ತಿಯಾಗಬೇಕು. ರಸ್ತೆ ತಿರುವುಗಳು, ಹಂಪ್‌ಗಳು ಇರುವ ಕಡೆಗಳಲ್ಲಿ ವೇಗಮಿತಿ ಇರುವ ಕಡೆ ಸಾಕಷ್ಟು ಸಂಖ್ಯೆಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ ಅವರು ಮಾತನಾಡಿ, ವೈರಮುಡಿ ಉತ್ಸವದ ದಿನದ 24 ಗಂಟೆಗಳು ಪ್ರಸಾದ ವಿನಿಯೋಗದ ವ್ಯವಸ್ಥೆಯಾಗಬೇಕು. ತಯಾರಾಗುವ ಆಹಾರವನ್ನು ಆಹಾರ ಸುರಕ್ಷತಾ ಅಧಿಕಾರಿಗಳು, ಸಿಬ್ಬಂದಿಗಳು ಪರೀಕ್ಷೆಗೆ ಒಳಪಡಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಕೆಎಸ್‌ಆರ್‌ಟಿಸಿ ಜಿಲ್ಲಾ ನಿಯಂತ್ರಕ ನಾಗರಾಜು, ಮುಜರಾಯಿ ತಹಸೀಲ್ದಾರ್ ತಮ್ಮೇಗೌಡ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬೇಬಿ ಗ್ರಾಮದಲ್ಲಿ ಮನ್‌ಮುಲ್ ನಿರ್ದೇಶಕರಿಗೆ ಸನ್ಮಾನ

ಚಿನಕುರಳಿ,ಮಾ.5– ಮನ್‌ಮುಲ್ ಚುನಾವಣೆಯಲ್ಲಿ ಅಧಿಕ ಮತಗಳನ್ನು ನೀಡುವ ಮೂಲಕ ಗೆಲುವು ತಂದು ಕೊಟ್ಟು ಜವಾಬ್ದಾರಿ ಹೆಚ್ಚಿಸಿದ್ದೀರಿ. ನಿಮ್ಮ ನಂಬಿಕೆಗೆ ಚ್ಯುತಿಬಾರದಂತೆ ಕೆಲಸ ಮಾಡುತ್ತೇನೆ ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹೇಳಿದರು.

ಬೇಬಿ ಗ್ರಾಮದಲ್ಲಿ ಮನ್‌ಮುಲ್ ನಿರ್ದೇಶಕರಿಗೆ ಅಭಿನಂದನೆ ಹಾಗೂ ಹೊನ್ನಗಾನಹಳ್ಳಿ ಗ್ರಾಪಂ ವ್ಯಾಪ್ತಿಯ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕರು, ಡೇರಿ ನಿರ್ದೇಶಕರು, ಗ್ರಾಪಂ ಸದಸ್ಯರಿಗೆ ನಡೆದ ಅಭಿನಂದನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಭಿನಂದನೆ ಸಲ್ಲಿಸುವ ಮೂಲಕ ಎಲ್ಲರೂ ಸೇರಿ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದ್ದೀರಿ, ನನ್ನ ಅಧಿಕಾರ ಅವಧಿಯಲ್ಲಿ ಹೈನುಗಾರಿಕೆ ಅಭಿವೃದ್ದಿಗೆ ಪೂರಕವಾಗಿ ಕೆಲಸ ಮಾಡುವ ಜೊತೆಗೆ ಒಕ್ಕೂಟದಿಂದ ಉತ್ಪಾದಕರಿಗೆ ದೊರೆಯುವ ಸೌಲತ್ತುಗಳನ್ನು ಒದಗಿಸಿಕೊಡುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್. ಗೋಪಾಲಗೌಡ ಮಾತನಾಡಿದರು. ಇದೇ ವೇಳೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಚಿನಕುರಳಿ ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ ಸೇರಿದಂತೆ ವಿಎಸ್‌ಎಸ್‌ಎನ್‌ಬಿ, ಡೇರಿ ನಿರ್ದೇಶಕರು ಹಾಗೂ ಗ್ರಾಪಂ ಸದಸ್ಯರನ್ನು ಅಭಿನಂದಿಸಿದರು.



ಬೇಬಿಗ್ರಾಮದಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಚಿನಕುರಳಿ ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ ಸೇರಿದಂತೆ ವಿಎಸ್‌ಎಸ್‌ಎನ್‌ಬಿ, ಡೇರಿ ನಿರ್ದೇಶಕರು ಹಾಗೂ ಗ್ರಾಪಂ ಸದಸ್ಯರನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಡೇರಿ ಅಧ್ಯಕ್ಷೆ ದ್ರಾಕ್ಷಾಯಿಣಿ, ಉಪಾಧ್ಯಕ್ಷೆ ಪಾರ್ವತಮ್ಮ ತಮ್ಮಯ್ಯ, ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ವೀರಶೈವ–ಲಿಂಗಾಯಿತ ಮಹಾಸಭಾ ಜಿಲ್ಲಾಧ್ಯಕ್ಷ ಎಸ್.ಆನಂದ್, ತಾಲೂಕು ಅಧ್ಯಕ್ಷ ಶಿವಕುಮಾರ್, ಉಪಾಧ್ಯಕ್ಷ ಜಯಣ್ಣ, ಸುರೇಂದ್ರ ಗ್ರಾಪಂ ಅಧ್ಯಕ್ಷೆ ಪುಟ್ಟಲಿಂಗಮ್ಮ, ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗವಿಸ್ತರಣಾಧಿಕಾರಿ ಉಷಾ, ಶಿಂಢಭೋಗನಹಳ್ಳಿ ನಾಗಣ್ಣ, ಗ್ರಾಪಂ ಸದಸ್ಯ ಚಂದ್ರಶೇಖರಯ್ಯ, ಪುಟ್ಟಮ್ಮ, ಪದ್ಮಮ್ಮ, ಚಂದ್ರಣ್ಣ, ತಾಯಮ್ಮ, ಸಿಂಗಯ್ಯ, ಜೈಕುಮಾರ್, ಗೋವಿಂದಯ್ಯ, ಗಿರೀಶ್, ಚೈತ್ರ, ತಮ್ಮಯ್ಯ, ಕಾರ್ಯದರ್ಶಿ ಗೀತಾ ಸೇರಿದಂತೆ ಹಲವರು ಭಾಗವಹಿಸಿದ್ದರು.

ನಾಳೆ ಉದ್ಯೋಗ ಮೇಳ

ಮಂಡ್ಯ, ಮಾ.3– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮಾ.7 ರಂದು ಬೆಳಗ್ಗೆ 10 ಗಂಟೆಗೆ ಆರ್‌ಟಿಓ ಕಚೇರಿ ಎದುರು ಇರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಉದ್ಯೋಗ ಮೇಳ ಏರ್ಪಡಿಸಲಾಗಿದೆ. ಮಾಹಿತಿಗೆ ಸಂಪರ್ಕಿಸಿ ದೂ. 08232 –295124, 9164642684

ವಿಧಾನಸೌಧಕ್ಕೆ ಇಂದು ಪಾದಯಾತ್ರೆ

ಮಂಡ್ಯ,ಮಾ.5– ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಯನ್ನು ಖಂಡಿಸಿ ಹಾಗೂ ರೈತರ ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ಆಗ್ರಹಿಸಿ ಪಚ್ಚೆ ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘಗಳ ಏಕೀಕರಣ ಒಕ್ಕೂಟದ ವತಿಯಿಂದ ಮಾ.6ರಂದು ಬೆಳಗ್ಗೆ 10.30ಕ್ಕೆ ಬೆಂಗಳೂರು ರೈಲ್ವೆ ನಿಲ್ದಾಣದಿಂದ ವಿಧಾನಸೌಧದವರೆಗೆ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟ ಪ್ರಧಾನ ಕಾರ್ಯದರ್ಶಿ ಮಂಜೇಗೌಡ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ವಿರೋಧಿ ನೀತಿ ಅನುಸರಿಸುವ ಸರ್ಕಾರಗಳಿಂದ ರೈತನ ಸಾಲದ ಹೊರೆ ಹೆಚ್ಚಾಗಿ, ದುಡಿಯುವ ವರ್ಗ ಆರ್ಥಿಕ ಶಕ್ತಿ ಬಲವರ್ಧನೆಗೆ ಯಾವುದೇ ಭರವಸೆ ಇಲ್ಲವಾಗಿದೆ ಎಂದರು.

ಕೃಷಿ ಚಟುವಟಿಕೆಗೆ ಅಗತ್ಯ ವಸ್ತುಗಳು, ಉಪಕರಣಗಳು ಹೆಚ್ಚಾಗಿದ್ದು ಅವುಗಳ ಮೇಲೆ ಜಿಎಸ್‌ಟಿ ಹೊರೆ, ರೈತರಿಗೆ ಕನಿಷ್ಠ ಬೆಂಬಲ ಬೆಲೆ ದೊರೆಯದಿರುವುದು ಮತ್ತಿತರ ಕಾರಣಗಳಿಂದಾಗಿ ಕೃಷಿ ಉದ್ದೇಶಿತ ಜಮೀನು ಶೇ.58ರಷ್ಟು ಕ್ಷೀಣಿಸಿದೆ ಎಂದರು.

ಕೃಷಿ ಪತ್ತಿನ ಸಹಕಾರ ಸಂಘ ಕಾಂಗ್ರೆಸ್ ತೆಕ್ಕೆಗೆ



ಕೆ.ಆರ್.ಪೇಟೆ,ಮಾ.5– ತಾಲೂಕಿನ ಸಂತೇಬಾಚಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ 12 ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು 10 ಸ್ಥಾನಗಳಲ್ಲಿ ಭರ್ಜರಿ ಜಯ ಸಾಧಿಸುವ ಮೂಲಕ ಸಂಘದ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿವೆ.

ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದಿಂದ ಹಡವನಹಳ್ಳಿ ಗೋಪಾಲ್(502), ಲೋಕನಹಳ್ಳಿ ಎಂ.ಪುನೀತ್(536), ಹುಬ್ಬನಹಳ್ಳಿ ದಶರಥ(479), ದೊಡ್ಡಕ್ಯಾತನಹಳ್ಳಿ ಮಂಜೇಗೌಡ(456), ಮೀಸಲು ಕ್ಷೇತ್ರದಿಂದ ಛಾಯಾ ಕೃಷ್ಣ(602), ಎನ್.ಲಕ್ಷ್ಮೀ ಮಂಜೇಗೌಡ(419), ಬಿಸಿಎಂ.ಎ ಮೀಸಲು ಕ್ಷೇತ್ರದಿಂದ ಹರೀಶ್(532), ಬಿಸಿಎಂ.ಬಿ.ಮೀಸಲು ಕ್ಷೇತ್ರದಿಂದ ಬಿ.ಮೋಹನ್(558), ಎಸ್.ಸಿ.ಮೀಸಲು ಕ್ಷೇತ್ರದಿಂದ ಹುಬ್ಬನಹಳ್ಳಿ ಸುರೇಶ್(397), ಎಸ್.ಟಿ.ಮೀಸಲು ಕ್ಷೇತ್ರದಿಂದ ಹಡವನಹಳ್ಳಿ ಕುಮಾರ್(372) ಮತಗಳನ್ನು ಪಡೆದ ಭರ್ಜರಿ ಜಯ ಸಾಧಿಸಿದ್ದಾರೆ.

ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಲೋಕನಹಳ್ಳಿ ಎಲ್.ಎಸ್.ದಿನೇಶ್(ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರ) ಹಾಗೂ ಹಡವನಹಳ್ಳಿ ಮಹಾದೇವಪ್ಪ(394) (ಸಾಮಾನ್ಯ ಕ್ಷೇತ್ರ)ದಿಂದ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಆನಂದ್‌ನಾಯಕ್, ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಅಜಿತ್ ಕಾರ್ಯನಿರ್ವಹಣೆ ಮಾಡಿದರು.

ಭರ್ಜರಿ ಜಯ ಸಾಧಿಸಿದ ಎಲ್ಲಾ ನಿರ್ದೇಶಕರುಗಳನ್ನು ಮನ್‌ಮುಲ್ ನಿರ್ದೇಶಕ ಡಾಲು ರವಿ, ಹುಬ್ಬನಹಳ್ಳಿ ಕುಮಾರಸ್ವಾಮಿ, ಮಾಳಗೂರು ಜಗದೀಶ್, ಡಿ.ಪಿ.ಪರಮೇಶ್, ಹಡವನಹಳ್ಳಿ ದಿನೇಶ್(ದೇವರಾಜು) ಸೇರಿದಂತೆ ಹಲವು ಗಣ್ಯರು, ನೂರಾರು ಮುಖಂಡರು ಅಭಿನಂದಿಸಿದರು.

ಮಾ.14 ರಂದು ಗುತ್ತಲು ಶ್ರೀ ಅರ್ಕೇಶ್ವರಸ್ವಾಮಿ ರಥೋತ್ಸವ

ಮಂಡ್ಯ,ಮಾ.5– ನಗರದ ಗುತ್ತಲು ಶ್ರೀ ಅರ್ಕೇಶ್ವರಸ್ವಾಮಿ ದೇವಾಲಯದ 2024–25ನೇ ಸಾಲಿನ ಬ್ರಹ್ಮ ರಥೋತ್ಸವವನ್ನು ಮಾ.14ರಂದು ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು ಬೆಳಗ್ಗೆ 9.41 ರಿಂದ 10.29ರ ಸುಮಾರಿಗೆ ರಥೋತ್ಸವ ಪ್ರಾರಂಭವಾಗಲಿದೆ.

ಶ್ರೀ ಶೈವಾಗಮೋಕ್ತ ವಿಶೇಷ ಪೂಜಾ ಉತ್ಸವಾದಿಗಳ ಕಾರ್ಯಕ್ರಮಗಳು ಮಾ.8 ರಿಂದ ಪ್ರಾರಂಭವಾಗಿ ಮಾರ್ಚ್ 17 ರಂದು ಮುಕ್ತಾಯವಾಗಲಿದ್ದು, ಪ್ರತಿ ದಿನವು ಸಾಂಪ್ರದಾಯದಂತೆ ಪೂಜಾಕೈಂಕರ್ಯಗಳನ್ನು ನೆರವೇರಿಸಲಾಗುವುದು.

ನೀರು ಪೂರೈಕೆ ವ್ಯತ್ಯಯ

ಮಂಡ್ಯ,ಮಾ.5– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆಯಡಿ ಶ್ರೀರಂಗಪಟ್ಟಣ ಸಮೀಪವಿರುವ ಮೂಲಸ್ಥಾವರಕ್ಕೆ ಸೆಸ್ಕ್ ವತಿಯಿಂದ ವಿದ್ಯುತ್ ನಿರ್ವಹಣಾ ಕಾಮಗಾರಿ ಸಲುವಾಗಿ ವಿದ್ಯುತ್ ನಿಲುಗಡೆ ಮಾಡುವುದಾಗಿ ತಿಳಿಸಿದ್ದು, ಮಾ.6 ರಂದು ಮಂಡ್ಯ ನಗರಕ್ಕೆ ನೀರನ್ನು ಪಂಪು ಮಾಡಲು ಸಾಧ್ಯವಾಗದ ಕಾರಣ ಮಾರ್ಚ್ 6 ಮತ್ತು 7 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಒಂದನೇ ಪುಟದಿಂದ

ಡಿಕೆಶಿ–ಸಚಿವ ರಾಜಣ್ಣ ಜಟಾಪಟಿ

ಶಿವಕುಮಾರ್ ಅವರೇ ಉಳಿದವರೊಂದಿಗೆ ಚರ್ಚೆ ನಡೆಸಿ ತೆರಳಿದ್ದಾರೆ. ತಮ್ಮನ್ನೇ ಸಂಪುಟದಿಂದ ಕೈಬಿಡುವಂತೆ ವರಿಷ್ಠರಿಗೆ ದೂರು ನೀಡಿರುವ ಶಿವಕುಮಾರ್ ವಿರುದ್ಧ ಸಿಡಿದೆದ್ದಿರುವ ರಾಜಣ್ಣ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮನೆಯಲ್ಲಿ ವಾಲ್ಮೀಕಿ ಸಮುದಾಯದ, ಪಕ್ಷಕ್ಕೆ ಸೇರಿದ 17 ಶಾಸಕರ ಸಭೆ ನಡೆಸಿದ್ದಾರೆ.

ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಡಬಾರದೆಂದು ಮುಖ್ಯಮಂತ್ರಿ ಅವರನ್ನು ಸಭೆ ಒತ್ತಾಯಿಸಿರುವುದಲ್ಲದೆ, ಲೋಕೋಪಯೋಗಿ ಮತ್ತು ಸಹಕಾರಿ ಇಲಾಖೆಯಲ್ಲಿ ಬೇರೆಯವರು ಹಸ್ತಕ್ಷೇಪ ಮಾಡಬಾರದೆಂಬ ಮನವಿ ಮಾಡಲು ತೀರ್ಮಾನ ಕೈಗೊಂಡಿದೆ.

ಶಿವಕುಮಾರ್ ತಮ್ಮ ಸಹೋದರ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಅವರನ್ನು ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೂ, ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಸಂಬಂಧಿ ವಿಧಾನಪರಿಷತ್ ಸದಸ್ಯ ರವಿ ಅವರನ್ನು ನೇಮಕ ಮಾಡಲು ಆಸಕ್ತಿ ಹೊಂದಿದ್ದಾರೆ.

ಬಿಜೆಪಿ ಮಾಜಿ ಶಾಸಕ ಬೆಳ್ಳಿ ಪ್ರಕಾಶ್ ಅಪೆಕ್ಸ್ ಬ್ಯಾಂಕ್‌ನ ಹಾಲಿ ಅಧ್ಯಕ್ಷರು, ಅವರನ್ನು ಕೆಳಗಿಳಿಸಿ ರವಿ ಅವರನ್ನು ತರಬೇಕು, ಅದು ಸಾಧ್ಯವಾಗದಿದ್ದರೆ, ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಧುರೀಣ ರಾಜೇಂದ್ರ ಕುಮಾರ್, ಇಲ್ಲವೇ ಶಿವಮೊಗ್ಗದ ಮತ್ತೊಬ್ಬ ಸಹಕಾರಿ ಧುರೀಣ ಮಂಜುನಾಥ್ ಗೌಡ ಅವರಲ್ಲಿ ಒಬ್ಬರನ್ನು ಕೂರಿಸಬೇಕೆಂದು ಶಿವಕುಮಾರ್ ತೀರ್ಮಾನಿಸಿದ್ದಾರೆ.

ಶಿವಕುಮಾರ್ ಅವರ ತೀರ್ಮಾನವನ್ನು ರಾಜಣ್ಣ ಸಂಪೂರ್ಣ ತಳ್ಳಿಹಾಕಿ, ಅವರು ಕರೆದ ಸಭೆಗೂ ಹೋಗದೆ, ಬೆಳ್ಳಿ ಪ್ರಕಾಶ್ ಅವರನ್ನೇ ಮುಂದುವರೆಸೋಣ, ಅವರನ್ನು ಕಾಂಗ್ರೆಸ್‌ಗೆ ಕರೆ ತರೋಣ, ಬೇಡವೆಂದಾದರೆ, ಬೇರೆ ಧುರೀಣರನ್ನು ನೇಮಕ ಮಾಡೋಣ ಎಂದು ಪಟ್ಟು ಹಿಡಿದಿದ್ದಾರೆ. ರಾಜಣ್ಣ ಮಾತಿಗೆ ಮುಖ್ಯಮಂತ್ರಿಗಳ ಬೆಂಬಲವೂ ಇದ್ದಂತಿದೆ, ಆದರೆ, ಶಿವಕುಮಾರ್ ಮಾತ್ರ ತಮ್ಮ ಹೋರಾಟ ಮುಂದುವರೆಸಿರುವುದಲ್ಲದೆ, ಎಐಸಿಸಿ ಬಾಗಿಲನ್ನೂ ತಟ್ಟಿದ್ದಾರೆ. ಈ ಮಧ್ಯೆ, ಸುದ್ದಿಗಾರರೊಂದಿಗೆ ಮಾತನಾಡಿದ ರಾಜಣ್ಣ, ಸಮುದಾಯದ ಸಮಸ್ಯೆಗಳ ಕುರಿತು ಚರ್ಚಿಸಲು ಸ್ವಾಮೀಜಿಗಳು ಸಭೆ ಕರೆದಿದ್ದರು, ಅದರಲ್ಲಿ ರಾಜಕೀಯ ವಿಚಾರವಿಲ್ಲ ಎಂದು ಸ್ಪಷ್ಟಪಡಿಸಿದರು. ನನ್ನ ಆರೋಗ್ಯ ಸರಿ ಇಲ್ಲದ ಕಾರಣ ಶಿವಕುಮಾರ್ ಕರೆದಿದ್ದ ಸಭೆಗೆ ಹೋಗಲು ಸಾಧ್ಯವಾಗಲಿಲ್ಲ, ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರ ನೇಮಕಾತಿಗೆ ಅದರ ಮಂಡಳಿ ಸದಸ್ಯರು ತೀರ್ಮಾನ ಕೈಗೊಳ್ಳಬೇಕು, ಅಲ್ಲಿ ಯಾರಿಗೆ ಬಹುಮತವಿದೆಯೋ ಅವರು ಅಧಿಕಾರದ ಚುಕ್ಕಾಣಿ ಹಿಡಿಯುತ್ತಾರೆ. ಹಾಲಿ ಅಧ್ಯಕ್ಷ ಬೆಳ್ಳಿ ಪ್ರಕಾಶ್ ಅವರಿಗೆ ಬೆಂಬಲ ಇಲ್ಲ ಎಂದಾದರೆ, ಮತ್ತೊಬ್ಬರು ಅಧಿಕಾರಕ್ಕೆ ಬರುತ್ತಾರೆ ಎಂದರು.

5 ಮಸೂದೆಗಳ ಮಂಡನೆ

ವಿಧೇಯಕ 2025 ಅನ್ನು ಮಂಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಚಿವ ಪ್ರಿಯಾಂಕ್ ಖರ್ಗೆಯವರು ನಿನ್ನೆ ವಿಧಾನಮಂಡಲದಲ್ಲಿ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ 2025ವನ್ನು ಮಂಡನೆ ಮಾಡಿದ್ದಾರೆ.

ಈ ವಿಧೇಯಕವು 1996ರ ಬೆಂಗಳೂರು ಅರಮನೆ (ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆಗೆ ಪೂರಕವಾಗಿದೆ. ಹಿಂದಿನ ವಿಧೇಯಕವು ಬೆಂಗಳೂರು ಅರಮನೆಯ 472.16 ಎಕರೆ ಭೂಮಿಯನ್ನು ರೂ.11 ಕೋಟಿ ಎಂದು ನಿಗದಿ ಮಾಡಲಾಗಿದೆ. ಅದರಂತೆ ಪರಿಹಾರ ನೀಡಬಹುದಾಗಿದೆ. ಆದರೆ, ರಸ್ತೆ ಅಗಲೀಕರಣಕ್ಕಾಗಿ ಮಾಡಿಕೊಳ್ಳಲಾಗುವ 15.39 ಎಕರೆ ಅರಮನೆ ಮೈದಾನದ ಭೂಮಿಗೆ ಕರ್ನಾಟಕ ಸ್ಟಾಂಪು ಅಧಿನಿಯಮ 1957ರ 45ಬಿ ಪ್ರಕರಣದ ಪ್ರಕಾರ ಅಕ್ಕಪಕ್ಕದ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯದಂತೆ ಟಿಡಿಆರ್ ನೀಡಬೇಕು ಎಂದು ಆದೇಶಿಸಿದೆ. ಸರ್ವೋಚ್ಛ ನ್ಯಾಯಾಲಯದ ಆದೇಶದಿಂದ ಸಂಕೀರ್ಣ ಪರಿಣಾಮಗಳು ಬೀರಲಿವೆ. ಅದನ್ನು ತಪ್ಪಿಸುವ ಉದ್ದೇಶದೊಂದಿಗೆ ನೂತನ ವಿಧೇಯಕ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ 2025ದ ಜೊತೆಗೆ ಸರ್ಕಾರ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಮಸೂದೆ 2025, ಕರ್ನಾಟಕ ಗಿರವಿದಾರರ (ತಿದ್ದುಪಡಿ) ಮಸೂದೆ 2025, ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ಮಸೂದೆ 2025, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಮಸೂದೆ 2025ನ್ನು ಮಂಡಿಸಿದೆ.

ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಮಸೂದೆ 2025 ಮಸೂದೆಯು ಆರ್ಥಿಕವಾಗಿ ದುರ್ಬಲವಾಗಿರುವವರನ್ನು ಹೆಚ್ಚಿನ ಬಡ್ಡಿ ಮತ್ತು ಬಲವಂತದ ವಸೂಲಾತಿ ವಿಧಾನಗಳಿಂದ ರಕ್ಷಿಸುವ ಉದ್ದೇಶವನ್ನು ಹೊಂದಿದೆ. ಕರ್ನಾಟಕ ಗಿರವಿದಾರರ (ತಿದ್ದುಪಡಿ) ಮಸೂದೆ 2025, ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ಮಸೂದೆ 2025 ಕೂಡ ಇದೇ ಉದ್ದೇಶವನ್ನು ಹೊಂದಿದೆ.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಮಸೂದೆ 2025ಯನ್ನು ಮಾರುಕಟ್ಟೆ ಸಮಿತಿಯ ಅಧಿಕಾರ ವ್ಯಾಪ್ತಿಯನ್ನು ಮಾರುಕಟ್ಟೆ, ಉಪ–ಮಾರುಕಟ್ಟೆ ಪ್ರದೇಶಕ್ಕೆ ವಿಸ್ತರಿಸಲು, ಗೋದಾಮಿನ ಸೇವಾ ಪೂರೈಕೆದಾರರ ಜವಾಬ್ದಾರಿಯನ್ನು ನಿಗದಿಪಡಿಸಲು ಮತ್ತು ಇ–ಕಾಮರ್ಸ್ ವೇದಿಕೆಗಳನ್ನು ಸ್ಥಾಪಿಸಲು ಪರಿಚಯಿಸಲಾಗಿದೆ.

ದರ ಏರಿಕೆ ನಿಶ್ಚಿತ

ಲೀಟರ್‌ಗೆ 10 ರೂ. ಹೆಚ್ಚಳ ಮಾಡಬೇಕೆಂದು ರೈತರು ಬೇಡಿಕೆ ಇಟ್ಟಿದ್ದಾರೆ. ಸರಕಾರ ಇನ್ನೂ ಅದಕ್ಕೆ ಒಪ್ಪಿಲ್ಲ. ಉತ್ಪಾದನಾ ವೆಚ್ಚ ಏರಿಕೆಯಾಗುತ್ತಿರುವುದರಿಂದ ರೈತರ ಬೇಡಿಕೆ ಸರಿಯಾಗಿದೆ. ದರ ಹೆಚ್ಚಳದ ವೇಳೆ ಸರಕಾರ ರೈತರ ಬೇಡಿಕೆ ಮತ್ತು ಗ್ರಾಹಕರ ಹಿತ ಎರಡನ್ನೂ ಗಮನದಲ್ಲಿರಿಸಿಕೊಂಡು ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂದರು. ರಾಜ್ಯದಲ್ಲಿ ಕಳೆದ ಅಕ್ಟೋಬರ್‌ನಿಂದ ಫೆಬ್ರವರಿವರೆಗೆ ಒಟ್ಟು 9,04,547 ಫಲಾನುಭವಿಗಳಿಗೆ 656.07 ಕೋಟಿ ರೂ. ಪ್ರೋತ್ಸಾಹ ಧನ ಬಾಕಿ ಇದೆ. ಪ್ರೋತ್ಸಾಹ ಧನ ನೀಡಲು ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದು, ಅದಕ್ಕಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಲಾಗಿದೆ," ಎಂದು ವಿವರ ನೀಡಿದರು. ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆಯನ್ನು ಪ್ರೋತ್ಸಾಹಿಸಲು ಮತ್ತು ಕುರಿಗಾಹಿಗಳಿಗೆ ಆರ್ಥಿಕ ನೆರವು ಒದಗಿಸಲು ಎನ್‌ಸಿಡಿಸಿಯನ್ನು 2023–24ರಲ್ಲಿ ಜಾರಿಗೊಳಿಸಲಾಗಿತ್ತು. ಪ್ರಸಕ್ತ ಸಾಲಿನವರೆಗೆ 7,806 ಫಲಾನುಭವಿಗಳು ಕಾರ್ಯಕ್ರಮದ ಪ್ರಯೋಜನ ಪಡೆದಿದ್ದಾರೆ. ಆದರೆ ಫಲಾನುಭವಿಗಳು ಪಡೆದ ಸಾಲಕ್ಕೆ ಸೂಕ್ತ ಬಡ್ಡಿ ಸಂದಾಯ ಮಾಡಿಲ್ಲ. ಇದರಿಂದಾಗಿ ಯೋಜನೆಯನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ ಎಂದರು. ಈ ಯೋಜನೆಯಲ್ಲಿ 20 ಕುರಿಗಳನ್ನು ಹೊಂದಿದ್ದ ಕುರಿಗಾಹಿಗಳಿಗೆ ನೆರವು ನೀಡಲಾಗುತ್ತಿತ್ತು. ಈ ನಿಯಮವನ್ನು ಬದಲಾಯಿಸಿ ಹತ್ತು ಕುರಿಗಳಿಗೆ ಅನ್ವಯಿಸಿ ಮರು ಆರಂಭಿಸಬೇಕು ಎಂದು ಡಾ.ಯತೀಂದ್ರ ಒತ್ತಾಯಿಸಿದರು.

ಹುಟ್ಟುಹಬ್ಬ ಆಚರಣೆ



ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾದ ಆರ್.ರಾಕೇಶ್‌ಗೌಡ ಅವರ ಹುಟ್ಟುಹಬ್ಬವನ್ನು ಜಯನಗರದ ಸ್ನೇಹ ಬಳಗದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಎಸ್.ಎಂ.ಕೃಷ್ಣ ಅಭಿಮಾನಿಗಳ ಸಂಘದ ಅಧ್ಯಕ್ಷ ವಿಕ್ರಾಂತ್ ದೇವೇಗೌಡ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್ ಎಂ ಈ, ಶಂಭು ಗೌಡ, ಅನಿಲ್ ಗೌಡ, ಸುರೇಶ್ ಗೌಡ, ಬಲರಾಮ್, ಮಹೇಶ್, ಕಾರ್ತಿಕ ಪಂಪ, ಶ್ರೇಯಸ್, ದಿಲೀಪ್‌ಗೌಡ, ಸಂದೀಪ್‌ಗೌಡ, ಭರತ್‌ಗೌಡ, ಕಿರಣ್‌ಗೌಡ, ಕಾರ್ತಿಕ್‌ಗೌಡ ಇತರರಿದ್ದರು.

ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ: ಕಾಂಗ್ರೆಸ್ ವಿರುದ್ಧ ಬಿಜೆಪಿ ಕೆಂಡಾಮಂಡಲ

ಬೆಂಗಳೂರು, ಮಾ.5–ಕರ್ನಾಟಕದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ನೀಡಲು ಯೋಜಿಸುತ್ತಿದೆ ಎಂದು ಬಿಜೆಪಿ ಬುಧವಾರ ಆರೋಪಿಸಿದೆ. ರಾಜ್ಯಾದ್ಯಂತ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುವಾಗ, ಆಡಳಿತಾರೂಢ ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ಸರ್ಕಾರಿ ಒಪ್ಪಂದಗಳಲ್ಲಿ ಶೇ.ನಾಲ್ಕು ಮೀಸಲಾತಿ ನೀಡುವ ಪ್ರಸ್ತಾಪವನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ನಿರ್ಧರಿಸಿದೆ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ದೇಶದಲ್ಲಿ ಅನೇಕ ಇತರ ಸಮುದಾಯಗಳಿರುವಾಗ ಅಲ್ಪಸಂಖ್ಯಾತರೆಂದರೆ ಯಾವಾಗಲೂ ಮುಸ್ಲಿಮರು ಎಂದು ಏಕೆ ಕರೆಯಲಾಗುತ್ತದೆ ಎಂದು ವಿಜಯೇಂದ್ರ ಪ್ರಶ್ನಿಸಿದರು. ಅಲ್ಪಸಂಖ್ಯಾತರು ಎಂದರೆ ಮುಸ್ಲಿಮರು ಮಾತ್ರವೇ ಹೊರತು ಬೇರೆ ಯಾರನ್ನೂ ಅಲ್ಲವೇ? ಕಾಂಗ್ರೆಸ್‌ನ ಅಲ್ಪಸಂಖ್ಯಾತರ ತುಷ್ಟೀಕರಣ ನೀತಿಗಳು ಸಮಾಜದಲ್ಲಿ ಅಶಾಂತಿಯನ್ನು ಉಂಟುಮಾಡುತ್ತವೆ ಎಂದು ಅವರು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನಿಜವಾಗಿಯೂ ಹಿಂದುಳಿದ ಸಮುದಾಯಗಳ ನಾಯಕರಾಗಿದ್ದರೆ, ಅವರು ತಮ್ಮನ್ನು ತಾವು ಹಿಂದುಳಿದ ಸಮುದಾಯಗಳ ನಾಯಕ ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ, ಅವರಿಗೆ ಅಧಿಕಾರ ನೀಡುವ ನೀತಿಗಳನ್ನು ತರಬೇಕು ಎಂದು ವಿಜಯೇಂದ್ರ ಹೇಳಿದ್ದಾರೆ. ಸಿದ್ದರಾಮಯ್ಯ ಅವರ ಅಲ್ಪಸಂಖ್ಯಾತರ ತುಷ್ಟೀಕರಣ ನೀತಿಗೆ ಪಾಠ ಕಲಿಸುವಂತೆ ವಿಜಯೇಂದ್ರ ಜನರಿಗೆ ಕರೆ ನೀಡಿದ್ದಾರೆ. ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಕರ್ನಾಟಕದ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ ಅಲ್ಪಸಂಖ್ಯಾತರ ತುಷ್ಟೀಕರಣದ ಮೇಲೆ ಕೇಂದ್ರೀಕರಿಸಿದೆ ಎಂದು ಹೇಳಿದರು. ಈ ರೀತಿಯ ಮೀಸಲಾತಿಗಳು ಸಂವಿಧಾನ ವಿರೋಧಿ. ಭಾರತೀಯ ಸಂವಿಧಾನದ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ವಿರುದ್ಧವಾಗಿದ್ದರು ಎಂದು ಅವರು ಪ್ರತಿಪಾದಿಸಿದರು.

ವಿದ್ಯುತ್ ಕಳ್ಳತನ: 6.36 ಕೋಟಿ ದಂಡ ವಿಧಿಸಿದ ಸೆಸ್ಕ್

ಸೆಸ್ಕ್ ಜಾಗೃತದಳದಿಂದ 5 ಜಿಲ್ಲೆಗಳಲ್ಲಿ ಕಾರ್ಯಾಚರಣೆ

ಮೈಸೂರು, ಮಾ.5– ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದವರ ವಿರುದ್ಧ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದ ಜಾಗೃತ ದಳದ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಕೈಗೊಂಡು 6 ಕೋಟಿ ರುಪಾಯಿಗೂ ಹೆಚ್ಚು ಮೊತ್ತದ ದಂಡ ವಿಧಿಸಿದ್ದಾರೆ.

ಸೆಸ್ಕ್ ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಹಾಗೂ ಸೆಸ್ಕ್ ಜಾಗೃತ ದಳದ ಪೊಲೀಸ್ ಅಧೀಕ್ಷಕರಾದ ಸವಿತಾ ಹೂಗಾರ ಅವರ ನೇತೃತ್ವದಲ್ಲಿ ಜಾಗೃತದಳದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಸೆಸ್ಕ್ ವಿಭಾಗ ವ್ಯಾಪ್ತಿಗೆ ಒಳಪಡುವ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಹಾಗೂ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಆ ಮೂಲಕ ಅಕ್ರಮವಾಗಿ ವಿದ್ಯುತ್ ಕಳ್ಳತನ, ವಿದ್ಯುತ್ ದುರುಪಯೋಗ ಮಾಡಿದವರ ವಿರುದ್ಧ ಕ್ರಮಕೈಗೊಂಡು, ಪ್ರಕರಣಗಳನ್ನು ದಾಖಲಿಸಲಾಗಿದೆ. ಸೆಸ್ಕ್ ಜಾಗೃತ ದಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2024–25ನೇ ಸಾಲಿನಲ್ಲಿ ಗೃಹ, ವಾಣಿಜ್ಯ, ಕೈಗಾರಿಕೆ, ತಾತ್ಕಾಲಿಕ ಸ್ಥಾವರಗಳು ಮತ್ತು ಇತರ ಕಡೆಗಳಲ್ಲಿ 5716 ಸ್ಥಾವರಗಳನ್ನು ಜಾಗೃತ ದಳದ ಅಧಿಕಾರಿಗಳು ಪರಿಶೀಲಿಸಿದ್ದು, ಈ ಸಂದರ್ಭದಲ್ಲಿ 1312 ವಿದ್ಯುತ್ ಕಳ್ಳತನ ಮತ್ತು ದುರುಪಯೋಗ ಪ್ರಕರಣಗಳನ್ನು ದಾಖಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸದರಿ ಪ್ರಕರಣಗಳಿಂದ ಒಟ್ಟು 6,36,72,607 ರೂ. ದಂಡ ವಿಧಿಸಿದ್ದು, ಸದರಿ ಅವಧಿಯಲ್ಲಿ ಹಿಂದಿನ ಪ್ರಕರಣಗಳು ಸೇರಿ 5,94,89,898 ರೂ. ದಂಡ ವಸೂಲಿ ಮಾಡಲಾಗಿದೆ.



ಮೀಟರ್ ಪರಿಶೀಲನೆ ವಿಭಾಗದಿಂದ ವಿವಿಧ ವಿಭಾಗಗಳಲ್ಲಿ ಒಟ್ಟು 23,014 ಸ್ಥಾವರಗಳ ರೇಟಿಂಗ್ ಮಾಡಿ, ಲೋಪಗಳಿರುವ ಕಡೆಗಳಲ್ಲಿ ಗುರುತಿಸಲಾಗದ(Non-Cognizable) ಪ್ರಕರಣಗಳನ್ನು ದಾಖಲಿಸಿ 12,37,56,660 ರೂ. ದಂಡವನ್ನು ವಿಧಿಸಲಾಗಿದೆ. ವಿದ್ಯುತ್ ಕಳ್ಳತನ ಮಾಡುವುದು ವಿದ್ಯುಚ್ಛಕ್ತಿ ಕಾಯ್ದೆಯ ಅಡಿಯಲ್ಲಿ ಕ್ರಿಮಿನಲ್ ಸ್ವರೂಪದ ಶಿಕ್ಷಾರ್ಹ ಅಪರಾಧವಾಗಿದ್ದು, ವಿದ್ಯುತ್ ಕಳ್ಳತನ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ಸಾರ್ವಜನಿಕರು ವಿದ್ಯುತ್ ಕಳ್ಳತನದ ಬಗ್ಗೆ ಮಾಹಿತಿ ಇದ್ದಲ್ಲಿ ಈ ಕೆಳಕಂಡ ಸಂಖ್ಯೆಗಳಿಗೆ ಮಾಹಿತಿ ನೀಡಬಹುದು. ಮಾಹಿತಿ ನೀಡುವವರ ಹೆಸರನ್ನು ಗೌಪ್ಯವಾಗಿ ಇಡಲಾಗುವುದು ಎಂದು ಸೆಸ್ಕ್ ಜಾಗೃತ ದಳದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಸಿ. ಉಮೇಶ್ ಹಾಗೂ ಪೊಲೀಸ್ ಉಪ ಅಧೀಕ್ಷಕರಾದ ಆನಂದಮೂರ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಲ್ಲದೆ, ವಿದ್ಯುತ್ ಕಳ್ಳತನ ಕಂಡುಬಂದಲ್ಲಿ ಈ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಿದ್ದಾರೆ.

ಸೆಸ್ಕ್ ಜಾಗೃತ ದಳ–ಮೈಸೂರು ಜಿಲ್ಲೆ: ಪೊಲೀಸ್ ಇನ್ಸ್‌ಪೆಕ್ಟರ್ 9448994736; ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)–9448994737.

ಮಂಡ್ಯ ಜಿಲ್ಲೆ: ಪೊಲೀಸ್ ಇನ್ಸ್‌ಪೆಕ್ಟರ್ 9448994919; ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) 9448994863.

ಹಾಸನ ಜಿಲ್ಲೆ: ಪೊಲೀಸ್ ಇನ್ಸ್‌ಪೆಕ್ಟರ್ 9448994935; ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) 9448994936.

ಚಾಮರಾಜನಗರ ಜಿಲ್ಲೆ: ಪೊಲೀಸ್ ಇನ್ಸ್‌ಪೆಕ್ಟರ್ 9449598689; ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) 9448994926.

ಕೊಡಗು ಜಿಲ್ಲೆ: ಪೊಲೀಸ್ ಇನ್ಸ್‌ಪೆಕ್ಟರ್ 9449598620; ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) 9448499902

ಕೆರೆಗೆ ಸೇರುವ ತ್ಯಾಜ್ಯ ನೀರು, ಪ್ಲಾಸ್ಟಿಕ್ ತಡೆಯಲು ವಿಫಲವಾದ ಮೈಸೂರು ಮಹಾನಗರಪಾಲಿಕೆ, ಕೆಐಎಡಿಬಿ

ಅವಸಾನದತ್ತ ಮೈಸೂರಿನ ಹೆಬ್ಬಾಳು ಕೆರೆ

ಇನ್‌ಫೋಸಿಸ್ ಪ್ರತಿಷ್ಠಾನದಿಂದ 105 ಕೋಟಿ ವೆಚ್ಚದಲ್ಲಿ ಪುನರುಜ್ಜೀವನಗೊಂಡು ಕಂಗೊಳಿಸುತ್ತಿದ್ದ ಕೆರೆ



ಹೆಬ್ಬಾಳಿನಲ್ಲಿರುವ ವಾಣಿವಿಲಾಸ ಬಡಾವಣೆ ನಿವಾಸಿ ಕಾಂತರಾಜು ಅವರು ಹೆಬ್ಬಾಳು ಕೆರೆಯಲ್ಲಿ 'ಮೈಸೂರು ಮಿತ್ರ' ಮುಖ್ಯ ವರದಿಗಾರನಿಗೆ ಪರಿಸ್ಥಿತಿಯನ್ನು ವಿವರಿಸಿದರು.

ಮೈಸೂರು, ಮಾ.5(ಆರ್‌ಕೆ)– ಕಳೆದ 9 ವರ್ಷಗಳ ಹಿಂದೆ ಇನ್‌ಫೋಸಿಸ್ ಪ್ರತಿಷ್ಠಾನದಿಂದ ಕೋಟ್ಯಾಂತರ ರೂ. ವೆಚ್ಚದಲ್ಲಿ ಪುನರುಜ್ಜೀವನಗೊಳಿಸಿದ್ದ ಮೈಸೂರಿನ ಅತೀ ದೊಡ್ಡ ಹೆಬ್ಬಾಳು ಕೆರೆ ಈಗ ಅವಸಾನದತ್ತ ಸಾಗಿದೆ.

ಮೈಸೂರಿನ ಹೊರವಲಯದಲ್ಲಿರುವ 54 ಎಕರೆ ವಿಸ್ತಾರದ ಹೆಬ್ಬಾಳು ಕೆರೆಯಲ್ಲಿ ಈಗ ಉಸಿರು ಕಟ್ಟಿದ ವಾತಾವರಣ ಉಂಟಾಗಿದ್ದು, ಹೆಬ್ಬಾಳು ಕೈಗಾರಿಕಾ ಪ್ರದೇಶ ಹಾಗೂ ಸುತ್ತಲಿನ ವಸತಿ ಬಡಾವಣೆಗಳಿಂದ ತ್ಯಾಜ್ಯ ನೀರು ಹರಿದು ಬಂದು ಸೇರುತ್ತಿರುವುದರಿಂದ ಕೆರೆಯ ನೀರು ಸಂಪೂರ್ಣ ಕಲುಷಿತಗೊಂಡಿದ್ದು, ಈಗ ದುರ್ವಾಸನೆ ಬೀರುತ್ತಿದೆ. ಒಂದು ಕಾಲದಲ್ಲಿ ಹಚ್ಚ ಹಸಿರಿನ ವಾತಾವರಣವಿದ್ದಾಗ ಶುದ್ಧ ನೀರಿನಲ್ಲಿ ಲಕ್ಷಾಂತರ ಮೀನುಗಳು ಸೇರಿದಂತೆ ಜಲಚರಗಳು ವಾಸಿಸುತ್ತಿದ್ದವು. ಅದೇ ವೇಳೆ ನಾನಾ ಜಾತಿಯ ಪಕ್ಷಿಗಳು ಕೂಡ ವಾಸ ಮಾಡುತ್ತಾ ಕಲರವ ಮಾಡುತ್ತಿದ್ದವು.

ಹೆಬ್ಬಾಳು, ಹೂಟಗಳ್ಳಿ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಗಳಿಂದ ಹೊರಸೂಸುವ ನೀರು ಹಾಗೂ ಹೆಬ್ಬಾಳು, ಮೇಟಗಳ್ಳಿ, ಲಕ್ಷ್ಮೀಕಾಂತನಗರ ಸೇರಿದಂತೆ ಸುತ್ತಲಿನ ವಸತಿ ಬಡಾವಣೆಗಳಿಂದ ಒಳಚರಂಡಿ ನೀರು ಕೆರೆಗೆ ನಿರಂತರವಾಗಿ ಹರಿದು ಬರುತ್ತಿರುವುದರಿಂದ ಹೆಬ್ಬಾಳು ಕೆರೆ ನೀರು ಸಂಪೂರ್ಣ ಕಲುಷಿತವಾಗಿದ್ದು, ಅಲ್ಲಿ ಒಂದೇ ಒಂದು ಮೀನು ಜೀವಂತವಾಗಿಲ್ಲ. ಪರಿಣಾಮ ಅಲ್ಲಿನ ಪಕ್ಷಿ ಸಂಕುಲ ಸಂಪೂರ್ಣ ನಾಶವಾಗಿದೆ. ಮೀನುಗಳನ್ನು ತಿನ್ನಲೆಂದು ಬೇರೆ ಬೇರೆ ಕಡೆಯಿಂದ ವಿವಿಧ ಜಾತಿಯ ಪಕ್ಷಿಗಳು ಅಲ್ಲಿಗೆ ಬರುತ್ತಿದ್ದವು. ಆದರೆ ಕಲುಷಿತ ನೀರಿನಿಂದಾಗಿ ಲಕ್ಷಾಂತರ ಮೀನುಗಳು ಸಾವನ್ನಪ್ಪಿರುವುದರಿಂದ ಈಗ ಒಂದೇ ಒಂದು ಪಕ್ಷಿಯೂ ಕೆರೆ ಆವರಣದಲ್ಲಿ ಕಾಣಸಿಗುವುದಿಲ್ಲ.

ಕೆರೆಯನ್ನು ಸಂಪೂರ್ಣ ಅಭಿವೃದ್ಧಿಪಡಿಸಿ ಇನ್‌ಫೋಸಿಸ್ ಪ್ರತಿಷ್ಠಾನದ ಡಾ.ಸುಧಾಮೂರ್ತಿ ಅವರು ಪಾರ್ಕ್, ವಾಕಿಂಗ್ ಪಾತ್, ರಸ್ತೆಗಳನ್ನು ನಿರ್ಮಿಸಿ, ಸುಸಜ್ಜಿತವಾಗಿ ಪುನರುಜ್ಜೀವನಗೊಳಿಸಿದ್ದರು. ಆ ವೇಳೆ ಸುತ್ತಲಿನ ಬಡಾವಣೆಗಳ ಜನರು ಕೆರೆಯ ಏರಿ ಮೇಲೆ 2.5 ಕಿ.ಮೀ. ದೂರ ವಾಯುವಿಹಾರ ಮಾಡಿ ವಿಶ್ರಾಂತಿ ಪಡೆದು ಹೋಗುತ್ತಿದ್ದರು. ಹಚ್ಚ ಹಸಿರಿನ ನೈಸರ್ಗಿಕ ಮಡಿಲಲ್ಲಿ ಪಕ್ಷಿಗಳ ಕಲರವದೊಂದಿಗೆ ವಾಯುವಿಹಾರಿಗಳು ಕೆರೆ ಏರಿಯ ಮೇಲೆ ನಡೆದಾಡುತ್ತಿದ್ದರು.

ಆದರೆ, ಇದೀಗ ಕೆರೆಯ ನೀರು ಸಂಪೂರ್ಣವಾಗಿ ಕಲುಷಿತಗೊಂಡಿದ್ದು, ಅದರ ಮೇಲೆ ವಾಟರ್‌ಪ್ಲಾಂಟ್ ವಿಸ್ತಾರವಾಗಿ ಬೆಳೆದಿರುವುದರಿಂದ ಹುಲ್ಲು ಹಾಸಿನ (ಲಾನ್) ಮಾದರಿಯಲ್ಲಿ ಆವರಿಸಿಕೊಂಡಿದ್ದು, ದೂರಕ್ಕೆ ಹಾಸಿಕೊಂಡಿರುವ ರೀತಿ ಕಾಣಿಸುತ್ತದೆ. ಜೊತೆಗೆ ಕೆರೆಯ ದಡದಲ್ಲಿ ಪ್ಲಾಸ್ಟಿಕ್ ಹಾಗೂ ಇನ್ನಿತರ ವಸ್ತುಗಳು ನಿತ್ಯ ಶೇಖರಣೆಗೊಳ್ಳುತ್ತಿದ್ದು, ದಿನೇ ದಿನೇ ಕೆಟ್ಟ ವಾಸನೆ ಹರಡುತ್ತಿರುವುದರಿಂದ ಇತ್ತೀಚೆಗೆ ವಾಯುವಿಹಾರಿಗಳ ಸಂಖ್ಯೆಯೂ ಕಡಿಮೆಯಾಗಿದ್ದು, ಕೆರೆಯನ್ನು ಸ್ವಚ್ಛಗೊಳಿಸಿ ನಿರ್ವಹಣೆ ಮಾಡುವಂತೆ ವಾಯುವಿಹಾರಿಗಳು ಮನವಿ ಮಾಡಿದ್ದಾರೆ.

> ಕೆರೆಯ ನೀರು ಮಲಿನವಾಗಿರುವ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ. ನಮ್ಮ ಇಂಜಿನಿಯರ್‌ಗಳನ್ನು ಕಳುಹಿಸಿ ಮಾಹಿತಿಗಳೊಂದಿಗೆ ವರದಿ ತರಿಸಿಕೊಂಡು ನಾಳೆ (ಮಾ.6) ನಾನೇ ಖುದ್ದು ಭೇಟಿ ನೀಡಿ ಪರಿಶೀಲಿಸುತ್ತೇನೆ. ಅಲ್ಲಿಗೆ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ರಾಸಾಯನಿಕ ತ್ಯಾಜ್ಯ ಹಾಗೂ ವಸತಿ ಬಡಾವಣೆಗಳ ಒಳಚರಂಡಿ ನೀರು ಹರಿದು ಬರುತ್ತಿರುವುದು ಕಂಡುಬಂದರೆ ತಕ್ಷಣ ಕ್ರಮ ಕೈಗೊಂಡು ಕೆರೆಯ ನೀರನ್ನು ಸ್ವಚ್ಛಗೊಳಿಸಿ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುತ್ತೇವೆ. ಅಲ್ಲಿ ಬೆಳೆದಿರುವ ವಾಟರ್ ಪ್ಲಾಂಟ್ ಅನ್ನು ತೆರವುಗೊಳಿಸಿ ಮತ್ತೆ ಅದು ಬೆಳೆಯದಂತೆ ಕ್ರಮ ಕೈಗೊಂಡು ಈ ಹಿಂದಿನಂತೆ ಉತ್ತಮ ವಾತಾವರಣದಲ್ಲಿ ವಾಯುವಿಹಾರಿಗಳು ನಡೆದಾಡಲು ಅನುವು ಮಾಡಿಕೊಡುತ್ತೇವೆ.
> **–ಸುಷ್ಮಾ, ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ.**

2016ರಲ್ಲಿ ಇನ್‌ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿ ಅವರ ನೇತೃತ್ವದಲ್ಲಿ ಸುಮಾರು 105 ಕೋಟಿ ರೂ.ಗಳನ್ನು ಸಿಎಸ್‌ಆರ್ ಯೋಜನೆಯಡಿ ಖರ್ಚು ಮಾಡಿ ಪುನರುಜ್ಜೀವನಗೊಳಿಸಿದ್ದ ಹೆಬ್ಬಾಳು ಕೆರೆ ಈಗ ವಾಟರ್ ಪ್ಲಾಂಟ್ ಆವರಿಸಿರುವುದರಿಂದ ಉಸಿರು ಕಟ್ಟಿದ ವಾತಾವರಣ ನಿರ್ಮಾಣವಾಗಿದ್ದು, ಅಲ್ಲಿನ ಜಲಚರಗಳು, ಪಕ್ಷಿ ಸಂಕುಲ ನಾಶವಾಗಲು ಪ್ರಮುಖ ಕಾರಣವಾಗಿದೆ. ಇನ್‌ಫೋಸಿಸ್ ಫೌಂಡೇಷನ್‌ನವರು ಕೆರೆಯ ಪುನರುಜ್ಜೀವನ ಯೋಜನೆಯನ್ನು ಕೈಗೆತ್ತಿಗೊಳ್ಳುವಾಗ ಕೈಗಾರಿಕೆಗಳಿಂದ ಮತ್ತು ವಸತಿ ಬಡಾವಣೆಗಳಿಂದ ಕಲುಷಿತ ನೀರು ಕೆರೆಗೆ ತಲುಪದಂತೆ ವ್ಯವಸ್ಥೆ ಮಾಡಬೇಕು ಎಂದು ಒಡಂಬಡಿಕೆಯಲ್ಲಿ ಷರತ್ತು ವಿಧಿಸಿದ್ದರು.

ತಪ್ಪಿದಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಎಸ್‌ಡಿಪಿ ಮೂಲಕ ಸಂಸ್ಕರಿಸಿ ಆ ನೀರನ್ನು ಪಾರ್ಕ್, ಕಟ್ಟಡ ನಿರ್ಮಾಣ ಇನ್ನಿತರ ಉದ್ದೇಶಗಳಿಗೆ ಬಳಸಿಕೊಳ್ಳಬೇಕು. ತ್ಯಾಜ್ಯ ಕೆರೆಗೆ ತಲುಪದಂತೆ ಬಂದ್ ಮಾಡಿ ಕ್ರಮ ವಹಿಸಿದರೆ ಮಾತ್ರ ತಾವು ಹೆಬ್ಬಾಳು ಕೆರೆಯನ್ನು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುತ್ತೇವೆ ಎಂಬ ಇನ್‌ಫೋಸಿಸ್ ಫೌಂಡೇಷನ್‌ನ ಷರತ್ತಿಗೆ ಕೆಐಎಡಿಬಿ, ಹೂಟಗಳ್ಳಿ ಪಟ್ಟಣ ಪಂಚಾಯತಿ ಹಾಗೂ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ಒಪ್ಪಿ ಸಹಿ ಮಾಡಿದ್ದರು. ಆದರೆ ತದನಂತರ ಆ ನಿಯಮ, ಷರತ್ತುಗಳನ್ನು ಉಲ್ಲಂಘಿಸಿ ತ್ಯಾಜ್ಯ ನೀರು ಕೆರೆಗೆ ಹರಿದು ಬರುತ್ತಿದ್ದರೂ ಕ್ರಮ ವಹಿಸದ ಕಾರಣ ಇಂದು ಹೆಬ್ಬಾಳು ಕೆರೆ ಅವಸಾನದತ್ತ ಸಾಗಿದೆ.

ಹೆಬ್ಬಾಳಿನ ವಾಣಿವಿಲಾಸ ಬಡಾವಣೆ ನಿವಾಸಿ ಕಾಂತರಾಜು ಪ್ರಕಾರ ಇದೇ ಪರಿಸ್ಥಿತಿ ಮುಂದುವರಿದಲ್ಲಿ ಹೆಬ್ಬಾಳು ಕೆರೆಯ ವಾತಾವರಣ ಸಂಪೂರ್ಣವಾಗಿ ಹಾಳಾಗಿ ಒಬ್ಬರೂ ಅಲ್ಲಿ ಓಡಾಡದಂತಹ ವಾತಾವರಣ ಉಂಟಾಗುತ್ತದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಕೆರೆಯನ್ನು ಸಂರಕ್ಷಿಸಿ ಅಲ್ಲಿನ ಜಲಚರ ಮತ್ತು ಪಕ್ಷಿಗಳ ತಾಣವನ್ನಾಗಿ ಮಾಡಬೇಕೆಂಬ ಮಹದುದ್ದೇಶದಿಂದ ಇನ್‌ಫೋಸಿಸ್ ಫೌಂಡೇಷನ್‌ನವರು 105 ಕೋಟಿ ರೂ. ಖರ್ಚು ಮಾಡಿ ಅಭಿವೃದ್ಧಿಪಡಿಸಿದ್ದರೂ ಅದನ್ನು ಸುವ್ಯವಸ್ಥಿತವಾಗಿ ನಿರ್ವಹಣೆ ಮಾಡಿಸುವ ಇಚ್ಛಾಶಕ್ತಿ ಸಂಬಂಧಪಟ್ಟ ಅಧಿಕಾರಿಗಳಿಗೆ ಇಲ್ಲದಿರುವುದು ದುರದೃಷ್ಟಕರ ಎಂದರು.



> ಇತಿಹಾಸವುಳ್ಳ ಮೈಸೂರಿನ ಹೆಬ್ಬಾಳು ಕೆರೆ ನೀರು ಮಲಿನಗೊಂಡು ದುರ್ವಾಸನೆ ಬೀರುತ್ತಿದೆ. ಇನ್‌ಫೋಸಿಸ್ ಫೌಂಡೇಷನ್ ಮುಖ್ಯಸ್ಥರಾಗಿದ್ದ ಡಾ.ಸುಧಾಮೂರ್ತಿ ಅವರ ಜನಪರ ಕಾಳಜಿಯಿಂದ ಪುನರುಜ್ಜೀವನಗೊಂಡು ಉತ್ತಮ ನೈಸರ್ಗಿಕ ತಾಣವಾಗಿದ್ದ ಕೆರೆಯಲ್ಲಿ ನಿತ್ಯ ಬೆಳಗ್ಗೆ ಮತ್ತು ಸಂಜೆ ಸಾವಿರಾರು ಮಂದಿ ವಾಯುವಿಹಾರ ಮಾಡುತ್ತಿದ್ದರು. ಅಲ್ಲದೆ, ಹಚ್ಚ ಹಸುರಿನ ನಿಸರ್ಗದ ಮಡಿಲಲ್ಲಿ ಇಡೀ ಕೆರೆ ಒಂದು ರೀತಿ ಪ್ರವಾಸಿತಾಣವಾಗಿ ಕಂಗೊಳಿಸುತ್ತಿತ್ತು. ಅದೇರೀತಿ ನಿರ್ವಹಣೆ ಮಾಡಿದ್ದರೆ ಮುಂದೊಂದು ದಿನ ಹೆಬ್ಬಾಳು ಕೆರೆಗೆ ಸಾವಿರಾರು ಪ್ರವಾಸಿಗರು ಭೇಟಿ ನೀಡಬಹುದಿತ್ತು. ಆದರೆ ಸರಿಯಾದ ನಿರ್ವಹಣೆ ಇಲ್ಲದೆ ಕೆರೆ ಸೊರಗುತ್ತಿರುವುದು ವಾಯುವಿಹಾರಿಗಳು ಮತ್ತು ಪರಿಸರ ಪ್ರೇಮಿಗಳಿಗೆ ನೋವುಂಟಾಗಿದೆ. **– ಲಂಕೇಗೌಡ, ಅಧ್ಯಕ್ಷರು, ವಾಣಿವಿಲಾಸ ಗೃಹ ನಿರ್ಮಾಣ ಸಹಕಾರ ಸಂಘ, ಹೆಬ್ಬಾಳು**



> ಈ ಹಿಂದೆ ಅಭಿವೃದ್ಧಿಯನ್ನೇ ಕಾಣದೆ ನಿರ್ಲಕ್ಷ್ಯಕ್ಕೊಳಗಾಗಿದ್ದ ಹೆಬ್ಬಾಳು ಕೆರೆಯನ್ನು 105 ಕೋಟಿ ರೂ. ಖರ್ಚು ಮಾಡಿ ಇನ್‌ಫೋಸಿಸ್ ಫೌಂಡೇಷನ್‌ನವರು ಸುಂದರ ತಾಣವನ್ನಾಗಿ ಮಾಡಿದ್ದರು. ತದನಂತರದಲ್ಲಿ ಹೆಬ್ಬಾಳು ಕೈಗಾರಿಕಾ ಪ್ರದೇಶ ಮತ್ತು ವಸತಿ ಬಡಾವಣೆಗಳಿಂದ ಹರಿದು ಬಂದು ಕೆರೆಗೆ ಸೇರುತ್ತಿದ್ದ ತ್ಯಾಜ್ಯ ಹಾಗೂ ಒಳಚರಂಡಿ ನೀರನ್ನು ತಡೆದು ಒಂದು ಹಂತದವರೆಗೆ ನಿಯಂತ್ರಿಸಲಾಗುತ್ತಿತ್ತು. ಆದರೆ ಇದೀಗ ಒಳಚರಂಡಿ ಮತ್ತು ತ್ಯಾಜ್ಯ ನೀರು ಕೆರೆಗೆ ಸೇರಿ ನೀರು ಮಲಿನವಾಗಿರುವುದರಿಂದ ಅಲ್ಲಿನ ಜಲಚರಗಳು, ಪಕ್ಷಿ ಸಂಕುಲ ನಾಶವಾಗಿದೆ. ಕೆರೆಯನ್ನು ಸ್ವಚ್ಛಗೊಳಿಸಿ, ಮಲಿನ ನೀರು ಹರಿದು ಬರದಂತೆ ತಡೆದು ಉತ್ತಮ ರೀತಿಯಲ್ಲಿ ನಿರ್ವಹಿಸಬೇಕೆಂದು ನಾವು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದೇವೆ. ಈಗಲಾದರೂ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ವಾಯುವಿಹಾರಿಗಳು ಸಂಬಂಧಪಟ್ಟ ಇಲಾಖೆ ವಿರುದ್ಧ ಪ್ರತಿಭಟನೆ ಮಾಡಬೇಕಾಗುತ್ತದೆ.
> **–ರವಿ ಡೆಲ್ಲಿ, ಅಧ್ಯಕ್ಷರು, ಹೆಬ್ಬಾಳು ಕೆರೆ ಹಿತರಕ್ಷಣಾ ಸಮಿತಿ, ಹೆಬ್ಬಾಳು**



> ನಿತ್ಯ ಸಾವಿರಾರು ಮಂದಿ ಹೆಬ್ಬಾಳು ಕೆರೆಯ ಸುಂದರ ವಾತಾವರಣದಲ್ಲಿ ವಾಯುವಿಹಾರ ಮಾಡುತ್ತಿದ್ದರು. ಸುತ್ತಲಿನ ಐಟಿ–ಬಿಟಿ ಉದ್ಯೋಗಿಗಳು ಸಹ ಈ ಮನೋಹರ ನೈಸರ್ಗಿಕ ತಾಣವನ್ನು ನೋಡಲು ಬರುತ್ತಿದ್ದರು. ಇದೀಗ ಸರಿಯಾದ ನಿರ್ವಹಣೆ ಇಲ್ಲದೆ ಕೆರೆಯ ನೀರಿನಲ್ಲಿ ಪಾಚಿ ಕಟ್ಟಿಕೊಂಡು ವಾಟರ್ ಪ್ಲಾಂಟ್ ಆವರಿಸಿರುವುದರಿಂದ ವಾತಾವರಣ ಹದಗೆಟ್ಟು ದುರ್ವಾಸನೆ ಬೀರಲು ಆರಂಭವಾಗಿದೆ. ಅದರಿಂದ ಹಲವು ರೋಗ ರುಜಿನಗಳು ಬರುವ ಜೊತೆಗೆ ಕೆರೆಯ ಜಲಚರಗಳು ಮತ್ತು ಅಲ್ಲಿಗೆ ಬರುತ್ತಿದ್ದ ಪಕ್ಷಿ ಸಂಕುಲದ ನಾಶಕ್ಕೂ ಒಳಚರಂಡಿ ಮತ್ತು ರಾಸಾಯನಿಕ ತ್ಯಾಜ್ಯ ಹರಿದು ಬರುತ್ತಿರುವುದು ಕಾರಣವಾಗಿದೆ. ಅದನ್ನು ತಪ್ಪಿಸಿ ಸರಿಯಾದ ರೀತಿಯಲ್ಲಿ ಸ್ವಚ್ಛತೆ ಮಾಡಿ ನಿರ್ವಹಣೆಯ ಅಗತ್ಯವಿದೆ. ಸಂಬಂಧಪಟ್ಟವರು ಈಗಲಾದರೂ ಗಮನಹರಿಸಿ ಈ ಐತಿಹಾಸಿಕ ಹಿನ್ನೆಲೆ ಇರುವ ಹೆಬ್ಬಾಳು ಕೆರೆಯನ್ನು ಮುಂದಿನ ಪೀಳಿಗೆಗೂ ಸಂರಕ್ಷಿಸಬೇಕಿದೆ.
> **–ಜಯರಾಮಚಾರಿ, ಅಧ್ಯಕ್ಷರು, ವಿಶ್ವಕರ್ಮ ಪತ್ತಿನ ಸಹಕಾರ ಸಂಘ, ಹೆಬ್ಬಾಳು**

ಮಾ.8ರಂದು ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣನವರ ಕೃತಿಗಳ ಲೋಕಾರ್ಪಣೆ



ಮೈಸೂರು,ಮಾ.5–ತಾಯಮ್ಮ ಪ್ರಕಾಶನ ಹಾಗೂ ಸುಯೋಗ್ ಆಸ್ಪತ್ರೆ ವತಿಯಿಂದ ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣ ಅವರ ಲೈಂಗಿಕ ಸುಖದ ಸುತ್ತಮುತ್ತ ಹಾಗೂ ಸ್ವಾಸ್ಥ್ಯ ಸಂಪದ ಎಂಬ ಎರಡು ಕೃತಿಗಳ ಲೋಕಾರ್ಪಣಾ ಸಮಾರಂಭವನ್ನು ಸುಯೋಗ್ ಆಸ್ಪತ್ರೆಯಲ್ಲಿ ಮಾರ್ಚ್ 8ರಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ವಹಿಸಲಿದ್ದು, ಅಧ್ಯಕ್ಷತೆಯನ್ನು ಶಾಸಕ ತನ್ವೀರ್ ಸೇಠ್ ವಹಿಸಲಿದ್ದಾರೆ. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು, ಕೃತಿಗಳನ್ನು ಹಿರಿಯ ಪತ್ರಕರ್ತ ಶ್ರೀವಿಶ್ವೇಶ್ವರ ಭಟ್ ಲೋಕಾರ್ಪಣೆಗೊಳಿಸಲಿದ್ದಾರೆ. 'ಲೈಂಗಿಕ ಸುಖದ ಸುತ್ತಮುತ್ತ' ಕೃತಿಯನ್ನು ಕುರಿತು ಸಾಹಿತಿ ಪ್ರೊ.ಚಂದ್ರಶೇಖರ್ ಮಾತನಾಡಲಿದ್ದು, 'ಸ್ವಾಸ್ಥ್ಯ ಸಂಪದ' ಕೃತಿಯನ್ನು ಕುರಿತು ವಿಜ್ಞಾನ ಸಾಹಿತಿ ಎಸ್.ರಾಮಪ್ರಸಾದ್ ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಎಂ.ಎನ್.ಮೋಹನ್ ಕುಮಾರ್, ಸುಯೋಗ್ ಆಸ್ಪತ್ರೆ ಟ್ರಸ್ಟಿ ಸುಧಾ ಯೋಗಣ್ಣ ಉಪಸ್ಥಿತರಿರಲಿದ್ದಾರೆ.

ಮಾ.9ಕ್ಕೆ ಮೈಸೂರಲ್ಲಿ ಪ್ರತಿಭಾ ಪುರಸ್ಕಾರ

ಮೈಸೂರು, ಮಾ.5(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಮಾ.9ರಂದು ಬೆಳಗ್ಗೆ 10.30ಕ್ಕೆ ಉಪ್ಪಾರ ಸಮುದಾಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ, ಬಡ್ತಿ, ನಿವೃತ್ತಿ ಹೊಂದಿದ ಸಮುದಾಯ ಅಧಿಕಾರಿಗಳಿಗೆ ಸನ್ಮಾನ ಹಾಗೂ ಸಮಾಜ ಸೇವಕರಿಗೆ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದ ಪ್ರಚಾರ ಸಮಿತಿಯ ಕಾರ್ಯದರ್ಶಿ ಕೆ.ಟಿ.ಮೋಹನ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದುರ್ಗ ಭಗೀರಥ ಪೀಠದ ಡಾ.ಪುರುಷೋತ್ತಮಾನಂದಪುರಿ, ಮಳವಳ್ಳಿಯ ಅಯ್ಯನಸರಗೂರು ಮಠದ ಶ್ರೀ ಮಹದೇವ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ 'ಭಗೀರಥ ವೈದ್ಯ ವಿಭೂಷಣ ಪ್ರತಿಭಾ ರತ್ನ' ಪ್ರಶಸ್ತಿ ಪುರಸ್ಕೃತರಾದ ಡಾ.ಕೆ.ಎಸ್.ರವೀಂದ್ರನಾಥ್, 'ಭಗೀರಥ ಕಲಾ ವಿಭೂಷಣ' ಪ್ರಶಸ್ತಿ ಪುರಸ್ಕೃತರಾದ ದೊಡ್ಡಗವಿ ಬಸಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಂ. ಸೋಮಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಭಗೀರಥ ವಿದ್ಯಾಶ್ರೀ ಪ್ರಶಸ್ತಿ, ಭಗೀರಥ ಪ್ರತಿಭಾ ಪ್ರಶಸ್ತಿ, ವಿಶೇಷ ಚೇತನ ಭಗೀರಥ ಕ್ರೀಡಾ ರತ್ನ ಪ್ರಶಸ್ತಿ, ಭಗೀರಥ ವಿಶಿಷ್ಟ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದ ಪದಾಧಿಕಾರಿಗಳಾದ ಜವರಶೆಟ್ಟಿ, ಡಾ.ಗೋವಿಂದರಾಜು, ಮಹದೇವಶೆಟ್ಟಿ ಇದ್ದರು.

ಕುಕ್ಕರಹಳ್ಳಿ ಕೆರೆಯಲ್ಲಿ ತೇಲುತ್ತಿವೆ ಸತ್ತ ಮೀನುಗಳು



ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಸತ್ತ ಮೀನು ತೇಲುತ್ತಿರುವುದು.

ಮೈಸೂರು,ಮಾ.5(ಆರ್‌ಕೆ)– ಮೈಸೂರಿನ ಹೃದಯ ಭಾಗದಲ್ಲಿರುವ ಕುಕ್ಕರಹಳ್ಳಿ ಕೆರೆಯಲ್ಲಿ ಸತ್ತ ಮೀನುಗಳು ತೇಲುತ್ತಿರುವುದು ಇಂದು ಬೆಳಗ್ಗೆ ಕಂಡುಬಂದಿದೆ.

ಹೆಬ್ಬಾಳು ಕೆರೆಗೆ ಮಲಿನ ನೀರು ಹರಿದು ಬಂದು ಕೆರೆ ಅಳಿವಿನ ಅಂಚಿಗೆ ತಲುಪುತ್ತಿರುವ ಈ ಸಂದರ್ಭದಲ್ಲಿ ಪ್ರತಿಷ್ಠಿತ ಕುಕ್ಕರಹಳ್ಳಿ ಕೆರೆಯನ್ನು ಸಹ ಅಳಿವಿನ ಅಂಚಿಗೆ ದೂಡುತ್ತಿರುವುದು ವಿಪರ್ಯಾಸ ಎಂದು ಅಲ್ಲಿನ ವಾಯುವಿಹಾರಿಗಳು ತಮ್ಮ ಅಳಲು ತೋಡಿಕೊಂಡಿದ್ದಾರೆ. ಇಂದು ಬೆಳಗ್ಗೆ ವಾಯುವಿಹಾರ ಮಾಡುತ್ತಿದ್ದಾಗ ಕೆರೆಯ ನೀರಿನಲ್ಲಿ ಸತ್ತ ಮೀನುಗಳು ತೇಲುತ್ತಿರುವುದನ್ನು ಕಂಡು ಸಾರ್ವಜನಿಕರು ಸಂಬಂಧಪಟ್ಟವರಿಗೆ ಮಾಹಿತಿ ನೀಡಿದ್ದಾರೆ.

ಬೇಸಿಗೆಯ ಬಿಸಿಲಿನ ಝಳದಿಂದಾಗಿ ಕೆರೆಯ ನೀರಿನ ಮಟ್ಟ ಕುಸಿಯುತ್ತಿದ್ದು, ಅಲ್ಲಿನ ಜಲಚರಗಳು ತಾಪಮಾನಕ್ಕೆ ಸಾವಪ್ಪಿರಬಹುದೆಂದು ಶಂಕಿಸಲಾಗಿದೆ. ಪಡುವಾರಹಳ್ಳಿ (ವಿನಾಯಕನಗರ), ಜಯಲಕ್ಷ್ಮೀಪುರಂ ಸೇರಿದಂತೆ ಸುತ್ತಲಿನ ವಸತಿ ಬಡಾವಣೆಗಳಿಂದ ಪ್ರತಿನಿತ್ಯ ಒಳಚರಂಡಿ ನೀರು ಹರಿದುಬರುತ್ತಿರುವುದರಿಂದ ಕುಕ್ಕರಹಳ್ಳಿ ಕೆರೆ ನೀರು ಮಲಿನಗೊಂಡು ಜಲಚರಗಳು ಸಾವನ್ನಪ್ಪಲು ಕಾರಣವಾಗುತ್ತಿದೆ ಎಂದು ವಾಯುವಿಹಾರಿಗಳು ಆರೋಪಿಸಿದ್ದಾರೆ.

ಕೆರೆಗೆ ಮಲಿನ ನೀರು ಹರಿದುಬರದಂತೆ ತಡೆದು ವ್ಯವಸ್ಥಿತವಾಗಿ ನಿರ್ವಹಣೆ ಮಾಡದೆ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ತೋರಿರುವುದು ಕುಕ್ಕರಹಳ್ಳಿ ಕೆರೆಯ ಮಾಲಿನ್ಯ ಹಾಳಾಗಲು ಕಾರಣವಾಗಿದ್ದು, ತಕ್ಷಣವೇ ಎಚ್ಚೆತ್ತು ಕ್ರಮ ಕೈಗೊಳ್ಳಬೇಕಾಗಿದೆ ಎಂದು ಪರಿಸರವಾದಿ ಎಸ್.ಶೈಲೇಂದ್ರ ಒತ್ತಾಯಿಸಿದ್ದಾರೆ.


ಸೀವೇಜ್ ವಾಟರ್ ಮಿಶ್ರವಾಗುತ್ತಿರುವುದರಿಂದ ಆಕ್ಸಿಜನ್ ಮಟ್ಟ ಕುಸಿದು ಅಲ್ಲಿನ ಮೀನುಗಳು ಸಾವನ್ನಪ್ಪುತ್ತಿವೆ. ಮಳೆಗಾಲದಲ್ಲಿ ಶುದ್ಧ ನೀರು ಹರಿದು ಬರಲು ಇರುವ ಕಾಲುವೆಗಳು ಬಂದ್ ಆಗಿರುವುದರಿಂದ ಕೆರೆಯ ನೀರು ಶುಚಿಯಾಗದೆ ಒಳಚರಂಡಿ ನೀರಿನಿಂದ ಕಲುಷಿತಗೊಳ್ಳುತ್ತಿದೆ ಎಂದಿರುವ ಅವರು ವಿಶ್ವವಿದ್ಯಾನಿಲಯವು ಈ ಕೆರೆಯ ನೀರನ್ನು ಕ್ಯಾಂಪಸ್‌ನ ಉದ್ಯಾನವನದ ಕೃಷಿ, ಕುಲಪತಿಗಳ ವಸತಿನಿಲಯದ ಆವರಣ, ಅತಿಥಿ ಗೃಹಗಳು ಹಾಗೂ ಇನ್ನಿತರ ಉದ್ಯಾನಗಳ ಗಿಡಗಳಿಗೆ ಬಳಸುತ್ತಿವೆ ಎಂದಿದ್ದಾರೆ.

ಕೆರೆಯ ನೀರನ್ನು ಶುಚಿಯಾಗಿರಿಸಿ ಮೀನು ಮತ್ತು ಜಲಚರಗಳು ವಾಸಿಸಲು ಹಾಗೂ ಪಕ್ಷಿ ಸಂಕುಲಕ್ಕೆ ಅನುವು ಮಾಡಿಕೊಡಬೇಕು. ಆದರೆ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಕೆರೆಯನ್ನು ಸ್ವಚ್ಛವಾಗಿರಿಸಿ ಉತ್ತಮವಾಗಿ ನಿರ್ವಹಣೆ ಮಾಡದಿರುವುದು ಈ ದುಸ್ಥಿತಿಗೆ ಕಾರಣ ಎಂದು ಶೈಲೇಂದ್ರ ಆರೋಪಿಸಿದ್ದಾರೆ. ನಿತ್ಯ ಬೆಳಗ್ಗೆ ಮತ್ತು ಸಂಜೆ ಸಾವಿರಾರು ಮಂದಿ ವಾಯುವಿಹಾರ ಮಾಡುವ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯ ರಚನೆಗೆ ಸ್ಫೂರ್ತಿ ನೀಡಿದ್ದ ಕುಕ್ಕರಹಳ್ಳಿ ನಿಸರ್ಗ ತಾಣವನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ.



> “ಮೈಸೂರು ವಿಶ್ವವಿದ್ಯಾನಿಲಯದಿಂದ ಕುಕ್ಕರಹಳ್ಳಿ ಕೆರೆ ಆವರಣ ಮತ್ತು ನೀರನ್ನು ಸ್ವಚ್ಛವಾಗಿರಿಸಿ ಅಲ್ಲಿನ ಪಕ್ಷಿ ಸಂಕುಲ ಮತ್ತು ಜಲಚರಗಳು ವಾಸಿಸುವಂತೆ ನಿರ್ವಹಣೆ ಮಾಡಲಾಗುತ್ತಿದೆ. ಅಲ್ಲದೆ, ಸುತ್ತಲಿನ ಬಡಾವಣೆಗಳ ಒಳಚರಂಡಿ ನೀರು ಕೆರೆಗೆ ಸೇರದಂತೆ ತಡೆಯಲಾಗಿದೆ. ಹಾಗೂ ಬಂದ್ ಆಗಿದ್ದ ಮಳೆ ನೀರು ಹರಿದು ಬರಲು ಇರುವ ಕಾಲುವೆಗಳನ್ನು ತೆರವುಗೊಳಿಸಲಾಗಿದೆ. ಆದರೆ ನೀರಿನಲ್ಲಿ ಸತ್ತ ಮೀನುಗಳು ತೇಲುತ್ತಿವೆ ಎಂಬ ಮಾಹಿತಿ ತಿಳಿದು ಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳ ಮೂಲಕ ಪರಿಶೀಲಿಸಿದಾಗ ಮೀನು ಹಿಡಿಯುವವರು ಕೆಲವು ಸತ್ತ ಮೀನುಗಳನ್ನು ಅಲ್ಲಿಯೇ ಬಿಟ್ಟು ಹೋಗಿದ್ದಾರೆ ಎಂಬ ಮಾಹಿತಿ ಇದೆ. ಈ ಬಗ್ಗೆ ಪರಿಶೀಲನೆ ನಡೆಸುತ್ತೇನೆ. **–ಪ್ರೊ.ಎನ್.ಕೆ.ಲೋಕನಾಥ್, ಕುಲಪತಿಗಳು, ಮೈಸೂರು ವಿವಿ.**

ಸರ್ಕಾರದಿಂದ ಗ್ರಾಮಾಡಳಿತ ಅಧಿಕಾರಿಗಳಿಗೆ ಲ್ಯಾಪ್‌ಟಾಪ್ ನೀಡಲು ನಿರ್ಧಾರ



ಬೆಂಗಳೂರು, ಮಾ.5(ಕೆಎಂಶಿ)– ಗ್ರಾಮಾಡಳಿತ ಅಧಿಕಾರಿಗಳಿಗೆ ಲ್ಯಾಪ್‌ಟಾಪ್ ನೀಡಲು ಸರ್ಕಾರ ತೀರ್ಮಾನಿಸಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನಪರಿಷತ್ತಿನಲ್ಲಿ ಇಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಕೇಶವ ಪ್ರಸಾದ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈಗಾಗಲೇ 4,000 ಲ್ಯಾಪ್‌ಟಾಪ್ ಖರೀದಿ ಪ್ರಕ್ರಿಯೆ ಜಾರಿಯಲ್ಲಿದೆ ಎಂದರು. ಕಳೆದ ಸಾಲಿನ ಮುಂಗಡಪತ್ರದಲ್ಲಿ ಘೋಷಿಸಿರುವಂತೆ ಇಲಾಖೆ ಈ ತೀರ್ಮಾನ ಕೈಗೊಂಡಿದೆ. ಇನ್ನು ಮುಂದೆ ಆಡಳಿತಾಧಿಕಾರಿಗಳಿಗೆ ಒದಗಿಸುವ ಛಾವಡಿಗಳು ಕಂದಾಯ ಇಲಾಖೆ ಸುಪರ್ದಿಗೆ ಸೇರಿರುತ್ತವೆ. ಇಂತಹ ಛಾವಡಿಗಳು ಶಿಥಿಲಗೊಂಡಿದ್ದರೆ, ದುರಸ್ತಿ ಮಾಡಲಾಗುವುದು, ಅಷ್ಟೇ ಅಲ್ಲ, ಗ್ರಾಮ ಪಂಚಾಯತ್ ಆಡಳಿತಾಧಿಕಾರಿಗಳು ಕರ್ತವ್ಯ ನಿರ್ವಹಿಸುವ ಸ್ಥಳಗಳಲ್ಲಿ ದಾಖಲೆಗಳ ಸಂರಕ್ಷಣೆಗೆ ಕಪಾಟು ಮತ್ತಿತರ ಸವಲತ್ತು ಒದಗಿಸಲಾಗುವುದು ಎಂದರು. ಹೊಸ ಜಿಲ್ಲೆ ಅಥವಾ ತಾಲೂಕುಗಳ ರಚನೆ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಮತ್ತೊಂದು ಪ್ರಶ್ನೆಗೆ ಕೃಷ್ಣಬೈರೇಗೌಡ ಉತ್ತರಿಸಿದ್ದಾರೆ. ಜನಗಣತಿ ಸಂದರ್ಭದಲ್ಲಿ ಯಾವ ರಾಜ್ಯಗಳೂ ಹೊಸ ಕಂದಾಯ ಜಿಲ್ಲೆ ಘೋಷಣೆ ಮಾಡಬಾರದು ಎಂಬ ಕೇಂದ್ರ ಸರ್ಕಾರದ ನಿಯಮವಿದೆ, ಅಲ್ಲದೆ, ರಾಜ್ಯ ಸರ್ಕಾರದ ಮುಂದೆಯೂ ಅಂತಹ ಪ್ರಸ್ತಾಪವಿಲ್ಲ ಎಂದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಮಾ. 5– ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯನ್ನಾಗಿ ಮೈಸೂರಿನ ರಾಜೀವ್‌ನಗರದ ನಿವಾಸಿ ಶ್ರೀಮತಿ ಸಂಧ್ಯಾಶ್ರೀ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ಸರ್ಬಿಯಾ ಸಂಸತ್‌ನಲ್ಲಿ ಹೊಗೆ ಬಾಂಬ್ ದಾಳಿ ನಡೆಸಿದ ವಿಪಕ್ಷ ನಾಯಕರು



ಬೆಲ್‌ಗ್ರೇಡ್: ಸರ್ಬಿಯಾದಲ್ಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ವಿರೋಧಿ ಪ್ರತಿಭಟನೆಗಳಿಗೆ ಬೆಂಬಲವಾಗಿ ಸಂಸತ್‌ನಲ್ಲಿ ವಿಪಕ್ಷಗಳ ನಾಯಕರು ಹೊಗೆ ಬಾಂಬ್, ಮೊಟ್ಟೆ, ನೀರಿನ ಬಾಟಲಿಗಳನ್ನು ಎಸೆದು ಗಲಾಟೆ ಸೃಷ್ಟಿಸಿದ್ದಾರೆ. ಘಟನೆಯಲ್ಲಿ ಹಲವು ಶಾಸಕರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಇದರ ವಿಡಿಯೊಗಳು ಹರಿದಾಡುತ್ತಿವೆ. ಸಂಸತ್‌ನಲ್ಲಿ ಅಧಿವೇಶನ ಆರಂಭವಾಗುತ್ತಿದ್ದಂತೆ ಬಣ್ಣದ ಹೊಗೆ ಬರುವ ಬಾಂಬ್‌ಗಳನ್ನು ಎಸೆದಿದ್ದಾರೆ, ಇದರಿಂದ ಗದ್ದಲ ಉಂಟಾಗಿದ್ದು, ಶಾಸಕರು ಸೇರಿದಂತೆ ಅಲ್ಲಿ ನೆರೆದಿದ್ದವರು ಗೊಂದಲಕ್ಕೀಡಾದ ದೃಶ್ಯಗಳನ್ನು ವಿಡಿಯೊಗಳಲ್ಲಿ ಕಾಣಬಹುದಾಗಿದೆ.

ಕಳೆದ ವರ್ಷ ರೈಲು ನಿಲ್ದಾಣವೊಂದರ ಮೇಲ್ಛಾವಣಿ ಕುಸಿದು ಕನಿಷ್ಠ 15 ಜನರು ಮೃತಪಟ್ಟಿದ್ದರು. ಹೀಗಾಗಿ ವಿದ್ಯಾರ್ಥಿ ಸಂಘಟನೆಗಳು ಸರ್ಕಾರದ ಭ್ರಷ್ಟಾಚಾರ ವಿರೋಧಿಸಿ ತಿಂಗಳುಗಳಿಂದ ಪ್ರತಿಭಟನೆಗಳು ನಡೆಯುತ್ತಿವೆ.

ಮಣಿಪುರದಲ್ಲಿ 5.7 ತೀವ್ರತೆಯ ಪ್ರಬಲ ಭೂಕಂಪ; ಹಲವು ಕಟ್ಟಡಗಳಲ್ಲಿ ಬಿರುಕು



ಇಂಫಾಲ: ಮಣಿಪುರದಲ್ಲಿ ಬುಧವಾರ 5.7 ತೀವ್ರತೆಯ ಪ್ರಬಲ ಭೂಕಂಪನ ಸೇರಿದಂತೆ ಸತತ ಎರಡು ಬಾರಿ ಭೂಮಿ ಕಂಪಿಸಿದೆ. ಮಣಿಪುರದ ಈಶಾನ್ಯ ಭಾಗದಲ್ಲಿ ಈ ಕಂಪನಗಳು ಸಂಭವಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಳಗ್ಗೆ 11.06ಕ್ಕೆ ರಾಜ್ಯದಲ್ಲಿ 5.7 ತೀವ್ರತೆಯ ಭೂಕಂಪ ಸಂಭವಿಸಿದೆ. ಈ ಭೂಕಂಪನದ ಕೇಂದ್ರಬಿಂದು ಇಂಫಾಲ್ ಪೂರ್ವ ಜಿಲ್ಲೆಯ ಯೈರಿಪೋಕ್‌ನಿಂದ ಪೂರ್ವಕ್ಕೆ 44 ಕಿಮೀ ಮತ್ತು 110 ಕಿಮೀ ಆಳದಲ್ಲಿ ಪತ್ತೆಯಾಗಿದೆ ಎಂದು ಶಿಲ್ಲಾಂಗ್‌ನ ಪ್ರಾದೇಶಿಕ ಭೂಕಂಪನ ಕೇಂದ್ರದ ಅಧಿಕಾರಿಗಳು ತಿಳಿಸಿದ್ದಾರೆ. ಅಸ್ಸಾಂ, ಮೇಘಾಲಯ ಮತ್ತು ಈ ಪ್ರದೇಶದ ಇತರ ಭಾಗಗಳಲ್ಲಿ ಭೂಮಿ ಕಂಪಿಸಿದ ಅನುಭವ ಉಂಟಾಗಿದೆ ಎಂದು ಹೇಳಿದರು.

ಮಣಿಪುರದಲ್ಲಿ ಮಧ್ಯಾಹ್ನ 12.20ಕ್ಕೆ 4.1 ತೀವ್ರತೆಯ ಎರಡನೇ ಭೂಕಂಪ ಸಂಭವಿಸಿದೆ. ಭೂಕಂಪದ ಕೇಂದ್ರಬಿಂದುವು ರಾಜ್ಯದ ಕಾಮ್‌ಜಾಂಗ್ ಜಿಲ್ಲೆಯಲ್ಲಿ 66 ಕಿಮೀ ಆಳದಲ್ಲಿ ಪತ್ತೆಯಾಗಿದೆ ಎಂದು ಅವರು ಹೇಳಿದರು. ಭೂಕಂಪದ ನಂತರ ಮಣಿಪುರದ ಹಲವು ಕಟ್ಟಡಗಳಲ್ಲಿ ಬಿರುಕು ಕಾಣಿಸಿಕೊಂಡಿದೆ.

ಏ.2ರಿಂದ ಭಾರತ, ಚೀನಾ ಮೇಲೆ ಪ್ರತಿಸುಂಕ



ವಾಷಿಂಗ್ಟನ್: ಭಾರತ, ಚೀನಾ ಸೇರಿದಂತೆ ಮತ್ತಿತರ ರಾಷ್ಟ್ರಗಳು ಅಮೆರಿಕದ ಉತ್ಪನ್ನಗಳ ಬಗ್ಗೆ ಹೆಚ್ಚು ಸುಂಕ ವಿಧಿಸುವ ಬಗ್ಗೆ ಕಿಡಿಕಾರಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇದು ಅಮೆರಿಕಕ್ಕೆ ಆಗುತ್ತಿರುವ ಅನ್ಯಾಯ ಎಂದಿದ್ದು, ಮುಂದಿನ ತಿಂಗಳಿನಿಂದ ಪ್ರತಿಸುಂಕ ವಿಧಿಸುವುದಾಗಿ ಘೋಷಿಸಿದ್ದಾರೆ. ಪ್ರತಿ ಸುಂಕ ಏ.2ರಿಂದ ಜಾರಿಗೆ ಬರಲಿದ್ದು, ಅಮೆರಿಕದ ಉತ್ಪನ್ನಗಳ ಮೇಲೆ ಸುಂಕದಷ್ಟೇ ವಿದೇಶಿ ರಾಷ್ಟ್ರಗಳ ಉತ್ಪನ್ನಗಳ ಮೇಲೆ ಸುಂಕ ವಿಧಿಸಲಾಗುವುದು. ಇತರ ದೇಶಗಳು ದಶಕಗಳಿಂದಲೂ ನಮ್ಮ ಉತ್ಪನ್ನಗಳ ಮೇಲೆ ಸುಂಕ ವಿಧಿಸುತ್ತಲೇ ಇವೆ. ಈಗ ಪ್ರತಿಯಾಗಿ ಅಂತಹ ರಾಷ್ಟ್ರಗಳ ಉತ್ಪನ್ನಗಳ ಮೇಲೆ ಸುಂಕ ವಿಧಿಸುತ್ತೇವೆ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್‌ನ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಟ್ರಂಪ್, ಯುರೋಪಿಯನ್ ಒಕ್ಕೂಟ, ಚೀನಾ, ಬ್ರೆಜಿಲ್, ಭಾರತ, ಮೆಕ್ಸಿಕೊ ಮತ್ತು ಕೆನಡಾ ಸೇರಿದಂತೆ ಹಲವು ದೇಶಗಳು ನಾವು ಅವರ ಉತ್ಪನ್ನಗಳ ಮೇಲೆ ವಿಧಿಸುವುದಕ್ಕಿಂತ ಹೆಚ್ಚಿನ ಸುಂಕ ವಿಧಿಸುತ್ತವೆ. ಇದು ಅನ್ಯಾಯವಾಗಿದೆ. ಭಾರತ ದೇಶ ನಮ್ಮ ಮೇಲೆ ಶೇ.100ಕ್ಕಿಂತ ಹೆಚ್ಚಿ ಸುಂಕ ವಿಧಿಸುತ್ತಿದೆ ಎಂದು ಕಿಡಿಕಾರಿದ್ದಾರೆ.

ಯಮುನಾ ನದಿಯಿಂದ 1,300 ಟನ್ ತ್ಯಾಜ್ಯ ಹೊರಕ್ಕೆ



ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಯಮುನಾ ನದಿ ಶುದ್ಧೀಕರಣಕ್ಕೆ ಆದ್ಯತೆ ನೀಡಿದೆ. ಕಳೆದ 10 ದಿನಗಳಲ್ಲಿ ನದಿಯಿಂದ 1,300 ಟನ್ ತ್ಯಾಜ್ಯವನ್ನು ಹೊರಕ್ಕೆ ತೆಗೆಯಲಾಗಿದೆ ಎಂದು ದೆಹಲಿಯ ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಸಚಿವ ಪರ್ವೇಶ್ ವರ್ಮಾ ತಿಳಿಸಿದರು. ಇಂದು ದೋಣಿ ಮೂಲಕ ನದಿಯನ್ನು ಪರಿಶೀಲಿಸಿದ ನಂತರ ಅಧಿಕಾರಿ ಸಂಪರ್ಕಿಸಲಾಗುವುದು ಮತ್ತು ಸಂಸ್ಕರಿಸದ ತ್ಯಾಜ್ಯ ನೀರು ನದಿಗೆ ಹರಿಯುವುದನ್ನು ತಡೆಯಲು ಅವುಗಳ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. ಯಮುನಾ ನದಿಯನ್ನು ಸಂಪೂರ್ಣವಾಗಿ ಶುದ್ಧೀಕರಿಸುವುದು ನಮ್ಮ ಆದ್ಯತೆಯಾಗಿದೆ. ಸದ್ಯಕ್ಕೆ ಕಳೆದ 10 ದಿನಗಳಲ್ಲಿ 1,300 ಮೆಟ್ರಿಕ್ ಟನ್ ಕಸ ತೆಗೆದುಹಾಕಲಾಗಿದೆ. ನದಿಯ ಮುಂಭಾಗವನ್ನು ಅಭಿವೃದ್ಧಿಪಡಿಸಲು ದೆಹಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಿದ್ದೇವೆ. ಇದು ನದಿಯ ದಂಡೆಯನ್ನು ಪ್ರವಾಸೋದ್ಯಮ, ಸಾಂಸ್ಕೃತಿಕ ಕೇಂದ್ರವಾಗಿ ಮಾಡಲಿದೆ ಎಂದರು.

ಪಾಕಿಸ್ತಾನದಲ್ಲಿ ಆತ್ಮಾಹುತಿ ಬಾಂಬ್ ದಾಳಿ: ಮೃತರ ಸಂಖ್ಯೆ 12ಕ್ಕೆ ಏರಿಕೆ



ಖೈಬರ್ ಪಖ್ತುಂಖ್ವಾ: ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದಲ್ಲಿರುವ ಬನ್ನು ಸೇನಾ ನೆಲೆಯ ಬಳಿ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 12ಕ್ಕೆ ಏರಿಕೆಯಾಗಿದ್ದು, 30 ಮಂದಿ ಗಾಯಗೊಂಡಿದ್ದಾರೆ. ಮಂಗಳವಾರ ಎರಡು ಸ್ಫೋಟಕ ತುಂಬಿದ ವಾಹನಗಳು ಬನ್ನು ಕಂಟೋನ್ಮೆಂಟ್ ಪ್ರದೇಶದ ಗಡಿ ಗೋಡೆಗೆ ನುಗ್ಗಿದ್ದರಿಂದ 9 ಮಂದಿ ಸಾವನ್ನಪ್ಪಿದ್ದರು. ಅಲ್ಲಿದ್ದ ಸೇನಾ ಸಿಬ್ಬಂದಿ 6 ಉಗ್ರರನ್ನು ಹೊಡೆದುರುಳಿಸಿದೆ ಎಂದು ವರದಿಯಾಗಿದೆ. ಟಿಟಿಪಿಯ ಜೈಶುಲ್ ಫರ್ಸಾನ್ ಉಗ್ರ ಸಂಘಟನೆ ದಾಳಿಯ ಹೊಣೆ ಹೊತ್ತಿದೆ. ಆತ್ಮಹತ್ಯಾ ಬಾಂಬರ್‌ಗಳು ನಿನ್ನೆ ಸಂಜೆ ಸೂರ್ಯಾಸ್ತದ ಸಮಯದಲ್ಲಿ ಬನ್ನು ಕಂಟೋನ್ಮೆಂಟ್‌ನ ಗೋಡೆಗೆ ಸ್ಫೋಟಕ ತುಂಬಿದ್ದ ವಾಹನಗಳನ್ನು ನುಗ್ಗಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಪೇಶಾವರದ ನೈಋತ್ಯಕ್ಕೆ 200 ಕಿಮೀ ದೂರದಲ್ಲಿ ಈ ಘಟನೆ ನಡೆದಿದೆ ಎಂದು ಪಿಟಿಐ ವರದಿ ತಿಳಿಸಿದೆ. ಜೈಶ್ ಅಲ್ ಫುರ್ಸಾನ್ ಉಗ್ರರು ಈ ದಾಳಿ ನಡೆಸಿದ್ದಾರೆ. ಈ ಗುಂಪು ಪಾಕಿಸ್ತಾನದ ತೆಹ್ರೀಕ್–ಎ–ತಾಲಿಬಾನ್‌ನ ಹಲವಾರು ಬಣಗಳಲ್ಲಿ ಒಂದಾಗಿದೆ. ಜೈಶ್ ಅಲ್ ಫುರ್ಸಾನ್ ಉಗ್ರರು ಈ ದಾಳಿ ನಡೆಸಿದ್ದಾರೆ.

ಚಿಕ್ಕ ಅಳುವಾರ ಸ್ನಾತಕೋತ್ತರ ಕೇಂದ್ರ ಆವರಣದಲ್ಲಿ ಕಾಡ್ಗಿಚ್ಚು, ಹತ್ತಾರು ಎಕರೆ ಪ್ರದೇಶ ಬೆಂಕಿಗೆ ಆಹುತಿ



ಕುಶಾಲನಗರ,ಮಾ.5– ಸಮೀಪದ ತೊರೆನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಚಿಕ್ಕ ಅಳುವಾರ ಸ್ನಾತಕೋತ್ತರ ಕೇಂದ್ರದ ಆವರಣದಲ್ಲಿ ಮಂಗಳವಾರ ಸಂಜೆ ಕಾಡ್ಗಿಚ್ಚು ಕಾಣಿಸಿಕೊಂಡು ಹತ್ತಾರು ಎಕರೆ ಪ್ರದೇಶದಲ್ಲಿ ಬೆಳೆದು ನಿಂತಿದ್ದ ಕುರುಚಲು ಗಿಡಗಳು ಬೆಂಕಿಗೆ ಆಹುತಿಯಾಗಿವೆ.

ಮಧ್ಯಾಹ್ನ ಮೂರು ಗಂಟೆ ಸಮಯದಲ್ಲಿ ಕಾಣಿಸಿಕೊಂಡ ಕಾಡ್ಗಿಚ್ಚು ಗಾಳಿಯ ರಭಸಕ್ಕೆ ವೇಗವಾಗಿ ಹರಡಲು ಆರಂಭಿಸಿತು. ತಕ್ಷಣ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ ಮೇರೆಗೆ ಕುಶಾಲನಗರ ಅಗ್ನಿಶಾಮಕ ಠಾಣೆ ಪ್ರಭಾರ ಠಾಣಾಧಿಕಾರಿ ಲತೇಶ್ ಕುಮಾರ್ ನೇತೃತ್ವದಲ್ಲಿ ಆಗಮಿಸಿದ ಸಿಬ್ಬಂದಿಗಳ ತಂಡ ನಿರಂತರ ಮೂರು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು. ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣೆ ಸಿಬ್ಬಂದಿಗಳಾದ ಪ್ರೇಮಾನಂದ, ಸಂದೀಪ್, ಪ್ರವೀಣ್, ಸಂಗಮೇಶ ಹಾಗೂ ಅನಂದ ಪಾಲ್ಗೊಂಡಿದ್ದರು.

ಹೆಬ್ಬಾಲೆ ಬಳಿ ಕಾಡ್ಗಿಚ್ಚು: ಹೆಬ್ಬಾಲೆ ಗ್ರಾಮದ ಬಳಿ ಬಾಣವಾರ ರಸ್ತೆಯ ಬದಿಯಲ್ಲಿ ಬೆಳೆದು ನಿಂತಿದ್ದ ಕುರುಚಲು ಗಿಡಗಳಿಗೆ ಇಂದು ಸಂಜೆ ಬೆಂಕಿ ಬಿದ್ದಿದೆ. ರಸ್ತೆ ಉದ್ದಕ್ಕೂ ಧಗಧಗನೆ ಉರಿಯುತ್ತಿದ್ದ ಬೆಂಕಿಯಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು.

ಕೈದಿ ಭೇಟಿ ನೆಪದಲ್ಲಿ ನಿಷೇಧಿತ ಮಾದಕ ವಸ್ತು ತಂದಿದ್ದ ವ್ಯಕ್ತಿಯ ಬಂಧನ



ಮಡಿಕೇರಿ,ಮಾ.5– ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯನ್ನು ನೋಡುವ ನೆಪದಲ್ಲಿ ನಿಷೇಧಿತ ಮಾದಕ ವಸ್ತು ಹ್ಯಾಶಿಷ್‌ನೊಂದಿಗೆ ಜೈಲಿಗೆ ಬಂದಿದ್ದ ಆರೋಪಿಯನ್ನು ಜೈಲು ಅಧಿಕಾರಿಗಳು ಸೆರೆ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಆರೋಪಿ ವಿರುದ್ಧ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 'ಎನ್‌ಡಿಪಿಎಸ್ ಕಾಯಿದೆ' ಅಡಿ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಲಾಗಿದೆ. ಕೇರಳ ರಾಜ್ಯ ಕಣ್ಣೂರು ಜಿಲ್ಲೆಯ ತಲಚೇರಿ ಮೂಲದ ನಿವಾಸಿ ಸುರಭಿಲ್(26) ಎಂಬಾತನೇ ಬಂಧಿತ ಆರೋಪಿ. ಟೂತ್‌ಪೇಸ್ಟ್ ಟ್ಯೂಬ್‌ನ ಒಳಭಾಗದಲ್ಲಿ ತುಂಬಿಸಿ ಜೈಲಿಗೆ ತರಲಾಗಿದ್ದ 24 ಗ್ರಾಂ ನಿಷೇಧಿತ ಮಾದಕ ವಸ್ತು ಹ್ಯಾಶಿಷ್ ಅನ್ನು ವಶಕ್ಕೆ ಪಡೆಯಲಾಗಿದೆ.

ಘಟನೆ ಹಿನ್ನೆಲೆ: ಕಣ್ಣೂರು ಜಿಲ್ಲೆಯ ತಲಚೇರಿ ಮೂಲದ ನಿವಾಸಿ ಸುರಭಿಲ್(26) ಎಂಬಾತ ಮಡಿಕೇರಿ ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾ ಕೈದಿಯಾಗಿರುವ ಸಮನ್ ಎಂಬಾತನ ಸಹೋದರ ಎಂದು ಹೇಳಿಕೊಂಡು ಸಂದರ್ಶನಕ್ಕಾಗಿ ಜೈಲಿಗೆ ಬಂದಿದ್ದ. ಈ ವೇಳೆ ಸಮನ್‌ಗೆ ನೀಡಲು ದಿನ ನಿತ್ಯದ ಸಾಮಗ್ರಿಗಳಾದ ಟೂತ್‌ಪೇಸ್ಟ್ ಮತ್ತು ಬ್ರಷ್, ಸ್ನಾನಕ್ಕೆ ಬಳಸುವ ಸೋಪು, ಬಟ್ಟೆ ಸೋಪು, ತಲೆಗೆ ಹಚ್ಚುವ ಆಯಿಲ್ ಮತ್ತು ಶ್ಯಾಂಪೊಗಳನ್ನು ತಂದಿದ್ದ. ಈ ವಸ್ತುಗಳನ್ನು ವಿಚಾರಣಾಧೀನ ಕೈದಿಗೆ ನೀಡುವ ಮುನ್ನ ಜಿಲ್ಲಾ ಕಾರಾಗೃಹ ಅಧೀಕ್ಷಕ ಸಂಜಯ್ ಜತ್ತಿ ಅವರು ಪರಿಶೀಲನೆಗೆ ಒಳಪಡಿಸಿದ್ದಾರೆ. ಈ ವೇಳೆ ಟೂತ್‌ಪೇಸ್ಟ್ ಅನ್ನು ಪರಿಶೀಲನೆ ನಡೆಸಿದಾಗ ಅದರ ಒಳಗಿನಿಂದ ಪೇಸ್ಟ್ ಬದಲಿಗೆ ಕಪ್ಪು ಬಣ್ಣದ ಅಮಲು ಪದಾರ್ಥ ಇರುವುದು ಕಂಡು ಬಂದಿದೆ. ತಕ್ಷಣವೇ ಆತನನ್ನು ಸೆರೆ ಹಿಡಿದು ಮಡಿಕೇರಿ ಗ್ರಾಮಾಂತರ ಠಾಣೆಗೆ ಒಪ್ಪಿಸಲಾಗಿದೆ.

ಅಜ್ಜೇಟಿರ ವಿಠಲ ಗಣಪತಿ ನಿಧನ



ನಾಪೋಕ್ಲು, ಮಾ.5– ಇಲ್ಲಿಗೆ ಸಮೀಪದ ಬೇತು ಗ್ರಾಮದ ನಿವಾಸಿ ಅಜ್ಜೇಟಿರ ವಿಠಲ ಗಣಪತಿ(62) ಬುಧವಾರ ಅನಾರೋಗ್ಯದಿಂದ ನಿಧನರಾದರು. ಮೃತರ ಅಂತ್ಯಕ್ರಿಯೆ ಬುಧವಾರ ಅಜ್ಜೇಟಿರ ಕುಟುಂಬದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ವಿವಾದಿತ ಕೊಯನಾಡು ಸರ್ಕಾರಿ ಶಾಲೆ ಜಾಗ

ಕಂದಾಯ ಇಲಾಖೆ, ಅರಣ್ಯ ಇಲಾಖೆಯಿಂದ ಜಂಟಿ ಸರ್ವೆ

ಮಡಿಕೇರಿ,ಮಾ.5– ಕೊಯನಾಡು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಜಾಗ ಮಂಜೂರಾತಿಗೆ ಸಂಬಂಧಿಸಿದ ವಿವಾದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ವತಿಯಿಂದ ಜಂಟಿ ಸರ್ವೆ ಕಾರ್ಯ ನಡೆಯಿತು.

ಸರಕಾರಿ ಶಾಲೆಗೆ ಜಾಗ ಮಂಜೂರಾತಿಗೆ ಸಂಬಂಧಿಸಿದಂತೆ ಗ್ರಾಮಸ್ಥರು, ಶಾಲಾಭಿವೃದ್ಧಿ ಸಮಿತಿ, ಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘ, ಸಂಪಾಜೆ ಗ್ರಾಮ ಪಂಚಾಯ್ತಿ ಸದಸ್ಯರು, ಮತ್ತು ವಿದ್ಯಾರ್ಥಿಗಳ ಪೋಷಕರು ಕಳೆದೆರಡು ದಿನಗಳಿಂದ ಜಾಗವನ್ನು ಸ್ವಚ್ಛಗೊಳಿಸಲು ತೆರಳಿದ ಸಂದರ್ಭ ಅರಣ್ಯ ಇಲಾಖೆ ಸಿಬ್ಬಂದಿಗಳು ಅಡ್ಡಿಪಡಿಸಿದ್ದರು.

ಸಂಪಾಜೆ ಗ್ರಾಮ ಪಂಚಾಯ್ತಿಯ ಸರ್ವೆ ನಂಬರ್ 69/1ರಲ್ಲಿ 1 ಎಕರೆ ಜಾಗವನ್ನು ಕೊಯನಾಡು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕಂದಾಯ ಇಲಾಖೆ ಮಂಜೂರು ಮಾಡಿದ್ದು, ಜಾಗವನ್ನು ಸ್ವಚ್ಛಗೊಳಿಸಲು ತೆರಳಿದ್ದ ಗ್ರಾಮಸ್ಥರಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಡೆಯೊಡ್ಡಿದ್ದರು. ವಿಚಾರಕ್ಕೆ ಸಂಬಂಧಿಸಿದಂತೆ ಗ್ರಾಮಸ್ಥರು ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದ್ದರು. ವಿವಾದಕ್ಕೆ ಸಂಬಂಧಿಸಿದಂತೆ ಅರಣ್ಯ, ಕಂದಾಯ ಮತ್ತು ಶಿಕ್ಷಣ ಇಲಾಖಾಧಿಕಾರಿಗಳ ಜತೆ ಜಿಲ್ಲಾಧಿಕಾರಿಗಳು ಸಭೆ ನಡೆಸಿ, ಅರಣ್ಯ ಹಾಗೂ ಕಂದಾಯ ಇಲಾಖೆಗಳ ಮೂಲಕ ಜಾಗದ ಜಂಟಿ ಸರ್ವೆ ಕಾರ್ಯ ನಡೆಸುವಂತೆ ಸೂಚನೆ ನೀಡಿದ್ದರು.



ಸರ್ವೆ ಕಾರ್ಯ ನಡೆಸುತ್ತಿರುವ ಅಧಿಕಾರಿಗಳು.

ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಬುಧವಾರ ಅರಣ್ಯ ಇಲಾಖೆಯ ಸರ್ವೆಯರ್ ಸಿದ್ದಲಿಂಗಪ್ಪ ಬಾಗಿ, ಕಂದಾಯ ಇಲಾಖೆಯ ಸರ್ವೆಯರ್ ಜಯಕುಮಾರ್, ಪ್ರದೀಪ್ ಅವರುಗಳು ಜಾಗದ ಜಂಟಿ ಸರ್ವೆ ಕಾರ್ಯ ನಡೆಸಿದರು. ಈ ಸಂದರ್ಭ ಸಂಪಾಜೆ ವಲಯ ಅರಣ್ಯಾಧಿಕಾರಿ ದೇಚಮ್ಮ ಹಾಗೂ ಸಿಬ್ಬಂದಿಗಳು ಮತ್ತು ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಪುರುಷೋತ್ತಮ, ಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಹನೀಫ್ ಸಂಪಾಜೆ, ಸಂಪಾಜೆ ಗ್ರಾಮ ಪಂಚಾಯ್ತಿ ಸದಸ್ಯರಾದ ಸುರೇಶ್ ಮತ್ತಿತರರು ಹಾಜರಿದ್ದರು.

ಕೊಡವ ಶೈಕ್ಷಣಿಕ, ಸಾಂಸ್ಕೃತಿಕ ಸಂಸ್ಥೆ ಅಸ್ತಿತ್ವಕ್ಕೆ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಚೇನಂಡ ಗಿರೀಶ್‌ಪೂಣಚ್ಚ.

ವಿರಾಜಪೇಟೆ, ಮಾ.5– ಕೊಡವ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಸಂಸ್ಥೆ (ಕೆಇಸಿಎಸ್‌ಟಿ) ಮಾರ್ಚ್ 1 ರಂದು ನೂತನವಾಗಿ ಅಸ್ತಿತ್ವಕ್ಕೆ ಬಂದಿದ್ದು, ಮುಂಬರುವ ಶೈಕ್ಷಣಿಕ ವರ್ಷದಿಂದ ಕೊಡವ ಮಕ್ಕಳಿಗೆ ವಿದ್ಯಾಭ್ಯಾಸ, ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಕ್ರೀಡೆಗೆ ಹೆಚ್ಚಿನ ಮಹತ್ವ ನೀಡುವ ಧ್ಯೇಯೋದ್ದೇಶಗಳನ್ನು ಹೊಂದಿ ಕಾರ್ಯೋನ್ಮುಖವಾಗಿರುವುದಾಗಿ ಸಂಸ್ಥೆಯ ಕಾರ್ಯಾಧ್ಯಕ್ಷ ಚೇನಂಡ ಗಿರೀಶ್‌ಪೂಣಚ್ಚ ಹೇಳಿದರು.

ವಿರಾಜಪೇಟೆಯ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಸಾಲಿನಿಂದ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ಕನಿಷ್ಠ ಐದು ಕೊಡವ ಮಕ್ಕಳಿಗೆ ಶಾಲಾ ಶುಲ್ಕ ಸಮವಸ್ತ್ರ, ವಾಹನ ಶುಲ್ಕ ಇತ್ಯಾದಿಗಳನ್ನು ಭರಿಸಲಾಗುವುದು. ಹತ್ತನೇ ತರಗತಿಯಲ್ಲಿ ಕೊಡಗು ಜಿಲ್ಲೆಗೆ ಮೊದಲ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂವರು ಕೊಡವ ಮಕ್ಕಳಿಗೆ ಪ್ರೋತ್ಸಾಹಧನ ನೀಡುವ ಉದ್ದೇಶ ಹೊಂದಲಾಗಿದೆ ಎಂದರು. ಸಂಸ್ಥೆಯ ಉಪಾಧ್ಯಕ್ಷೆ ಕಾಣತಂಡ ಬೀನಾ ಜಗದೀಶ್ ಮಾತನಾಡಿ, ಕೊಡವ ಸಂಸ್ಕೃತಿಯ ಅವಿಭಾಜ್ಯ ಸಂಪತ್ತುಗಳಾದ ಆಟ್‌ಪಾಟ್, ಉಡುಗೆ, ತೊಡುಗೆಗಳ ಸಂರಕ್ಷಣೆ ಮಾಡುವುದು ಇಂದಿನ ಕಾಲಘಟ್ಟದಲ್ಲಿ ಅನಿವಾರ್ಯವಾಗಿದೆ. ಈ ಸುಬಂಧ ಮುಬರುವ ದಿನಗಳಲ್ಲಿ ಕೊಡವ ಸಮಾಜ ಇತರ ಸಂಘ ಸಂಸ್ಥೆಗಳ ಸಹಕಾರ ಕೋರಿ ಆ ಮೂಲಕ [illegible] ಆಯೋಜಿಸುವ ನಿರ್ಧಾರ ನಮ್ಮದಾಗಿದೆ ಎಂದರು.

ಸಂಸ್ಥೆಯ ಕಾರ್ಯದರ್ಶಿ ಬಾಳೆಯಡ ಪ್ರತೀಶ್ ಪೂವಯ್ಯ ಮಾತನಾಡಿ, ಇಂದಿನ ಪೀಳಿಗೆಯ ಮಾನಸಿಕ, ಶಾರೀರಿಕ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಸಫಲತೆಯನ್ನು ಕಾಣುವಲ್ಲಿ ಕ್ರೀಡೆ ಮಹತ್ತರ ಫಲಿತಾಂಶವನ್ನು ನೀಡುತ್ತಿದೆ. ಮಕ್ಕಳ ದೈಹಿಕ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಟ್ರ್ಯಾಕ್ ಮತ್ತು ಫೀಲ್ಡ್ ಸೇರಿದಂತೆ ವರ್ಷಾಂತ್ಯದ ಡಿ.27 ಮತ್ತು 28 ರಂದು ನಾಪೋಕ್ಲುವಿನಲ್ಲಿ ಒಲಂಪಿಕ್ ಮಾದರಿಯಲ್ಲಿ ಮಿನಿ ಕ್ರೀಡಾಹಬ್ಬ ನಡೆಸಲು ತಯಾರಿ ನಡೆಸಲಾಗಿದೆ. ಇದರಲ್ಲಿ ಮುಖ್ಯವಾಗಿ 100, 200, 400 ಮೀಟರ್ ಓಟ 4 ರಿಲೇ 5000 ಹಾಗೂ ಮ್ಯಾರಾಥಾನ್, ಭಾರದ ಕಲ್ಲು ಎಸೆತ, ಹಾಕಿ ಇತ್ಯಾದಿ ಕ್ರೀಡೆಗಳು ನಡೆಯಲಿವೆ. ಈ ಬಾರಿ ಮುದ್ದಂಡ ಕೊಡವ ಕುಟುಂಬಗಳ ಹಾಕಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ ನಾಲ್ಕು ತಂಡಗಳ ಹಾಕಿ ಪಂದ್ಯಾಟ ನಡೆಸಲಾಗುತ್ತದೆ ಎಂದು ಹೇಳಿದರು.

ಗೋಷ್ಠಿಯಲ್ಲಿ ಸಂಸ್ಥೆಯ ನಿರ್ದೇಶಕರುಗಳಾದ ಪಟ್ಟಡ ಮನು ರಾಮಚಂದ್ರ ಮತ್ತು ಕ್ಯಾಪ್ಟನ್ ಬಿದ್ದಂಡ ನಾಣಯ್ಯ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ: ಸೋಮವಾರಪೇಟೆ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆವಿ ಎಫ್3 ಶನಿವಾರಸಂತೆ ಮಾರ್ಗದಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾ.6 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಶನಿವಾರಸಂತೆ ಟೌನ್, ಗುಡುಗಳಲೆ, ಕಾಜೂರು, ಕೂಜುಗೇರಿ, ಮಾದ್ರೆ, ಅಪ್ಪಶೆಟ್ಟಳ್ಳಿ, ಶೆಟ್ಟಿಗನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವೈದ್ಯಕೀಯ ಎಂಡಿ ಪರೀಕ್ಷೆಯಲ್ಲಿ ಡಾ.ಶ್ರೀಲೇಖ ಕಾರಂತ 4ನೇ ರ್‍ಯಾಂಕ್



ಮಡಿಕೇರಿ,ಮಾ.5– ಪ್ರತಿಷ್ಠಿತ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 2025ನೇ ಸಾಲಿನ ಎಂಡಿ ವೈದ್ಯಕೀಯ ಪರೀಕ್ಷೆಯಲ್ಲಿ 'ರೇಡಿಯೇಷನ್ ಅಂಕಾಲಜಿ' ವಿಭಾಗದಲ್ಲಿ ಡಾ.ಶ್ರೀಲೇಖ ಕಾರಂತ ಅವರು ರಾಜ್ಯಕ್ಕೆ 4ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಇವರು ಚೆಂಬು ಗ್ರಾಮದ ಡಾ.ಫಲ್ಗುಣ ಅವರ ಪತ್ನಿ, ಮಡಿಕೇರಿ ಎಪಿಎಂಸಿ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಉಪಾಧ್ಯಾಯ ಹಾಗೂ ನಿವೃತ್ತ ಶಿಕ್ಷಕಿ ಕಾಮಾಕ್ಷಿ ಅವರ ಸೊಸೆ. ಬೆಂಗಳೂರಿನ ಇಸ್ರೋ ಸಂಸ್ಥೆಯ ನಿವೃತ್ತ ವಿಜ್ಞಾನಿ ನಾಗೇಶ್ ರಾವ್ ಹಾಗೂ ಆಲ್ ಇಂಡಿಯಾ ರೇಡಿಯೋ ವಿಜ್ಞಾನಿ ಸುಜಾತಾ ಅವರ ಪುತ್ರಿಯಾಗಿರುವ ಡಾ.ಶ್ರೀಲೇಖ ಕಾರಂತ ಅವರು ಬೆಂಗಳೂರಿನ ಎಂ.ಎಸ್.ರಾಮಯ್ಯ ವೈದ್ಯಕೀಯ ಕಾಲೇಜ್‌ನಲ್ಲಿ ಎಂ.ಡಿ ವಿದ್ಯಾಭ್ಯಾಸ ಪೂರೈಸಿದ್ದಾರೆ.

ಕೊಡಗು ಜಿಲ್ಲೆಯ ಐದು ಗ್ರಾಪಂಗಳು ಗಾಂಧಿ ಗ್ರಾಮ ರಾಜ್ಯ ಪುರಸ್ಕಾರಕ್ಕೆ ಆಯ್ಕೆ

ಮಡಿಕೇರಿ, ಮಾ.5– 2023–24ನೇ ಸಾಲಿನ ಗಾಂಧಿ ಗ್ರಾಮ ರಾಜ್ಯ ಪುರಸ್ಕಾರಕ್ಕೆ ರಾಜ್ಯದಲ್ಲೇ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಕೊಡಗು ಜಿಲ್ಲೆಯ 5 ಗ್ರಾಪಂಗಳು ಆಯ್ಕೆಯಾಗಿವೆ.

ಮಡಿಕೇರಿ ತಾಲೂಕಿನ ಹೊದ್ದೂರು ಗ್ರಾಪಂ ಸೋಮವಾರಪೇಟೆ ತಾಲೂಕಿನ ದುಂಡಳ್ಳಿ, ವಿರಾಜಪೇಟೆ ತಾಲೂಕಿನ ಹಾಲುಗುಂದ, ಪೊನ್ನಂಪೇಟೆ ತಾಲೂಕಿನ ಮಾಯಮುಡಿ ಹಾಗೂ ಕುಶಾಲನಗರ ತಾಲೂಕಿನ ನಂಜರಾಯಪಟ್ಟಣ ಗ್ರಾಪಂಗಳು ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ ಗಾಂಧಿ ಗ್ರಾಮ ಪುರಸ್ಕಾರವನ್ನು ಪಡೆದುಕೊಳ್ಳಲಿವೆ.

ಗ್ರಾಮ ಪಂಚಾಯಿತಿಗಳು ಸ್ಥಳೀಯ ಮಟ್ಟದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕೆಂಬ ಸದುದ್ದೇಶದಿಂದ ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿಗಳನ್ನು ಪ್ರೋತ್ಸಾಹಿಸಲು 2013–14ನೇ ಸಾಲಿನಿಂದ ಪ್ರತಿ ತಾಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಯನ್ನು ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಿ ರೂ.5 ಲಕ್ಷಗಳ ಪ್ರೋತ್ಸಾಹ ಧನ ನೀಡಿ ಗೌರವಿಸಲಾಗುತ್ತಿದೆ.

ಶ್ರೀಹರಿಕೋಟದ ಬಾಹ್ಯಾಕಾಶ ಕೇಂದ್ರಕ್ಕೆ ಕ್ಯಾಲ್ಸ್ ಶಾಲೆಯ ವಿದ್ಯಾರ್ಥಿಗಳು ಭೇಟಿ



ಆಂಧ್ರಪ್ರದೇಶದ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರಕ್ಕೆ ಕ್ಯಾಲ್ಸ್ ಶಾಲೆಯ ವಿದ್ಯಾರ್ಥಿಗಳು ಭೇಟಿ ನೀಡಿದ್ದರು.

ಗೋಣಿಕೊಪ್ಪ: ಆಂಧ್ರಪ್ರದೇಶದ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರಕ್ಕೆ ಗೋಣಿಕೊಪ್ಪ ಕ್ಯಾಲ್ಸ್ ಶಾಲೆಯ ವಿದ್ಯಾರ್ಥಿಗಳು ಭೇಟಿ ನೀಡಿದರು.

ವಿಸ್ತಾರ ಆವರಣ, ಗಗನಚುಂಬಿ ವೇದಿಕೆ ವೀಕ್ಷಣೆಗೆ ಅವಕಾಶ ನೀಡಲಾಯಿತು. ರಾಕೆಟ್ ಉಡಾವಣೆ ಮತ್ತು ನಿಖರತೆ ಅರ್ಥೈಸಿಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡಲಾಯಿತು.

ವಿಜ್ಞಾನಿಗಳೊಂದಿಗೆ ಸಂವಾದದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್‌ಡಿಎಸ್‌ಸಿ ತಂಡದ ಡಾ. ಶಂಕರನ್ ಸೂಕ್ತ ಮಾರ್ಗದರ್ಶನ ನೀಡಿದರು.

ವಾರಸುದಾರರಿಗೆ 1.58 ಕೋಟಿ ರೂ. ಮೌಲ್ಯದ ಸ್ವತ್ತುಗಳ ವಿತರಣೆ

88 ಪ್ರಕರಣಗಳು ಪತ್ತೆ, ಚಿನ್ನ, ಬೆಳ್ಳಿ, ವಾಹನ ಹಸ್ತಾಂತರ

ಚಾಮರಾಜನಗರ, ಮಾ.5– ಜಿಲ್ಲೆಯಲ್ಲಿ ಕಳೆದೊಂದು ವರ್ಷದಿಂದ ದಾಖಲಾಗಿದ್ದ ಕಳವು ಪ್ರಕರಣಗಳ ಸುಮಾರು ಪೈಕಿ 88 ಪ್ರಕರಣಗಳಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದ ಸುಮಾರು 1.58 ಕೋಟಿ ರೂ. ಮೌಲ್ಯದ ಸ್ವತ್ತುಗಳನ್ನು ವಾರಸುದಾರರಿಗೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಹಸ್ತಾಂತರಿಸಲಾಯಿತು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿರವರ ಕಚೇರಿಯ ಪಕ್ಕದಲ್ಲಿರುವ ಕವಾಯಿತು ಮೈದಾನದಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ನಡೆದ ಪ್ರಾಪರ್ಟಿ ರಿಟರ್ನ್ ಕಾರ್ಯಕ್ರಮದಲ್ಲಿ ವಾರಸುದಾರರಿಗೆ ಸ್ವತ್ತುಗಳನ್ನು ನೀಡಲಾಯಿತು. ಈ ವೇಳೆ ದಕ್ಷಿಣ ವಲಯ ಪೊಲೀಸ್ ಮಹಾ ನಿರ್ದೇಶಕ ಬೋರಲಿಂಗಯ್ಯ ಮಾತನಾಡಿ, ದುಷ್ಟಗಳಿಗೆ ಬಲಿಯಾಗಿರುವವರು, ಅತಿ ಆಸೆ ಹೊಂದಿರುವವರು, ಕಳ್ಳತನ ಮಾಡಲು ಮುಂದಾಗುತ್ತಾರೆ. ಜೊತೆಗೆ ಇದು ಗಡಿ ಜಿಲ್ಲೆ ಆಗಿರುವುದರಿಂದ ಹೊರರಾಜ್ಯದವರು ಬಂದು ಕಳ್ಳತನ ಮಾಡುತ್ತಾರೆ. ಆದ್ದರಿಂದ ಸಾರ್ವಜನಿಕರು ತಮ್ಮ ವಸ್ತುಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ಸಲಹೆ ನೀಡಿದರು.

ಮನೆ ಬೀಗ ಹಾಕಿಕೊಂಡು ಹೊರಗೆ ಹೋಗುವಾಗ ಜಾಗೃತಿ ವಹಿಸಬೇಕು. ಮನೆ ಮಕ್ಕಳ ಚಲನವಲನಗಳು ಮತ್ತು ಅವರ ವೆಚ್ಚದ ಬಗ್ಗೆ ಗಮನ ನೀಡಬೇಕು ಎಂದರು.

88 ಪ್ರಕರಣಗಳು ಪತ್ತೆ: 2024ರ ಜನವರಿಯಿಂದ 2025ರ ಫೆಬ್ರವರಿರವರೆಗೆ ಜಿಲ್ಲಾ ವ್ಯಾಪ್ತಿಯಲ್ಲಿ 88 ಪ್ರಕರಣಗಳನ್ನು ಪತ್ತೆ ಹಚ್ಚಿ ಒಟ್ಟು 1,56,92,636 ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದು ಶ್ಲಾಘನೀಯವಾಗಿದ್ದು, ಜಿಲ್ಲಾ ಪೊಲೀಸ್ ವತಿಯಿಂದ ಪತ್ತೆ ಪ್ರಕರಣಗಳಲ್ಲಿ ಭಾಗಿಯಾದ ಸಿಬ್ಬಂದಿಗೆ ನಗದು ಬಹುಮಾನ ನೀಡಲಾಗುತ್ತಿದ್ದು, ದಕ್ಷಿಣ ವಲಯ ಪೊಲೀಸ್ ವಿಭಾಗದಿಂದಲೂ ಒಂದೆರಡು ಪ್ರಕರಣಗಳಿಗೆ ನಗದು ಬಹುಮಾನ ನೀಡಲಾಗುವುದು ಎಂದರು.



ಪ್ರಾಪರ್ಟಿ ರಿಟರ್ನ್ ಕಾರ್ಯಕ್ರಮದಲ್ಲಿ ವಶಪಡಿಸಿಕೊಂಡ ಸ್ವತ್ತುಗಳನ್ನು ವೀಕ್ಷಿಸುತ್ತಿರುವ ಅಧಿಕಾರಿಗಳು.

ಜಿಲ್ಲೆಯಲ್ಲಿ ಶೇ.30ರಿಂದ 40ರಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಇದು ಅಭಿನಂದನೀಯ. ಮುಂದೆ ಪತ್ತೆಯಾಗದಿರುವ ಪ್ರಕರಣಗಳನ್ನು ಪತ್ತೆ ಹಚ್ಚಿ ಎಂದು ಸಿಬ್ಬಂದಿಗೆ ಹೇಳಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಅವರ ಮಾರ್ಗದರ್ಶನದಲ್ಲಿ ಜಿಲ್ಲಾ ವ್ಯಾಪ್ತಿಯ ವಿವಿಧ ಪೊಲೀಸ್ ಠಾಣಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಪ್ರಾಮಾಣಿಕ ಪ್ರಯತ್ನದಿಂದ 1.56 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಪ್ರಾಪರ್ಟಿ ರಿಟರ್ನ್ ಪೆರೇಡ್‌ನಲ್ಲಿ ಪ್ರದರ್ಶಿಸಿ ನಂತರ ವಾರಸುದಾರರಿಗೆ ಮರಳಿ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್‌ಪಿ ಲಕ್ಷ್ಮಯ್ಯ, ಧರ್ಮೇಂದ್ರ ಹಾಗೂ ವಿವಿಧ ಠಾಣೆಯ ಸಿಬ್ಬಂದಿ ವರ್ಗದವರು ಇದ್ದರು.

2 ಕೆಜಿ ಚಿನ್ನ, 4ಕೆಜಿ ಬೆಳ್ಳಿ, 28 ವಾಹನಗಳು ಹಸ್ತಾಂತರ: ಜಿಲ್ಲೆಯಲ್ಲಿ 2024ರ ಜನವರಿಯಿಂದ 2025ರ ಫೆಬ್ರವರಿವರೆಗೆ ವರದಿಯಾದ 40 ಪ್ರಕರಣಗಳಿಗೆ ಸಂಬಂಧಿಸಿದ 96,56,616 ಮೊತ್ತದ 2.25ಕೆಜಿ ಚಿನ್ನಾಭರಣ, 5,77,300 ಮೊತ್ತದ 4.390ಕೆಜಿ ಬೆಳ್ಳಿ ವಸ್ತುಗಳು, 28 ಪ್ರಕರಣಗಳಿಗೆ ಸಂಬಂಧಿಸಿದ 9,61,000 ಮೊತ್ತದ 28 ಮೋಟಾರ್ ಸೈಕಲ್‌ಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಉಳಿದಂತೆ 4 ಪ್ರಕರಣಗಳಿಗೆ ಸಂಬಂಧಿಸಿದ 5,20,000 ಮೊತ್ತದ 4 ಮೋಟಾರ್ ವಾಹನಗಳು, 5 ಪ್ರಕರಣಗಳಿಗೆ ಸಂಬಂಧಿಸಿದ 23,35,000 ಮೊತ್ತದ 5 ಮೋಟಾರ್ ವಾಹನಗಳು, 3 ಪ್ರಕರಣಗಳಿಗೆ ಸಂಬಂಧಿಸಿದ 4,47,770 ಮೊತ್ತದ ನಗದು ಹಣ, 8 ಪ್ರಕರಣಗಳಿಗೆ ಸಂಬಂಧಿಸಿದ 11,94,950 ಮೊತ್ತದ ಇತರೆ ವಸ್ತುಗಳನ್ನು ಸಂಬಂಧಪಟ್ಟವರಿಗೆ ನೀಡಲಾಯಿತು. 88 ಪ್ರಕರಣಗಳ ಪೈಕಿ ಚಾಮರಾಜನಗರ ಉಪವಿಭಾಗದಲ್ಲಿ 50 ಹಾಗೂ ಕೊಳ್ಳೇಗಾಲ ಉಪವಿಭಾಗದಲ್ಲಿ 38 ಪ್ರಕರಣ ದಾಖಲಾಗಿತ್ತು. ಚಾಮರಾಜನಗರ ಉಪವಿಭಾಗದಲ್ಲಿ 81,31,817 ರೂ. ಹಾಗೂ ಕೊಳ್ಳೇಗಾಲ ಉಪವಿಭಾಗದಲ್ಲಿ 75,60,819 ರೂ.ಗಳ ಮೌಲ್ಯದ ವಸ್ತುಗಳನ್ನು ಹಸ್ತಾಂತರ ಮಾಡಲಾಗಿದೆ.

ಕಾಡಾನೆ ದಾಳಿಯಿಂದ ಆದಿವಾಸಿ ಬಲಿ



ಗುಂಡ್ಲುಪೇಟೆ ತಾಲೂಕಿನ ಆಡಿನಕಣಿವೆ ಹಾಡಿಯಲ್ಲಿ ಕಾಡಾನೆ ದಾಳಿಯಿಂದ ಸಾವಿಗೀಡಾಗ ಕರಿಯನ್ ಕಳೇಬರವನ್ನು ಅರಣ್ಯಾಧಿಕಾರಿಗಳು ಪರಿಶೀಲಿಸಿದರು.

ಗುಂಡ್ಲುಪೇಟೆ: ಕಾಡಾನೆ ದಾಳಿಗೆ ಆದಿವಾಸಿಯೊಬ್ಬ ಬಲಿಯಾಗಿರುವ ಘಟನೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದಕೆರೆ ವಲಯದ ಆಡಿನಕಣಿವೆ ಸಮೀಪದಲ್ಲಿ ನಡೆದಿದೆ.

ತಮಿಳುನಾಡು ಮೂಲದ ಕರಿಯನ್(46) ಸಾವಿಗೀಡಾದ ಆದಿವಾಸಿ. ತಮಿಳುನಾಡಿನ ನೀಲಗಿರಿ ಮೂಲದ ಕರಿಯನ್ ಕಳೆದ ವರ್ಷದಿಂದ ಆಡಿನಕಣಿವೆ ಹಾಡಿಯಲ್ಲಿ ನೆಲೆಸಿದ್ದ. ಮಂಗಲಕ್ಕೆ ಹೋಗಿದ್ದ ಕರಿಯನ್ ಕಳೆದ ರಾತ್ರಿ ತನ್ನ ಇಬ್ಬರು ಸ್ನೇಹಿತರೊಂದಿಗೆ ಮನೆಗೆ ಹಿಂದಿರುಗುವಾಗ ದಾರಿಯಲ್ಲಿ ಎದುರಾದ ಆನೆ, ಏಕಾಏಕಿ ದಾಳಿ ನಡೆಸಿದೆ. ಜತೆಗಿದ್ದ ಇಬ್ಬರು ಓಡಿಹೋಗಿ ಪಾರಾದರೆ, ನೇರವಾಗಿ ದಾಳಿಗೆ ಸಿಲುಕಿದ ಕರಿಯನ್‌ನನ್ನು ಆನೆ ಸೊಂಡಿಲಿನಿಂದ ಎತ್ತಿ ಬೀಸಾಡಿದೆ. ಇದರಿಂದಾಗಿ ಈತ ಸ್ಥಳದಲ್ಲಿಯೇ ಸಾವಿಗೀಡಾಗಿದ್ದಾನೆ ಎನ್ನಲಾಗಿದೆ. ಕಾಡಾನೆ ದಾಳಿ ಮಾಡಿರುವ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಬುಧವಾರ ಬೆಳಗ್ಗೆ ಕುಂದಕೆರೆ ವಲಯದ ಪ್ರಭಾರ ಆರ್‌ಎಫ್‌ಒ ವೈರಮುಡಿ ಹಾಗೂ ಸಿಬ್ಬಂದಿ ತೆರಳಿ ಪರಿಶೀಲಿಸಿದ ನಂತರ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಹುಲಿ ಯೋಜನೆಯ ನಿರ್ದೇಶಕ ಪ್ರಭಾಕರನ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎನ್.ಪಿ.ನವೀನ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು. ಮೃತ ಕರಿಯನ್ ಸಂಬಂಧಿಕರು ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದು ಕಳೇಬರವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತಂದು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರ ವಶಕ್ಕೆ ನೀಡಲಾಯಿತು.

ಡಿಬಿಟಿ ಹಣದ ಬದಲಾಗಿ ಅಕ್ಕಿ ವಿತರಣೆ

ಚಾಮರಾಜನಗರ, ಮಾ.5– ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ 5 ಕೆಜಿ ಅಕ್ಕಿಯ ಬದಲಾಗಿ ನೀಡಲಾಗುತ್ತಿದ್ದ ಹಣದ ಬದಲು ಫೆಬ್ರವರಿ ಮಾಹೆಯಿಂದಲೇ ಅನ್ವಯವಾಗುವಂತೆ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ ಎಂದು ಆಹಾರ ಇಲಾಖೆ ತಿಳಿಸಿದೆ.

ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ 5 ಕೆಜಿಯ ಅಕ್ಕಿ ಬದಲಾಗಿ ಪ್ರತಿ ಕೆಜಿಗೆ 34 ರೂ.ನಂತೆ ಪ್ರತಿ ಸದಸ್ಯರಿಗೆ 170 ರೂ.ಗಳನ್ನು 2023ರ ಜುಲೈ ಮಾಹೆಯಿಂದ ಜನವರಿ 2025ರ ಮಾಹೆವರೆಗೆ ಪ್ರತಿ ತಿಂಗಳು ಡಿಬಿಟಿ ಮೂಲಕ ಹಣ ಜಮೆ ಮಾಡಲಾಗುತ್ತಿತ್ತು. ಪ್ರಸ್ತುತ ಫೆಬ್ರವರಿ 2025ರ ಮಾಹೆಯಿಂದಲೇ ಡಿಬಿಟಿ ಹಣದ ಬದಲಾಗಿ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ.

ಮಾರ್ಚ್ 2025ರ ಮಾಹೆಯಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿಯಲ್ಲಿ ಪ್ರತಿ ಸದಸ್ಯರಿಗೆ 5 ಕೆಜಿ ಅಕ್ಕಿಯ ಜೊತೆಗೆ ಅನ್ನಭಾಗ್ಯ ಯೋಜನೆಯ 5 ಕೆಜಿ ಅಕ್ಕಿ ಸೇರಿ ಒಟ್ಟು 10 ಕೆಜಿ ಅಕ್ಕಿಯನ್ನು ಪ್ರತಿ ಸದಸ್ಯರಿಗೆ ವಿತರಿಸಲಾಗುತ್ತದೆ.

ಫೆಬ್ರವರಿ ಮತ್ತು ಮಾರ್ಚ್ ಮಾಹೆ ಸೇರಿ ಮಾರ್ಚ್ ತಿಂಗಳಿನಲ್ಲಿ ಅಂತ್ಯೋದಯ ಪಡಿತರ ಚೀಟಿದಾರರ ಒಂದರಿಂದ ಮೂವರು ಸದಸ್ಯರಿರುವ ಕುಟುಂಬಕ್ಕೆ 35 ಕೆಜಿ ಅಕ್ಕಿ, ನಾಲ್ಕು ಸದಸ್ಯರ ಕುಟುಂಬಕ್ಕೆ 45 ಕೆಜಿ, ಐವರು ಸದಸ್ಯರ ಕುಟುಂಬಕ್ಕೆ 65 ಕೆಜಿ, ಆರು ಸದಸ್ಯರ ಕುಟುಂಬಕ್ಕೆ 85 ಕೆಜಿ, ಏಳು ಸದಸ್ಯರ ಕುಟುಂಬಕ್ಕೆ 105 ಕೆಜಿ, ಎಂಟು ಸದಸ್ಯರ ಕುಟುಂಬಕ್ಕೆ 125 ಕೆಜಿ, ಒಂಭತ್ತು ಸದಸ್ಯರ ಕುಟುಂಬಕ್ಕೆ 145 ಕೆಜಿ, 10 ಸದಸ್ಯರ ಕುಟುಂಬಕ್ಕೆ 165 ಕೆಜಿ ಅಕ್ಕಿ ವಿತರಣೆ ಮಾಡಲಾಗುತ್ತದೆ.

ಫೆಬ್ರವರಿ ಮತ್ತು ಮಾರ್ಚ್ ಮಾಹೆ ಸೇರಿ ಮಾರ್ಚ್ ತಿಂಗಳಿನಲ್ಲಿ ಬಿಪಿಎಲ್ ಪಡಿತರ ಚೀಟಿದಾರರ ಕುಟುಂಬಕ್ಕೆ ಓರ್ವ ಸದಸ್ಯರಿಗೆ 15 ಕೆಜಿ ಅಕ್ಕಿ, ಇಬ್ಬರು ಸದಸ್ಯರ ಕುಟುಂಬಕ್ಕೆ 30 ಕೆಜಿ, ಮೂವರು ಸದಸ್ಯರ ಕುಟುಂಬಕ್ಕೆ 45 ಕೆಜಿ, ನಾಲ್ಕು ಸದಸ್ಯರ ಕುಟುಂಬಕ್ಕೆ 60 ಕೆಜಿ, ಐದು ಸದಸ್ಯರ ಕುಟುಂಬಕ್ಕೆ 75 ಕೆಜಿ, ಆರು ಸದಸ್ಯರ ಕುಟುಂಬಕ್ಕೆ 90 ಕೆಜಿ, ಏಳು ಸದಸ್ಯರ ಕುಟುಂಬಕ್ಕೆ 105 ಕೆಜಿ, ಎಂಟು ಸದಸ್ಯರ ಕುಟುಂಬಕ್ಕೆ 120 ಕೆಜಿ, ಒಂಭತ್ತು ಸದಸ್ಯರ ಕುಟುಂಬಕ್ಕೆ 135 ಕೆಜಿ ಹಾಗೂ 10 ಸದಸ್ಯರ ಕುಟುಂಬಕ್ಕೆ 150 ಕೆಜಿ ಅಕ್ಕಿ ವಿತರಣೆ ಮಾಡಲಾಗುತ್ತದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಗುಂಡಾಲ್ ಜಲಾಶಯದ ಹಳೇ ಸ್ಥಿರ ಅಚ್ಚುಕಟ್ಟು ವ್ಯಾಪ್ತಿಯ ರೈತರ ಹಿತರಕ್ಷಣಾ ಸಂಘದ ವತಿಯಿಂದ ಪ್ರತಿಭಟನೆ ನಡೆಯಿತು.

ಚಾಮರಾಜನಗರ, ಮಾ.5– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಕೊಳ್ಳೇಗಾಲ ತಾಲೂಕು ಗುಂಡಾಲ್ ಜಲಾಶಯದ ಹಳೇ ಸ್ಥಿರ ಅಚ್ಚುಕಟ್ಟು ವ್ಯಾಪ್ತಿಯ ರೈತರ ಹಿತರಕ್ಷಣಾ ಸಂಘದ ವತಿಯಿಂದ ಪ್ರತಿಭಟನೆ ನಡೆಯಿತು.

ಕೊಳ್ಳೇಗಾಲದಿಂದ ಪಾದಯಾತ್ರೆ ಮೂಲಕ ನಗರಕ್ಕೆ ಆಗಮಿಸಿದ ಪ್ರತಿಭಟನಾಕಾರರು ಮೊದಲಿಗೆ ಶ್ರೀಚಾಮರಾಜೇಶ್ವರ ದೇವಸ್ಥಾನದ ಬಳಿ ಸಮಾವೇಶಗೊಂಡರು. ನಂತರ ಅಲ್ಲಿಂದ ಭುವನೇಶ್ವರಿ ವೃತ್ತ, ಬಿ. ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ಇದೇ ವೇಳೆ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೊಳ್ಳೇಗಾಲ ತಾಲೂಕಿನ ಟಗರಪುರ ಗ್ರಾಮದಿಂದ ಗೋಪಿನಾಥವರೆಗೆ ಹಕ್ಕು ಪತ್ರ ನೀಡಿ, ಇ–ಸ್ವತ್ತು ಮಾಡಬೇಕು. ಸರ್ಕಾರಿ ಆಸ್ತಿಗಳಿಗೆ ಮೂಲ ದಾಖಲಾತಿಗಳನ್ನು ಆಧರಿಸಿ ಯಥಾವತ್ತಾಗಿ ಇ–ಸ್ವತ್ತು ಮಾಡಬೇಕು. ಸರ್ಕಾರಿ ಆಸ್ತಿಗಳನ್ನು ಅತಿಕ್ರಮಣ ಮಾಡಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ನೀರಾವರಿ ಕೆರೆಗಳಿಗೆ ನಗರಸಭೆಯಿಂದ ಅಕ್ರಮವಾಗಿ ಯುಜಿಡಿ ಪೈಪ್‌ಗಳನ್ನು ಅಳವಡಿಕೆ ಮಾಡಿರುವುದನ್ನು ಕೂಡಲೇ ತೆರವು ಮಾಡಬೇಕು ಎಂದು ಆಗ್ರಹಿಸಿದರು.

ನಂತರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ದಶರಥ, ಕಾರ್ಯದರ್ಶಿ ರಾಮಕೃಷ್ಣ, ರೈತ ಹೋರಾಟ ಸಂಚಾಲಕ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಕೊಳ್ಳೇಗಾಲ ನಗರಸಭೆ ಸದಸ್ಯರಾದ ಜಯಮರಿ, ಮುಖಂಡರಾದ ಚಾಮರಾಜು, ಚಿನ್ನಸ್ವಾಮಿ ಮಾಳಿಗೆ, ಮೋಳೆ ರಾಜಣ್ಣ, ಲಕ್ಷ್ಮಣ ಮೂರ್ತಿ, ವಾಸು, ವೀರಭದ್ರಸ್ವಾಮಿ ಸರಗೂರು, ನಿಂಗರಾಜು, ಮಹೇಶ್, ಮಲ್ಲಣ್ಣ, ಸೋಮಣ್ಣ, ಸಿ.ಎಂ. ಕೃಷ್ಣಮೂರ್ತಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಇಂದು ಜಿಲ್ಲಾ ಅಭಿವೃದ್ಧಿ ಸಮನ್ವಯ, ಉಸ್ತುವಾರಿ ಸಮಿತಿ ಪರಿಶೀಲನಾ ಸಭೆ

ಚಾಮರಾಜನಗರ, ಮಾ.5– ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯನ್ನು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರ ಅಧ್ಯಕ್ಷತೆಯಲ್ಲಿ ಮಾ.6 ರಂದು ಮಧ್ಯಾಹ್ನ 1 ಗಂಟೆಗೆ ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ



ಯಳಂದೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೊಳ್ಳೇಗಾಲ ತಾಲೂಕು ಗುಂಡಾಲ್ ಜಲಾಶಯದ ಹಳೆ ಸ್ಥಿರ ಅಚ್ಚುಕಟ್ಟು ವ್ಯಾಪ್ತಿಯ ರೈತರ ಹಿತರಕ್ಷಣಾ ಸಂಘದ ಸದಸ್ಯರು ಕೈಗೊಂಡಿರುವ ಪಾದಯಾತ್ರೆ ಮಂಗಳವಾರ ಮಧ್ಯಾಹ್ನ ಪಟ್ಟಣ ತಲುಪಿತು.

ಪಟ್ಟಣದ ಎಸ್‌ಬಿಐ ವೃತ್ತದಲ್ಲಿ ಜಮಾವಣೆಗೊಂಡ ರೈತರು ರಾಜ್ಯ ಸರ್ಕಾರದ ವಿರುದ್ಧ, ಜಿಲ್ಲಾಡಳಿತದ ವಿರುದ್ಧ ಧಿಕ್ಕಾರಗಳನ್ನು ಕೂಗಿ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರೈತ ಹಾಗೂ ಹಸಿರುಸೇನೆ ಏಕೀಕರಣದ ಜಿಲ್ಲಾಧ್ಯಕ್ಷ ಗೌಡಹಳ್ಳಿ ಸೋಮಣ್ಣ ಮಾತನಾಡಿ, ಸರ್ಕಾರಿ ಆಸ್ತಿಗಳನ್ನು ಒತ್ತುವರಿ ಮಾಡಲಾಗಿದೆ. ಸಾವಿರಾರು ಎಕರೆ ಭೂಮಿ ಒತ್ತುವರಿಯಾಗಿದ್ದರೂ ಈ ಸಮಸ್ಯೆಯನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಪರಿಹರಿಸಿಲ್ಲ. ಇಂತಹ ಆರ್‌ಟಿಸಿ ದಾಖಲಾತಿಗಳನ್ನು ವಜಾಗೊಳಿಸಬೇಕು, ಸರ್ಕಾರಿ ಆಸ್ತಿಗಳನ್ನು ಮೂಲ ದಾಖಲಾತಿಯಂತೆ ಇ–ಸ್ವತ್ತು ಮಾಡಬೇಕು, ಕೊಳ್ಳೇಗಾಲ ತಾಲೂಕು ಟಗರಪುರ ಗ್ರಾಮದಿಂದ ಹನೂರಿನ ಗೋಪಿನಾಥಂವರೆಗಿನ ರೈತರ ಜಮೀನುಗಳಿಗೆ ಹಕ್ಕುಪತ್ರ ನೀಡಿ ಇ–ಸ್ವತ್ತನ್ನು ಮಾಡಿಕೊಡಬೇಕು. ರಾಜ್ಯ ಸರ್ಕಾರ ಶಿಕ್ಷಣಕ್ಕೆ ಒತ್ತು ನೀಡುತ್ತಿಲ್ಲ. ರಾಜ್ಯದ ರೈತರ ಹಿತದೃಷ್ಟಿಯಿಂದ ಸರ್ಕಾರ ಕೆಲಸ ಮಾಡುತ್ತಿಲ್ಲ. ತಮ್ಮ ಖಜಾನೆಯನ್ನು ತುಂಬಿಸಿಕೊಳ್ಳಲು ಜನರನ್ನು ಮದ್ಯದ ದಾಸರಾಗಿ ಮಾಡಲು ಹೊರಟಿದೆ. ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಸರ್ಕಾರ ಕಡೆಗಣಿಸಿದೆ. ಜಿಲ್ಲೆಗೆ ಹೊಸ ನೀರಾವರಿ ಯೋಜನೆಯನ್ನು ತಂದು ಇಲ್ಲಿನ ರೈತರ ಹಿತ ಕಾಪಾಡಬೇಕು. ಜಿಲ್ಲೆಯ ವಿವಿಯನ್ನು ವಜಾಗೊಳಿಸುವ ನಿರ್ಣಯವನ್ನು ಕೈಬಿಡಬೇಕು ಎಂದು ಆಗ್ರಹಿಸಿ ಕೊಳ್ಳೇಗಾಲದಿಂದ ಚಾಮರಾಜನಗರಕ್ಕೆ ಪಾದಯಾತ್ರೆ ಮಾಡಲಾಗುತ್ತಿದ್ದು ಮಂಗಳವಾರ ಸಂಜೆ ಇದು ಸಂತೆಮರಹಳ್ಳಿಯಲ್ಲಿ ಪಾದಯಾತ್ರೆ ಮುಗಿಸಿ ಮತ್ತೆ ಚಾಮರಾಜನಗರಕ್ಕೆ ತಲುಪಿ ಜಿಲ್ಲಾಡಳಿತದ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಆಲ್ಕೆರೆ ಅಗ್ರಹಾರ ನಾಗರಾಜು, ಹಿರಿಯ ಹೋರಾಟಗಾರ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಸೋಮಣ್ಣ, ದಶರಥ, ರಾಮಕೃಷ್ಣ, ವೀರಭದ್ರಸ್ವಾಮಿ ಹಲವರು ಇದ್ದರು.

ನಾಳೆ ಬೆಂಗಳೂರಿಗೆ ಅಮಿತ್ ಶಾ ಭೇಟಿ



ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾ.7 ರಂದು ಆಸ್ಪತ್ರೆ ಉದ್ಘಾಟನೆಗಾಗಿ ಬೆಂಗಳೂರಿಗೆ ಆಗಮಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಬುಧವಾರ ತಿಳಿಸಿದ್ದಾರೆ.

ಅಮಿತ್ ಶಾ ಅವರು ಅಂದು ತಮಿಳುನಾಡಿನಿಂದ ಬೆಂಗಳೂರಿಗೆ ಬರುತ್ತಿದ್ದಾರೆ. ಅವರು ನೆಲಮಂಗಲದಲ್ಲಿ ವಿಶ್ವತೀರ್ಥ ಮಹಾಸ್ವಾಮಿಗಳು ಸ್ಥಾಪಿಸಿದ ಆಸ್ಪತ್ರೆಯನ್ನು ಉದ್ಘಾಟಿಸಲಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ಇದೇ ವೇಳೆ ಅಮಿತ್ ಶಾ ಅವರು ಯಾವುದೇ ರಾಜಕೀಯ ಕಾರ್ಯಕ್ರಮಕ್ಕಾಗಿ ಇಲ್ಲಿಗೆ ಬರುತ್ತಿಲ್ಲ ಎಂದು ವಿಜಯೇಂದ್ರ ಅವರು ಸ್ಪಷ್ಟಪಡಿಸಿದ್ದಾರೆ.

ಹಾಸನ, ಮಂಡ್ಯ, ಚಾ.ನಗರ ವಿವಿಗಳ ಮುಚ್ಚಬೇಡಿ

ಎಂಎಲ್‌ಸಿ ಕೆ.ವಿವೇಕಾನಂದರಿಂದ ಉನ್ನತ ಶಿಕ್ಷಣ ಸಚಿವರಿಗೆ ಮನವಿ

ಮೈಸೂರು,ಮಾ.5(ಪಿಎಂ)– ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ಹಾಸನ, ಮಂಡ್ಯ ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯಗಳನ್ನು ಮುಚ್ಚುವ ಪ್ರಸ್ತಾವನೆ ಕೈಬಿಡುವಂತೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರಿಗೆ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮನವಿ ಸಲ್ಲಿಸಿದರು.

ಸದರಿ ವಿವಿಗಳನ್ನು ಕೆಲ ವಿವಿಗಳ ಜೊತೆ ಒಗ್ಗೂಡಿಸಿ ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದಿರುವುದು ತಿಳಿದು ಬಂದಿದೆ. ನಾನು ಪ್ರತಿನಿಧಿಸಿರುವ ಕ್ಷೇತ್ರದ ವ್ಯಾಪ್ತಿಗೆ ಬರುವ ಈ ಮೂರು ವಿವಿಗಳು ಬಡವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುತ್ತಿವೆ. ಆದ್ದರಿಂದ ಸದರಿ ವಿವಿಗಳನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಬೇಕೆಂದು ಸಚಿವರಿಗೆ ಮನವಿ ಸಲ್ಲಿಸಿದರು.



ಸಚಿವರಿಗೆ ಎಂಎಲ್‌ಸಿ ವಿವೇಕಾನಂದ ಅವರು ಮನವಿ ಸಲ್ಲಿಸಿದ ಸಂದರ್ಭ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮಾಲ್‌ನ ಐಸ್‌ಕ್ರೀಮ್ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
8317386649

WANTED
Office sales executive for housing loan with knowing computer skills. Age between 23 to 30 yearss
9986144999

ನಿವೇಶನ ಮಾರಾಟಕ್ಕಿದೆ
40x60 ಪೂರ್ವ ದಿಕ್ಕಿನ ಮುಡಾ ಅನುಮೋದಿತ ಹುಲಗಾದ್ರಿ ಬಡಾವಣೆ ರಾಷ್ಟ್ರೋತ್ಥಾನ ಶಾಲೆ ಹತ್ತಿರ ದಡದಹಳ್ಳಿ
8660726140

ಇಬ್ಬರು ಅರ್ಚಕರುಗಳು ಬೇಕಾಗಿದ್ದಾರೆ
ಸಂಪರ್ಕಿಸಬೇಕಾದ ವಿಳಾಸ: ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ ಎಸ್.ಜಿ.ಡಿ.ಎಂ ಟ್ರಸ್ಟ್, ಚಾಮುಂಡಿವನಂ, ವಿದ್ಯಾರಣ್ಯಪುರಂ, ಮೈಸೂರು–570008.
9448053321

SK CONSTRUCTION
ನಿಮ್ಮ ಕನಸಿನ ಮನೆಗೆ Plan Working Plan, 3D ಎಲಿವೇಶನ್ Approval Plan ಇಂಟೀರಿಯರ್ ಪ್ಲಾನ್ ಮತ್ತು ಅತಿ ಉತ್ತಮ ಗುಣಮಟ್ಟದಲ್ಲಿ Construction ಸಹಿತ ಮಾಡಿಕೊಡುತ್ತೇವೆ.
9620528490

REQUIRED IMMEDIATELY
SALESMEN DRIVERS (MYSORE TO BANGALORE)
9141835175
6366610175
careersmysuru@gmail.com
Ilwala, Near Belawadi Chk Pt, Mysore

Solar Water Heaters built for Modern Living
20 ವರ್ಷಗಳ ವ್ಯಾರಂಟಿ
Jupiter Solar Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

FOR RENT
OFFICE SPACE FOR RENT 455 sq.ft First Floor at Jayanagar, 2nd Main Road, Mysuru
Call: 8310484933

WANTED BRIDE
Name: Sudhakar. S
Gothra: Kaushika
DOB: 07-10-1993
Madhwa Brahmin
B.Sc., Job: Accenture
Father: R. Sheshagiri. Mother: L. Geetha
9481287343, 9886324467

ಸೈಟು ಮಾರಾಟಕ್ಕಿದೆ
40x20 W/F 2ನೇ ಹಂತ ಶ್ರೀರಾಂಪುರ, ಮೈಸೂರು ಚದರ 5,600/–
9342288281

ಮನೆ ಮಾರಾಟಕ್ಕಿದೆ
56 ಲಕ್ಷ ದಟ್ಟಗಳ್ಳಿ 40x60 ಸೈಟು 40ft ರಸ್ತೆ, Opp ಪಾರ್ಕ್ ಹೊಸ ಆರ್.ಟಿ.ನಗರದ ಹತ್ತಿರ, ಸಂಪರ್ಕಿಸಿ:
9945042875

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute, ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಸುವರ್ಣ ಯಾತ್ರಾ
9 ದಿನಗಳ ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 15/3/25. 8 ದಿನಗಳ ಗುಜರಾತ್ ಪ್ರವಾಸ 4/4/25. 3 ದಿನಗಳ ಶಿರಡಿ ಪ್ರವಾಸ 3 ಜ್ಯೋತಿರ್ಲಿಂಗಗಳೊಂದಿಗೆ 7/3/2025. 4 ದಿನಗಳ ಮಧ್ಯಪ್ರದೇಶ್ ಪ್ರವಾಸ 2 ಜ್ಯೋತಿರ್ಲಿಂಗಗಳೊಂದಿಗೆ 16/4/2025. 14 ದಿನಗಳ ಚಾರ್‌ಧಾಮ್ ಪ್ರವಾಸ 2/5/2025.
9008381022 / 9019462508

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೋಳು ತಲೆಯ ಸಮಸ್ಯೆಯೇ?
ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಳಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 BANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಸೈಟುಗಳು ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರೋಡ್ ಮತ್ತು ಶ್ರೀನಗರ ಹಿಂಭಾಗ, ಮೈಸೂರು.
Mob: 8050345574

SITE FOR SALE
40X60 KUVEMPUNAGAR E/F (OLD HOUSE) VIJAYANAGAR 3RD STAGE N/F
9900518089

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ–ಜಯಲಕ್ಷ್ಮೀಪುರಂದಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ನುರಿತ ಅನುಭವವುಳ್ಳ ದೋಸಾ ಚೆಫ್ (ಭಟ್ರು) ಮತ್ತು ಸೌತ್ ವೆಜ್ ಅಡುಗೆ ಭಟ್ರು ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ಸೌಲಭ್ಯ ಇದೆ.
9019916266

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ARAS CONSTRUCTIONS Trusted Mark
CIVIL ENGINEERS • BUILDERS
PREMIUM HOME CONSTRUCTIONS
2100Rs./sqft Including below items
9538003006 • 0821-4525966
COMMERCIAL CONSTRUCTIONS FROM 1800/SQFT
arasinfo27@gmail.com • www.arasconstructions.net
#156, 1ST FLOOR, 80 FT ROAD, R.R. NAGAR, MYSURU.

SUN STAR Solar Heatings & Solar Lightings
ISO 9001
10 YEARS WARRANTY
SUNSTAR SOLAR SYSTEM SALES & SERVICE
9900609977, 9972036774, 9916457118

ಸೈಟು ಮಾರಾಟಕ್ಕಿದೆ
40x60, 3 ಬಿಹೆಚ್‌ಕೆ, ಪೂರ್ವ ದಿಕ್ಕು, ಪಾರ್ಕ್ ಎದುರು, 80 ಅಡಿ ರಸ್ತೆ, ಲಾಲ್‌ಬಹದ್ದೂರ್ ಶಾಸ್ತ್ರಿ ನಗರ, ಮೈಸೂರು. ಸಂಪರ್ಕಿಸಿ:
Mob: 9448601655

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಕಾರು ಚಾಲಕ ಬೇಕಾಗಿದ್ದಾರೆ
ಲೈಸೆನ್ಸ್ (ಪರವಾಗಿ) ಹೊಂದಿರುವ 30 ರಿಂದ 50 ವರ್ಷ ವಯಸ್ಸಿನ ಬೆಂಗಳೂರಿನಲ್ಲಿ ವಾಹನ ಚಾಲನೆ ಮಾಡಿರುವ ಹಾಗೂ ಕನಿಷ್ಠ 5 ವರ್ಷ ಅನುಭವವುಳ್ಳ ಕಾರು ಚಾಲಕ ಬೇಕಾಗಿದ್ದಾರೆ. ಸಂಬಳವನ್ನು ಅರ್ಹತೆ ಹಾಗೂ ಅನುಭವದ ಆಧಾರದ ಮೇಲೆ ನಿಗದಿ ಪಡಿಸಲಾಗುತ್ತದೆ. ಆಸಕ್ತರು ದೂರವಾಣಿ ಅಥವಾ ಮೊಬೈಲ್ ಸಂಖ್ಯೆಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ:10–03–2025
E-mail id: springsbil@gmail.com
9148998772/0821-2514256

ಬೇಕಾಗಿದ್ದಾರೆ
ಫರ್ನಿಚರ್ಸ್ ಫ್ಯಾಕ್ಟರಿ ಹಾಗೂ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. 21 ವರ್ಷ ಮೇಲ್ಪಟ್ಟವರಿಗೆ ಆದ್ಯತೆ
9902435523

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ Rs. 7,900 (24 CT)
Mob: 9108146123

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

House For Sale
20/30 Duplex MUDA Allotment 3 BHK East Face Near Jss layout 2nd Stage
More Details Contact
9380284276

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ ವಾಟ್ಸಾಪ್ ಟೈಪಿಂಗ್ ಮತ್ತು ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 20000 ದಿಂದ 30000ವರೆಗೆ ಕರೆಮಾಡಿ (ದಿವ್ಯ)
9632583367

WANTED
Furnishing shop Accounts ಕೆಲಸಕ್ಕೆ 1 year experience, ಇರುವವರು ಮಹಿಳೆಯರು ಬೇಕಾಗಿದ್ದಾರೆ. Salary: 12K to 15K. Time: 10 am to 7 pm. Akbar Road, Near Ashoka Road, Mysore.
9916514950

FOR RENT
Suitable for Office or Gowdown 1000 Sqft in Geetha Road Chamaraja Puram
8095308444

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45 ಸಂಬಳ: ESI PF ಕಳೆದು 17000 ಸಿಗುತ್ತದೆ. Week Off ಹಾಗೂ Shift ಗಳು ಇರುತ್ತದೆ. ಆಸಕ್ತಿಯುಳ್ಳವರು ಬೆಳಿಗ್ಗೆ 9 ಗಂಟೆಗೆ ಬಂದು ಸಂಪರ್ಕಿಸಿ ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ಮೈಸೂರು
9986874574

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 23,750/–
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007
98802 02926

ಬೇಕಾಗಿದ್ದಾರೆ
ಬೆಂಗಳೂರಿನಲ್ಲ ಕೆಲಸ ಮಾಡಲು ಸಿವಿಲ್ ಇಂಜಿನಿಯರ್, ಕಾರ್ ಡ್ರೈವರ್, ಅಡಿಗೆ ಕೆಲಸದವರು ಮತ್ತು ಮನೆ ಕೆಲಸದವರು ಬೇಕಾಗಿದ್ದಾರೆ ಊಟ & ವಸತಿ ಉಚಿತ
ಸಂಪರ್ಕಿಸಿ: 89515 17993

DOCUMENT LOST
I, M.R. Veena, #178, Near Water Tank, Vijayanagar 2nd Stage, Vani Vilasa Layout, Mysore-570 016, have lost title deed. Document No. / Identification: 549/08-09. Finders please contact:
9980696952

COMMERCIAL PROPERTY FOR RENT
@ B.N. Street, Mandi Mohalla, Mysore. Ground and first floor. 14x34 each 476 sq.ft.
9880268295, 9740126295, 7204772274

CHANGE OF NAME
Mohmmed Umer Khan, S/o H. Zaheer Khan, R/a #267, 3rd Stage, Kesare Layout, N.R. Mohalla, Mysore I have changed my name as Mohammed Umer Khan in front of Notary Asadulla Khan vide affidavit dated 4-3-2025 on my own free will, henceforth I will be known, called and recognised as MOhammed Umer Khan.
Sd/- Mohammed Umer Khan

SITE FOR SALE
(30X40) OLIVE ENCLAVE (NEAR MANUGANAHALLY MYSORE-HUNSUR HIGHWAY 8 KM FROM RING ROAD DTCP APPROVED 15 LAKHS
95388-39926

20x30 SITE FOR SALE
9471 S/F E ಖಾತಾ ಆಗಿರುವ ವಿಜಯನಗರ 4ನೇ ಹಂತ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9731000761

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡುಗಳು
1) ಹುಣಸೂರು,
(2) ವಿಜಯನಗರ 2ನೇ ಹಂತ,
3) ಗುಂಡ್ಲುಪೇಟೆ.
9686422400 | 9686566261

ಬೇಕಾಗಿದ್ದಾರೆ
ಮೇಟಗಳ್ಳಿ CIPET ಕಾಲೇಜು ಹತ್ತಿರವಿರುವ ಅನಿಮಲ್ ಫೀಡ್ ಕಂಪನಿಗೆ ಲೋಡಿಂಗ್, ಪ್ಯಾಕಿಂಗ್, ಪೌಡರಿಂಗ್ ಇತ್ಯಾದಿ ಕೆಲಸ ಮಾಡಲು 18 - 45 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ಸಂಬಳ: 19,000 ರಿಂದ 23,000, ಓಟಿ ಸೇರಿ ಸಿಗುತ್ತದೆ ಸಂಪರ್ಕಿಸಿ:
ಸಾಯಿಕೃಪ ಎಂಟರ್‌ಪ್ರೈಸಸ್
ರತ್ನಯ್ಯ 9900889325 | ಪ್ರಕಾಶ 8971460235

ಸೈಟು ಮಾರಾಟಕ್ಕಿದೆ
30x40 (1288 sq.ft) S/W ಕಾರ್ನರ್ ಮುಡಾ ಅಪ್ರೂವ್ಡ್ 'ಇ' ಖಾತ, ಜ್ಞಾನಭಾರತಿ ಲೇಔಟ್, ದಡದಹಳ್ಳಿ ರೋಡ್, ಮೈಸೂರು. 1 ಚದುರ ಅಡಿ Rs. 3500/- per sq.ft.
Contact: 8147084769

ಸುವರ್ಣಾವಕಾಶ
ಎಕ್ಸಿಕ್ಯೂಟಿವ ಫೀಲ್ಡ್‌ನಲ್ಲಿ ಅನುಭವವುಳ್ಳ ತುಂಬಾ ಚಾಣಾಕ್ಷತನದಿಂದ ಮಾತನಾಡುವ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ ಹಾಗೂ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕಿನಾದ್ಯಂತ ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ.
9880217548

ಬೇಕಾಗಿದ್ದಾರೆ
ಮೈಸೂರಿನ ಬೋಗಾದಿಯ್ಲಲಿರುವ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಆಫೀಸಿನಲ್ಲಿ ಕೆಲಸ ಮಾಡಲು ಅನುಭವವುಳ್ಳ ಆಫೀಸ್ ಅಸಿಸ್ಟೆಂಟ್ ಬೇಕಾಗಿದ್ದಾರೆ. ಮಹಿಳೆಗೆ ಮೊದಲ ಆದ್ಯತೆ. ಕಂಪ್ಯೂಟರ್ ಜ್ಞಾನವಿದ್ದು, ಟೈಪಿಂಗ್ ಕಲಿತಿರಬೇಕು. ಸಂಬಳ: 15,000 / ತಿಂಗಳಿಗೆ + ಇನ್ಸೆಂಟಿವ್
80733 00783

ಕೂಡಲೇ ಬೇಕಾಗಿದ್ದಾರೆ
ವಿಜಯನಗರ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಕೂಡಲೇ ಬೇಕಾಗಿದ್ದಾರೆ ಮತ್ತು ಇದೆ ಆಸ್ಪತ್ರೆಗೆ ಹೌಸ್ ಕೀಪಿಂಗ್ ಮಹಿಳೆಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
9353646312

SITE FOR SALE
N/F Corner 60x70 Suvarna nagara Bhogadi Road
8050821108

SITE FOR SALE
60x80 W/F Commercial / Residential Sun City Homes Layout Seegally Road, Attached 350 mtrs from Hunsur Road Highway. Rs. 1500/- Negotiable.
9019746369

PRAKRUTHI PROPERTIES
SITES FOR SALE
40x60 Commercial Site Nr Bramharamba Chltry,
40x60 Properties @ Ramakrishna Nagar
20x30 House@ Giridharshini Lyt, Near Siddhartha Lyt
20x30, 30x40 Sites & House @ Dattagalli, Jayanagar, RK Ngr
30x50 Nr Mookambika Lyt,HD Kote Rd
Sites also available Near RT Nagar, Bogadi in & around Mysore
95386 90359, 90359 90359

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ತಾಂಡ್ಯ ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ವಯೋಮಿತಿ: 45 ವರ್ಷದೊಳಗೆ ಸಂಬಳ: 26000/-26 days ESI,PF ಊಟ ತಿಂಡಿ ವಸತಿಸೌಲಭ್ಯವಿರುತ್ತದೆ
9620667819
9880727819

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 15,000/–
7899754149

ಜಮೀನು ಸೈಟು ಮಾರಾಟಕ್ಕಿದೆ
ಮೈಸೂರು ತಾ. ಜಯಪುರ ಹೋಬಳಿ 1ಎಕರೆ 4 ಗುಂಟೆ 19 ಗುಂಟೆ 3 ಎಕರೆ 7 ಗುಂಟೆ ಹತ್ತವಾಳು 1 ಎಕರೆ 28 ಗುಂಟೆ 1 ಎಕರೆ 26 ಗುಂಟೆ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9945661696
ದಟ್ಟಗಳ್ಳಿ G ಬ್ಲಾಕ್, 20x30 ಉತ್ತರ ದಿಕ್ಕು ಎದುರುಗಡೆ ಪಾರ್ಕ್ ಸೈಟು ಮಾರಾಟಕ್ಕಿದೆ.
9663793666

ಸೈಟು ಮಾರಾಟಕ್ಕಿದೆ
ಕೆ.ಆರ್.ಎಸ್ ಹತ್ತಿರ ಅಭಿವೃದ್ಧಿ ಹೊಂದಿರುವ ಲೇಔಟ್‌ನಲ್ಲಿ 30x40 ಉತ್ತರ ದಿಕ್ಕಿನ 'ಇ' ಖಾತೆ ಹೊಂದಿರುವ ಸೈಟು ನಂ.25, 13 ಲಕ್ಷದ 80ನ ಸಾವಿರಕ್ಕೆ ಮಾರಾಟಕ್ಕಿದೆ
9900256387

ಬೇಕಾಗಿದ್ದಾರೆ
ವೆಜ್ ಹೋಟೆಲ್‌ನಲ್ಲಿ ಕೆಲಸ ಮಾಡಲು ಹೆಲ್ಪರುಗಳು (2) ಸರ್ವರ್‌ಗಳು (3) (ಹುಡುಗಿಯರು) ಹಾಗೂ ಅಡುಗೆ ಭಟ್ಟರು ಬೇಕಾಗಿದ್ದಾರೆ
8892088999

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು
9916908454

ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–25
ವಿಟಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
hr@centuryvitalrecords.com

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಇರುವ Hotel ಮತ್ತು ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡಲು Security ಅನುಭವವಿರುವ ಗಂಡಸರು ಹಾಗೂ ಅನುಭವವಿರುವ ಗಂಡಸರು ಹಾಗೂ ಹೆಂಗಸರು ಬೇಕಾಗಿದ್ದಾರೆ.
7899752014

ಉದ್ಯೋಗ ಅವಕಾಶಗಳು
1) ಸೆಕ್ಯೂರಿಟಿ ಗಾರ್ಡ್‌ಗಳು
2) ಹೌಸ್ ಕೀಪಿಂಗ್
ನಾವು ಏನು ನೀಡುತ್ತೇವೆ ಸ್ಪರ್ಧಾತ್ಮಕ ಸಂಬಳ (ESI, PF)
ಸ್ಥಳ : ಬಲ್ಲಾಳ ಸರ್ಕಲ್, ನಂಜುಮಳಿಗೆ, BMC ನಗರ, ಮೇಟಗಳ್ಳಿ,
8217563349
8867197599, 9148975329

ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ ಐಶ್ವರ್ಯ ಪೆಟ್ರೋಲ್ ಬಂಕ್ ಕಡೆ ಮತ್ತು ವಾಟರ್ ಟ್ಯಾಂಕ್ ಹತ್ತಿರ ಕೆಲಸ ಮಾಡಲು 45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ ಹಾಗೂ ಅನುಭವವಿರುವ ನುರಿತ ಸಸ್ಯಾಹಾರಿ/ಮಾಂಸಾಹಾರಿ ಅಡುಗೆಯವರು ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ:
9900481819
9972945905

ಕೃಷಿ ಜಮೀನು ಮಾರಾಟಕ್ಕಿದೆ
ಮೈಸೂರು ತಾ॥ ವರುಣ ಹೋಬಳಿ, ಮಾರಶೆಟ್ಟಿ ಹಳ್ಳಿ ಗ್ರಾಮ, ಎರಡು ಎಕರೆ ಒಂದು ಗುಂಟೆ (2.1) ಕಾರ್ನರ್ ಜಮೀನು ಮಾರಾಟಕ್ಕಿದೆ. 1 ಗುಂಟೆಗೆ 6,50,000/– ರೂ.ಗಳು ಜಮೀನು ಮುಂಭಾಗ 80 ಅಡಿ ರಸ್ತೆ ಇದೆ. ಫಾರ್ಮ್‌ಹೌಸ್, ಸ್ಕೂಲ್ ರೆಸಾರ್ಟ್‌ಗೆ ಸೂಕ್ತ ಸ್ಥಳ ವಾಗಿರುತ್ತದೆ. ಖರೀದಿದಾರರು ಮಾತ್ರ ಸಂಪರ್ಕಿಸಿ
8431756001
9448273340

ಕಂಕಣ ಭಾಗ್ಯ
ಒಕ್ಕಲಿಗ, ಕುರುಬ, ಲಿಂಗಾಯತ್, ನಾಯಕ, SC ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು, ವಿಧುರ–ವಿಧವೆಯರು ತಕ್ಷಣ ಸಂಪರ್ಕಿಸಿ:
9071577131

FOR RENT
Two layout shop or Office, 210 square Feet. Ground Floor thyagaraj Main Road, Nearby 101 Ganapati Temple
8453459670

SITE FOR SALE
DTCP Approved N/W Corner 40x23, 934 Sqft @ Thalur Circle Bus Stand, Hullahalli Main Road, (Thaluru-Jayapura Hobali Rate: 15.50 Lakhs
9900549140
9845797577

ಬೇಕಾಗಿದ್ದಾರೆ
ವಯಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ/ಯುವತಿಯರು ಮಹಿಳೆಯರು/ವಿಧವೆ/ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಆಧಾರ್ ಕರ್ಡ್ ಕಡ್ಡಾಯ ಊಟ ವಸತಿಯೊಂದಿಗೆ ಸಂಬಳ 12000 ರಿಂದ 15000ರವರೆಗೆ ಕೂಡಲೇ ಸಂಪರ್ಕಿಸಿ:
9035324777, 7259306665

ಬೇಕಾಗಿದ್ದಾರೆ
1. ಸೆಕ್ಯೂರಿಟಿಗಾರ್ಡ್–5 ನಂ. (ESI/PF/8 ಗಂಟೆ ಡ್ಯೂಟಿ) ಗೋಕುಲಂ ಸುತ್ತಮುತ್ತ ಆದ್ಯತೆ,
2. ಹೌಸ್ ಕೀಪಿಂಗ್ ಹುಡುಗರು – 10 ನಂ. (POLICE VERIFICATION CERTIFICATE)
3. ಅಡುಗೆ / ಮಹಿಳೆ/ ಮನೆಯಲ್ಲಿರಬೇಕು (ಸಿದ್ಧಾರ್ಥನಗರದಲ್ಲಿ)
ಆಕರ್ಷಕ ಸಂಬಳವಿರುತ್ತದೆ.
9036745292

ಮುಡಾ ಸೈಟು ಮಾರಾಟಕ್ಕಿದೆ
30x30 East Facing ಜೆ.ಪಿ. ನಗರ ರಿಂಗ್ ರಸ್ತೆ ಪಕ್ಕದಲ್ಲಿ ಕೊಪ್ಪಲೂರು, ಮೈಸೂರು
7411848108

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ವಯೋಮಿತಿ: 50 ವರ್ಷದೊಳಗೆ ಸಂಬಳ: 17500/- 26 days (8hrs) ESI,PF ಊಟ ತಿಂಡಿ ವಸತಿಸೌಲಭ್ಯವಿರುತ್ತದೆ.
9620777819
9620667819

ತಕ್ಷಣ ಬೇಕಾಗಿದ್ದಾರೆ
ಆರ್‌ಬಿಐ ಮತ್ತು ತ್ರಿವೇಣಿ ಕಂಪನಿಯ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ: 18500+W/O (8hrs) ಊಟ ತಿಂಡಿ ವಸತಿಸೌಲಭ್ಯವಿರುತ್ತದೆ.
9880727819
9620777819

PRIME COMMERCIAL SITE FOR SALE
30X40 Srirampura, Mysore (Interested Customers Only Call for more Details)
96206 14970

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡುಗಳು ಟೈಲರುಗಳು, ಹೆಲ್ಪರುಗಳು, ಅಕೌಂಟೆಂಟ್‌ಗಳು ಮತ್ತು ಪ್ರೊಡಕ್ಷನ್ ಸೂಪರ್‌ವೈಸರ್ ಮೈಸೂರಿನ ಹೆಬ್ಬಾಳಿನ ಕೈಗಾರಿಕಾ ಪ್ರದೇಶದಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
8105249880
7795285485

ಸೈಟುಗಳು ಮಾರಾಟಕ್ಕೆ ಇದೆ
30x40- 30 ಲಕ್ಷ
30x50 - 36 ಲಕ್ಷ
40x60 - 62 ಲಕ್ಷ
ಜೆಪಿ ನಗರ ರಿಂಗ್ ರಸ್ತೆ ಹತ್ತಿರ
SKL ಪ್ರಾಪರ್ಟೀಸ್
9341624462

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ

ಪ್ರಭಾರ ಮುಖ್ಯ ಶಿಕ್ಷಕನ ಬಂಧನ: ಪೋಕ್ಸೋ ಪ್ರಕರಣ ದಾಖಲು

ಹೆಚ್.ಡಿ.ಕೋಟೆ, ಮಾ.5– ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ತಾಲೂಕಿನ ಅಗಸನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪ್ರಭಾರ ಮುಖ್ಯ ಶಿಕ್ಷಕ ಕೆ.ಹೆಚ್.ಗಿರೀಶ್‌ನನ್ನು ಹೆಚ್.ಡಿ.ಕೋಟೆ ಠಾಣೆ ಪೊಲೀಸರು ಬಂಧಿಸಿ, ಪೋಕ್ಸೋ ಪ್ರಕರಣ ದಾಖಲಿಸಿದ್ದಾರೆ.



ಹೆಚ್.ಡಿ.ಕೋಟೆ ಪೊಲೀಸ್ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಿಬ್ಬಂದಿಗಳಾದ ಯೋಗೇಶ್, ಬೀರಪ್ಪ ಸೇರಿದಂತೆ ಇನ್ನಿತರರು ತಲೆಮರೆಸಿಕೊಂಡಿದ್ದ ಶಿಕ್ಷಕನ ಬಂಧನಕ್ಕೆ ತನಿಖೆ ಕೈಗೊಂಡಿದ್ದರು. ಈ ವೇಳೆ ಖಚಿತ ಮಾಹಿತಿ ಮೇರೆಗೆ ಹುಬ್ಬಳ್ಳಿಗೆ ತೆರಳಿದ ಪೊಲೀಸರು ಅಜ್ಞಾತ ಸ್ಥಳದಲ್ಲಿ ಅಡಗಿದ್ದ ಪ್ರಭಾರ ಮುಖ್ಯ ಶಿಕ್ಷಕ ಗಿರೀಶ್‌ನನ್ನು ಬಂಧಿಸಿ ಪೋಕ್ಸೋ ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲು ಮುಂದಾಗಿದ್ದಾರೆ.

ಶಾಸಕ ಅನಿಲ್ ಅಗಸನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಪೋಷಕರು ಹಾಗೂ ಗ್ರಾಮಸ್ಥರೊಡನೆ ಚರ್ಚಿಸಿ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಮುಖ್ಯ ಶಿಕ್ಷಕನನ್ನು 24 ಗಂಟೆಯೊಳಗೆ ಬಂಧಿಸುವಂತೆ ಖಡಕ್ ಆದೇಶ ನೀಡಿದ್ದರು. ಅವರ ಆದೇಶದಂತೆ ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಮುಖ್ಯ ಶಿಕ್ಷಕನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು

ಹುಣಸೂರು, ಮಾ.5– ಬೈಕ್‌ಗೆ ಗ್ಯಾಸ್ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಟಿವಿಎಸ್ ಶೋ ರೂಂ ಬಳಿ ಬುಧವಾರ ಸಂಜೆ ನಡೆದಿದೆ.



ಪರಿವರ್ತನಾ ಸ್ವಯಂ ಸೇವಾ ಸಂಸ್ಥೆ ಉದ್ಯೋಗಿ, ಕೊತ್ತೇಗಾಲ ಗ್ರಾಮದ ವಾಸಿ ಮಲ್ಲೇಶ್ (55) ಸಾವನ್ನಪ್ಪಿದವರು. ಈತ ಕಾರ್ಯ ನಿಮಿತ್ತ ತನ್ನ ಸ್ಪ್ಲೆಂಡರ್ (ಕೆಎ.45, ವೈ.8017) ಬೈಕ್‌ನಲ್ಲಿ ಕೊತ್ತೇಗಾಲ ಗ್ರಾಮದಿಂದ ಬರುತ್ತಿದ್ದರು. ಈ ವೇಳೆ ಪಿರಿಯಾಪಟ್ಟಣ ಕಡೆಯಿಂದ ಬರುತ್ತಿದ್ದ ಗ್ಯಾಸ್ ತುಂಬಿದ ಲಾರಿ(ಕೆಎ.12, ಎ.4729) ಹಿಂದಿನಿಂದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಲ್ಲೇಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರ ಠಾಣೆ ಇನ್ಸ್‌ಪೆಕ್ಟರ್ ಕಶ್ಯಪ್, ಎಎಸ್‌ಐ ಮಹಾಲಿಂಗು ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ವಾಹನಗಳನ್ನು ವಶಕ್ಕೆ ಪಡೆದು ಶವವನ್ನು ನಗರದ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನ್ನಡ ಸಾಹಿತ್ಯಕ್ಕೆ ಸರ್ವಜ್ಞನ ಕೊಡುಗೆ ಅಪಾರ

ಮೈಸೂರು ಕ್ರೆಡಿಟ್ ಹೈಸೊಸೈಟಿ ಮ್ಯಾನೇಜಿಂಗ್ ಡೈರೆಕ್ಟರ್ ಡಾ.ಎಂ.ಪಿ.ವರ್ಷ

ತಿ.ನರಸೀಪುರ, ಮಾ.5– ಸರ್ವಜ್ಞನ ತ್ರಿಪದಿಗಳು ಮಾನವ ಜೀವನದ ವಿವೇಕ ವಾಣಿಗಳಂತಾಗಿವೆ. ಕನ್ನಡ ಸಾಹಿತ್ಯಕ್ಕೆ ಮಹಾಜ್ಞಾನಿ ಸರ್ವಜ್ಞನ ಕೊಡುಗೆ ಅಪಾರ ಎಂದು ಮೈಸೂರು ಕ್ರೆಡಿಟ್ ಹೈಸೊಸೈಟಿ ಮ್ಯಾನೇಜಿಂಗ್ ಡೈರೆಕ್ಟರ್ ಡಾ.ಎಂ.ಪಿ.ವರ್ಷ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಿ.ನರಸೀಪುರ ತಾಲೂಕು ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘಗಳ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಪಂ ಸಭಾಂಗಣದಲ್ಲಿ ಬುಧವಾರ ನಡೆದ 505ನೇ ಸರ್ವಜ್ಞ ಜಯಂತಿಯಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಸರ್ವಜ್ಞರು ಸಮಾಜದಲ್ಲಿ ಬೇರೂರಿದ್ದ ಅಜ್ಞಾನ, ಮೂಢನಂಬಿಕೆ, ಮೂರ್ತಿ ಪೂಜೆ, ಜಾತಿ ವ್ಯವಸ್ಥೆಯನ್ನು ಕಟುವಾಗಿ ಖಂಡಿಸಿ ಸಮ ಸಮಾಜ ನಿರ್ಮಿಸಲು ತಮ್ಮ ತ್ರಿಪದಿಗಳ ಮೂಲಕ ಜನರಲ್ಲಿ ವೈಚಾರಿಕ ಪ್ರಜ್ಞೆ ಬಿತ್ತಿದರು. ಮಾನವನ ಜೀವನದ ಸುಖವು ಸ್ವರ್ಗದಲ್ಲಿಲ್ಲ, ಭೂಲೋಕದಲ್ಲೇ ಇದೆ. ಅದನ್ನು ಒಳ್ಳೆಯ ಕಾರ್ಯದಿಂದ ಸಾಧಿಸಬೇಕಿದೆ ಎಂದರು.

ಸರ್ವಜ್ಞನ ಹುಟ್ಟಿನ ಹಿನ್ನಲೆ ಕುರಿತು ಜಿಜ್ಞಾಸೆಗಳಿವೆಯಾದರೂ ಈತನ ತಂದೆ ಹಾವೇರಿ ಜಿಲ್ಲೆ ಮಾಸೂರಿನ ಬಸವರಸ ಎಂಬ ಬ್ರಾಹ್ಮಣ ಮತ್ತು ತಾಯಿ ಹಾವೇರಿಯ ಅಬಲೂರಿನ ಕುಂಬಾರ ಮಾಳಿ ಎಂಬುದನ್ನು ಆತನ ಒಂದು ವಚನದಿಂದ ತಿಳಿಯಬಹುದಾಗಿದೆ. ಈತನ ವಚನಗಳ ವಸ್ತುವಿನ ಆಧಾರದಲ್ಲಿ ವೀರಶೈವ ಕವಿ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಜಾನಪದ ಕವಿಯಂತೆ ಗ್ರಾಮೀಣತೆ, ಆಶುಕಾವ್ಯತ್ವ ಅವನ ಕಾವ್ಯ ಶ್ರೀಮಂತಿಕೆಯಾಗಿದೆ. ತನ್ಮೂಲಕ ಅವನ ತ್ರಿಪದಿಗಳು ಸಾರುವ ಲೋಕಾನುಭವದ ಪಾಠವೂ ಶ್ರೀಮಂತವಾದುದೇ ಆಗಿದೆ. 7 ಸಾವಿರ ತ್ರಿಪದಿಗಳು ಆತನ ಹೆಸರಿನಲ್ಲಿ ದೊರೆತರೂ ಅವುಗಳಲ್ಲಿ ಪ್ರಕ್ಷಿಪ್ತವೂ ಇವೆ. ಸಾವಿರ ತ್ರಿಪದಿಗಳು ಸರ್ವಜ್ಞನ ಹೆಸರಿನಲ್ಲಿ ದಾಖಲಾಗಿವೆ ಎಂದರು.



ಸರ್ವಜ್ಞ ಜಯಂತಿಯನ್ನು ತಾಲೂಕು ಕುಂಬಾರ ಸಂಘದ ಸಂಸ್ಥಾಪಕ ಕೇತಹಳ್ಳಿ ರಾಜಣ್ಣ ಉದ್ಘಾಟಿಸಿದರು.

> ಸರ್ವಜ್ಞನ ತ್ರಿಪದಿಗಳು ಜ್ಞಾನದ ಭಂಡಾರವಾಗಿದ್ದು, ಕೇವಲ 3 ಸಾಲಿನ ತ್ರಿಪದಿಗಳಲ್ಲಿ ಸಮಾಜದ ಅಂಕುಡೊಂಕುಗಳನ್ನು ನಿರ್ಭೀತಿಯಿಂದ ಪ್ರಸ್ತುತ ಪಡಿಸಲಾಗಿದೆ. ಜನತೆ ಇದನ್ನು ಓದಿದರೆ ಸಮಾಜದಲ್ಲಿ ನಡೆಯುವ ಸರಿ ತಪ್ಪುಗಳ ಬಗ್ಗೆ ತಿಳುವಳಿಕೆ ಮೂಡುತ್ತದೆ. ಸಮಾಜದ ಅಂಕುಡೊಂಡು ತಿದ್ದುತ್ತಾ, ಬಡವರು–ದುರ್ಬಲರ ನೋವಿಗೆ ಸ್ಪಂದಿಸುವ ಧ್ವನಿಯಾಗಿದ್ದ ಸರ್ವಜ್ಞ ದಿಟ್ಟ ನಿಲುವಿನ ಪ್ರಬುದ್ಧ ವ್ಯಕ್ತಿಯಾಗಿದ್ದರು. ಕಬೀರ, ನಾರಾಯಣ ಗುರು, ತಿರುವಳ್ವಾರ್ ಮಾದರಿ ತ್ರಿಪದಿಗಳ ಮೂಲಕ ತಮ್ಮ ತತ್ವ, ವಿಚಾರಗಳನ್ನು ಬೋಧಿಸಿದ ಸರ್ವಜ್ಞನಿಗೂ ಬುದ್ಧ, ಬಸವ, ಅಂಬೇಡ್ಕರ್‌ಗೆ ಸಿಕ್ಕ ಮನ್ನಣೆ ದೊರೆಯಬೇಕಾಗಿದೆ.
>
> **-ಕೇತಹಳ್ಳಿ ರಾಜಣ್ಣ,** *ಕುಂಬಾರ ಸಂಘದ ಸಂಸ್ಥಾಪಕ.*

ಸರ್ವಜ್ಞನ ತ್ರಿಪದಿಗಳನ್ನು ವಚನಗಳೆಂದು ಕರೆದರೂ ಇವು ಶಿವಶರಣರ ವಚನಗಳಿಗಿಂತ ಭಿನ್ನವಾದವು. ವಚನಗಳು ಗದ್ಯ ಪದ್ಯ ಮಿಶ್ರಿತವಾಗಿದ್ದು, ಸಾಲು ಎಷ್ಟೇ ಇರಬಹುದಾದರೂ, ಸರ್ವಜ್ಞ ಬರೆದಿರುವುದು ನಿಯಮಬದ್ಧವಾದ ಮೂರೇ ಸಾಲು. ಆದರೂ ಜನಪದ ತ್ರಿಪದಿಗಳಿಗಿಂತ ಭಿನ್ನ. ಜನಪದ ತ್ರಿಪದಿಯಲ್ಲಿ ಕವಿ ಪರಿಚಯ ಸಿಗುವುದಿಲ್ಲ ಎಂದು ತಿಳಿಸಿದರು.

16ನೇ ಶತಮಾನದ ಕವಿ, ತ್ರಿಪದಿಗಳ ಸೃಷ್ಟಿಕರ್ತನೇ ಸರ್ವಜ್ಞ. ಮಣ್ಣನ್ನೇ ಬದುಕಾಗಿಸಿಕೊಂಡು ಜೀವನ ನಿರ್ವಹಿಸಿದ ಇವರು ತಮ್ಮ ತ್ರಿಪದಿಗಳ ಮೂಲಕ ಇಂದಿಗೂ ಜನಮಾನಸದಲ್ಲಿದ್ದಾರೆ. ಇದುವರೆಗೆ ಸರ್ಕಾರ ಸರ್ವಜ್ಞರ ಹೆಸರಿನಲ್ಲಿ ಅಭಿವೃದ್ಧಿ ಪ್ರಾಧಿಕಾರ ಮಾಡದಿರುವುದು ವಿಷಾದನೀಯ ಎಂದರು.

ಸಮುದಾಯ ಸಂಘಟನೆಯಾಗದ ಹೊರತು ಸರ್ಕಾರದ ಸವಲತ್ತುಗಳನ್ನು ಪಡೆಯಲು ಅಸಾಧ್ಯ. ಇಂದು ರಾಜಕೀಯ ಕ್ಷೇತ್ರವೂ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಈ ಸಮುದಾಯವನ್ನು ಗುರುತಿಸುವ ಕಾರ್ಯ ಇನ್ನೂ ನಡೆದಿಲ್ಲ. ಸರ್ವಜ್ಞ ಜಯಂತಿ ಆಚರಣೆಗೆ ಮಾತ್ರ ಸೀಮಿತವಾಗದೆ ಸಮಸ್ತ ಸಮುದಾಯದ ಅಭಿವೃದ್ಧಿಗೆ ಪ್ರೇರಕವಾಗಬೇಕೆಂದರು.

ತಾಲೂಕು ಕುಂಬಾರ ಸಂಘದ ಅಧ್ಯಕ್ಷ ಕಿರಗಸೂರು ರಮೇಶ್ ಮಾತನಾಡಿ, ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಯತ್ನ ಸರ್ವಜ್ಞರ ವಚನಗಳ ಮೂಲಕ ನಡೆದಿದೆ. ಅವರ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಕುಂಬಾರ ಸಂಘದ ಗೌರವಾಧ್ಯಕ್ಷ ಕೃಷ್ಣಾಪುರ ಮಹದೇವಶೆಟ್ಟಿ, ಖಜಾಂಚಿ ಚಂದ್ರಶೇಖರಸ್ವಾಮಿ, ಕುಂತನಹಳ್ಳಿ ರವಿಕುಮಾರ್, ಆಲಗೂಡು ಸಿದ್ದರಾಜು, ಕೇತಹಳ್ಳಿ ಮಹದೇವಶೆಟ್ಟಿ, ಬಸವನಹಳ್ಳಿ ನಾಗರಾಜು, ತಲಕಾಡು ಸಿದ್ದರಾಜು, ಗುತ್ತಿಗೆದಾರ ಚಂದ್ರು, ಲೋಕೋಪಯೋಗಿ ಸಹಾಯಕ ಅಭಿಯಂತರ ಸತೀಶ್ ಚಂದ್ರ, ಉಪತಹಶೀಲ್ದಾರ್ ರಾಜಾಕಾಂತ್, ತೋಟಗಾರಿಕೆ ಸಹಾಯಕ ನಿರ್ದೇಶಕಿ ಶಾಂತ ಹಾಜರಿದ್ದರು.

ಹುಣಸೂರಲ್ಲಿ ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ



ರಾಗಿ ಖರೀದಿ ಕೇಂದ್ರಕ್ಕೆ ಉಪವಿಭಾಗಾಧಿಕಾರಿ ವಿಜಯ್ ಕುಮಾರ್ ಚಾಲನೆ ನೀಡಿದರು.

ಹುಣಸೂರು, ಮಾ.5– ರೈತ ಸಂಘದ ಹೋರಾಟದ ಫಲವಾಗಿ ಬುಧವಾರ ನಗರದ ಎಪಿಎಂಸಿಯಲ್ಲಿ ರಾಗಿ ರಾಶಿಗೆ ಪೂಜೆ ಸಲ್ಲಿಸುವ ಮೂಲಕ ಉಪವಿಭಾಗಾಧಿಕಾರಿ ವಿಜಯ್ ಕುಮಾರ್ ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಹುಣಸೂರು ರಾಗಿ ಕಣಜ ಎಂಬ ಹೆಗ್ಗಳಿಕೆ ಹೊಂದಿದ್ದು, ತಂಬಾಕು ಬೇಸಾಯದ ಬಳಿಕ 2ನೇ ಬೆಳೆಯಾಗಿ ರಾಗಿ ಬೆಳೆಯುವ ವಾಡಿಕೆ ಇದೆ. ಪ್ರಸಕ್ತ ಸಾಲಿನಲ್ಲಿ ಸಕಾಲಕ್ಕೆ ಮಳೆಯಾದ ಕಾರಣ ಈ ಬಾರಿ ಉತ್ತಮ ಇಳುವರಿ ಬಂದಿದೆ. ಕೃಷಿ ಇಲಾಖೆ ಈಗಾಗಲೇ ಫ್ರೂಟ್ಸ್ ಆ್ಯಪ್‌ನಲ್ಲಿ ರಾಗಿ ಬೆಳೆಗಾರರ ಹೆಸರು ನೋಂದಣಿ ಮಾಡಿದ್ದಾರೆ. ರಾಗಿ ಬೆಳೆಗಾರರು ಸರ್ಕಾರ ಆರಂಭಿಸಿರುವ ರಾಗಿ ಖರೀದಿ ಕೇಂದ್ರದಲ್ಲಿ ರಾಗಿ ಮಾರಾಟ ಮಾಡಿ ಆರ್ಥಿಕ ಸದೃಢತೆ ಹೊಂದುವಂತೆ ಕರೆ ನೀಡಿದರು. ಖರೀದಿ ಕೇಂದ್ರದಲ್ಲಿ ಟೋಕನ್ ವ್ಯವಸ್ಥೆ ಜಾರಿಗೊಳಿಸಿ, ರೈತರು ನಿಗದಿತ ದಿನಾಂಕ ಮತ್ತು ಸಮಯಕ್ಕೆ ಅನುಗುಣವಾಗಿ ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ. ಯಾವುದೇ ಗೊಂದಲವಿಲ್ಲದೆ ಮಾರಾಟ ಮಾಡಬಹುದು ಎಂದರು.

ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್ ಮಾತನಾಡಿ, ರಾಗಿ ಖರೀದಿ ಕೇಂದ್ರವನ್ನು ನಿಗದಿತ ಸಮಯಕ್ಕೆ ಆರಂಭಿಸಿದ್ದರೇ ರೈತರು ದಲ್ಲಾಳಿಗೆ ಕ್ವಿಂಟಾಲ್ ರಾಗಿಯನ್ನು 2500 ರೂ.ನಂತೆ ಮಾರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಇಲಾಖೆಯ ವಿಳಂಭ ಧೋರಣೆಯಿಂದ ರೈತರು ಪ್ರತಿ ಕ್ವಿಂಟಾಲ್‌ಗೆ 2 ಸಾವಿರ ರೂ. ನಷ್ಟ ಅನುಭವಿಸಿ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿದ್ದು ಬೇಸರದ ಸಂಗತಿ ಎಂದರು. ಖರೀದಿ ಕೇಂದ್ರದಲ್ಲಿ ಅಧಿಕಾರಿಗಳು ಮತ್ತು ತಳ ಹಂತದ ಸಿಬ್ಬಂದಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡಿ ರೈತರನ್ನು ದಾರಿ ತಪ್ಪಿಸುವ ಅವಕಾಶವಿದ್ದು, ಮಾರುಕಟ್ಟೆಗೆ ತರುವ ರಾಗಿಯಲ್ಲಿ ತೇವಾಂಶ ಹೆಚ್ಚಿದೆ ಎಂದು ಬೆದರಿಸಿ ಹಣ ಕಿತ್ತುಕೊಂಡು ಮಾರಾಟಕ್ಕೆ ಅವಕಾಶ ಕಲ್ಪಿಸುವ ತಂತ್ರಗಾರಿಕೆ ಸಹ ನಡೆಯಲಿದೆ. ಇದಕ್ಕೆ ಅಧಿಕಾರಿಗಳು ಕಡಿವಾಣ ಹಾಕಬೇಕು. ಟೋಕನ್ ಪಡೆದ ರೈತರಿಗೆ ಮಾರಾಟಕ್ಕೆ ಅವಕಾಶ ಕಲ್ಪಿಸಿ ವ್ಯಾಪಾರ ಸುಧಾರಿಸುವ ದಿಕ್ಕಿನಲ್ಲಿ ರೈತರೊಂದಿಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕೈ ಜೋಡಿಸಿ ಶಾಂತಿಯುತವಾಗಿ ಮಾರುಕಟ್ಟೆ ನಡೆಸುವ ವಾತಾವರಣ ಸೃಷ್ಟಿಸುವಂತೆ ಮನವಿ ಮಾಡಿದರು.

ಎಪಿಎಂಸಿ ಕಾರ್ಯದರ್ಶಿ ಹಂಪಣ್ಣ ಮಾತನಾಡಿ, ನಗರದ ಎಪಿಎಂಸಿಯಲ್ಲಿ ಈಗಾಗಲೇ 5331 ರೈತರು ತಮ್ಮ ಹೆಸರು ನೋಂದಾಯಿಸಿಕೊಂಡಿದ್ದು, 86725 ಕ್ವಿಂಟಾಲ್ ರಾಗಿ ಬರುವ ನಿರೀಕ್ಷೆ ಇದೆ. ಅದರಂತೆ ರತ್ನಪುರಿ ಕಾಲೋನಿಯ ಎಪಿಎಂಸಿಯಲ್ಲಿ 690 ಜನ ರೈತರು ಹೆಸರು ನೋಂದಾಯಿಸಿಕೊಂಡಿದ್ದು, 11.130 ಕ್ವಿಂಟಾಲ್ ರಾಗಿ ಬರುವ ನಿರೀಕ್ಷೆ ಇದೆ. ಈ ಬಾರಿ ಸರ್ಕಾರ ಪ್ರತಿ ಕ್ವಿಂಟಾಲ್ ರಾಗಿಗೆ 4290 ರೂ. ದರ ನಿಗದಿ ಮಾಡಿದೆ. ಅದರಂತೆ ಭತ್ತದ ಖರೀದಿಗಾಗಿ ಈಗಾಗಲೇ ತಾಲೂಕಿನಲ್ಲಿ 70 ರೈತರು ಹೆಸರು ನೋಂದಾಯಿಸಿಕೊಂಡಿದ್ದು, ಇವರಿಂದ 2620 ಕ್ವಿಂಟಾಲ್ ಭತ್ತ ಬರುವ ನಿರೀಕ್ಷೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಎಪಿಎಂಸಿ ಖರೀದಿ ಅಧಿಕಾರಿ ಸುರೇಶ್ ಬಾಬು, ದಸಂಸ ಮುಖಂಡ ಅತ್ತಿಗುಪ್ಪೆ ರಾಮಕೃಷ್ಣ, ರೈತ ಮುಖಂಡರಾದ ರಾಮೇಗೌಡ, ತಾಲೂಕು ಅಧ್ಯಕ್ಷ ಚಿಕ್ಕಣ್ಣ ಸೇರಿದಂತೆ ಇತರರಿದ್ದರು.

ಕ್ರಿಕೆಟ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣೆ

ಮೈಸೂರು ತಾಲೂಕಿನ ಜಯಪುರ ಗ್ರಾಮದ ವಿನಾಯಕ ಗೆಳೆಯರ ಬಳಗದಿಂದ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಜಯಗಳಿಸಿದ ಹೆಚ್.ಡಿ.ಕೋಟೆ ತಾಲೂಕಿನ ಹರದನಹಳ್ಳಿ ತಂಡಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ ವೈಯಕ್ತಿಕವಾಗಿ 20ಸಾವಿರ ನಗದು ಬಹುಮಾನ ಮತ್ತು ಟ್ರೋಫಿ ನೀಡಿದರು. ಈ ವೇಳೆ ಜಯಪುರ ಗ್ರಾಪಂ ಅಧ್ಯಕ್ಷ ಮಹದೇವಮ್ಮ, ಜವರನಾಯಕ, ನಾಗರಾಜು, ನಾಗೇಶ್, ರಂಗಸ್ವಾಮಿ, ಅಂಕನಾಯಕ ಉಪಸ್ಥಿತರಿದ್ದರು.



ಭಾರತೀಯ ಕಿಸಾನ್ ಸಂಘದ ಸ್ಥಾಪನೆ ದಿನಾಚರಣೆ



ಭಾರತೀಯ ಕಿಸಾನ್ ಸಂಘದ ಸ್ಥಾಪನೆ ದಿನಾಚರಣೆ ಆಚರಿಸಲಾಯಿತು.

ತಿ.ನರಸೀಪುರ, ಮಾ.5– ಭಾರತೀಯ ಕಿಸಾನ್ ಸಂಘದ ತಾಲೂಕು ಸಮಿತಿಯಿಂದ ನಡೆದ ಮಾಸಿಕ ಸಭೆಯಲ್ಲಿ ಭಾರತೀಯ ಕಿಸಾನ್ ಸಂಘದ ಸ್ಥಾಪನೆ ದಿನಾಚರಣೆ ಆಚರಿಸಲಾಯಿತು.

ಪಟ್ಟಣದ ಎಪಿಎಂಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಂಘದ ತಾಲೂಕು ಅಧ್ಯಕ್ಷ ನಾಗಲಗೆರೆ ಶಿವಕುಮಾರ್ ಮಾತನಾಡಿ, ಮಾ.4 ರಂದು 1979ರಲ್ಲಿ ದಂತ್ತೋಪಂತ್ ತೆಂಗಡಿ ಅವರು, ರೈತರ ಸಮಸ್ಯೆಗಳಾದ ರೈತರ ಮಾರುಕಟ್ಟೆ, ಮೌಲ್ಯವರ್ಧನೆ, ಅಸಮರ್ಪಕ ರಾಸಾಯನಿಕ ಬಳಕೆ, ಸಾವಯವ ಕೃಷಿ ಉತ್ತೇಜಿಸುವುದು, ಏತ ನೀರಾವರಿ ಯೋಜನೆಗಳು, ಅಧ್ಯಯನ ಸಂಸ್ಥೆಗಳು, ಸಾಗುವಳಿ, ಭ್ರಷ್ಟಾಚಾರ, ಸರ್ಕಾರ ಮತ್ತು ಕೃಷಿ ತೋಟಗಾರಿಕೆ ಕಂದಾಯ ವಿದ್ಯುತ್ ಸೇರಿದಂತೆ ಇಲಾಖೆಗಳ ಭ್ರಷ್ಟಾಚಾರಗಳು ಮಿತಿ ಮೀರಿದನ್ನು ಕಂಡು ದೇಶಾದ್ಯಂತ ರೈತ ಸಂಘಟನೆ ಅಗತ್ಯತೆ ಅರಿತು ಸಂಘಟನೆ ಸ್ಥಾಪನೆ ಮಾಡಿದರು. ಈಗ ಸಂಘಕ್ಕೆ 49 ವರ್ಷ ತುಂಬಿದೆ. ದೇಶಾದ್ಯಂತ ಭಾರತೀಯ ಕಿಸಾನ್ ಸಂಘ 500ಕ್ಕೂ ಹೆಚ್ಚು ಉಪ ಜಿಲ್ಲೆಗಳನ್ನಾಗಿ ವಿಂಗಡಿಸಿ 36 ಪ್ರಾಂತ್ಯವಾರು ಕೋಟ್ಯಾಂತರ ರೈತ ಸದಸ್ಯರು ಸದಸ್ಯತ್ವ ಹೊಂದಿದ್ದು ರೈತರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಈ ಸಂಘಟನೆ ಮೂಲಕ ಹೋರಾಟಗಳು ನಿರಂತರವಾಗಿ ನಡೆಯುತ್ತಿದ್ದು, ತಾಲೂಕಿನಲ್ಲಿ ಪ್ರತಿ ತಿಂಗಳು 4ನೇ ತಾರೀಕು ಸಭೆ ನಡೆಯಲಿದ್ದು, ಸಮಸ್ಯೆಯಲ್ಲಿರುವ ರೈತರು ಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದರು.

ಸಭೆಯಲ್ಲಿ ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ ಅವರು ಭಾರತ ಮಾತೆಗೆ ಹಾಗೂ ದಂತ್ತೋಪಂತ್ ತೆಂಗಡಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭ ಉಪಾಧ್ಯಕ್ಷರಾದ ಪರಮೇಶ್, ಸಿದ್ದರಾಜು, ಶಿವಮಲ್ಲು, ಪ್ರಭಾಕರ್, ಮೋಹನ್ ಚಿಮ್ಮಿ, ನಾರಾಯಣ ದೊಡ್ಡಪುರ, ಜಗದೀಶ್, ಪ್ರಕಾಶ್, ಮಹಾ ದೇವಸ್ವಾಮಿ, ತುಂಬಲ ಪ್ರಭುಸ್ವಾಮಿ, ರೈತ ಮುಖಂಡರು ಭಾಗವಹಿಸಿದ್ದರು.

ಹವಾಮಾನ ಬದಲಾವಣೆ, ಮಾನವ ಆರೋಗ್ಯದ ರಾಷ್ಟ್ರೀಯ ಕಾರ್ಯಕ್ರಮ



ಕಾರ್ಯಕ್ರಮದಲ್ಲಿ ಮಕ್ಕಳು ಹವಾಮಾನ ಬದಲಾವಣೆ ಕುರಿತು ಪ್ರಬಂಧ ಬರೆದರು.

ಸರಗೂರು, ಮಾ.5– ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯಿಂದ ಹವಾಮಾನ ಬದಲಾವಣೆ ಮತ್ತು ಮಾನವ ಆರೋಗ್ಯದ ರಾಷ್ಟ್ರೀಯ ಕಾರ್ಯಕ್ರಮ ನಡೆಯಿತು.

ಲಯನ್ಸ್ ಅಕಾಡೆಮಿ ಶಾಲೆ ಪ್ರಾಂಶುಪಾಲ ದಾಸಚಾರಿ ಮಾತನಾಡಿ, ಹವಾಮಾನಕ್ಕೆ ತಕ್ಕಂತೆ ಆಹಾರ ಸೇವಿಸಬೇಕು. ಪರೀಕ್ಷಾ ದೃಷ್ಟಿಯಿಂದ ವಿದ್ಯಾರ್ಥಿಗಳು ಸಮತೋಲನ ಆಹಾರ ತೆಗೆದು ಕೊಳ್ಳುವುದು ಸೂಕ್ತ ಎಂದರು. ಹವಾಮಾನ ಬದಲಾವಣೆ ಭೂಮಿಯ ಪರಿಸರ, ಪರಿಸ್ಥಿತಿಗಳಲ್ಲಿ ಬದಲಾವಣೆ ಸೂಚಿಸುತ್ತದೆ. ಇದು ಅನೇಕ ಆಂತರಿಕ ಮತ್ತು ಬಾಹ್ಯ ಅಂಶಗಳಿಂದ ಉಂಟಾಗುತ್ತದೆ. ಅಲ್ಲದೇ ಈ ಹವಾಮಾನ ಬದಲಾವಣೆ ಭೂಮಿ ಮೇಲೆ ವಿವಿಧ ರೀತಿ ಪರಿಣಾಮ ಬೀರುತ್ತವೆ. ಹವಾಮಾನ ಬದಲಾವಣೆ ಇಂದು ಪ್ರಮುಖ ಜಾಗತಿಕ ಸವಾಲಾಗಿದೆ. ಜಗತ್ತು ಈ ಬದಲಾವಣೆಗೆ ಹೆಚ್ಚು ದುರ್ಬಲವಾಗುತ್ತಿದೆ. ಹವಾಮಾನ ಬದಲಾವಣೆ ಭೂಮಿ ಹವಾಮಾನ ಸ್ಥಿತಿಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ. ಇದು ದಶಕಗಳಿಂದ ಲಕ್ಷಾಂತರ ವರ್ಷಗಳವರೆಗೆ ಒಂದು ಅವಧಿಯಲ್ಲಿ ಸಂಭವಿಸಿದ ವಾತಾವರಣದಲ್ಲಿನ ಬದಲಾವಣೆಗಳನ್ನು ವಿವರಿಸುತ್ತದೆ ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಸೂಪರ್‌ವೈಸರ್ ಜಯರಾಮ್ ಮಾತನಾಡಿ, ಹವಾಮಾನಕ್ಕೆ ತಕ್ಕಂತೆ ಆರೋಗ್ಯದಲ್ಲಿ ಏರುಪೇರುಗಳಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸಮತೋಲನ ಆಹಾರ ಸೇವಿಸಬೇಕು. ಇದರಿಂದ ನಿಮ್ಮ ಆರೋಗ್ಯವನ್ನು ಉತ್ತಮ ರೀತಿ ಕಾಪಾಡಿಕೊಳ್ಳಬಹುದು ಎಂದರು.

ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಕೋಟೆ ಮತ್ತು ಸರಗೂರು ತಾಲೂಕಿನ ಆರೋಗ್ಯ ಇಲಾಖೆ ಸಿಬ್ಬಂದಿ ನಾಗೇಂದ್ರ ಬಹುಮಾನ ವಿತರಿಸಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ಪುಷ್ಪಲತಾ, ಜಗದೀಶ್, ಶ್ವೇತ ಹಾಗೂ ಸಿಬ್ಬಂದಿ ವರ್ಗ, ಶಾಲಾ ಮಕ್ಕಳು, ಹಾಜರಿದ್ದರು.

ದಿ.ಡಾ.ಅಕಬರ ಅಲಿ ಸ್ಮರಣಾರ್ಥ ಚುಟುಕು ಕವಿಗೋಷ್ಠಿ

ಮೈಸೂರು, ಮಾ.5– ಖ್ಯಾತ ಚುಟುಕು ಸಾಹಿತಿ ದಿ.ಡಾ.ಅಕಬರ ಅಲಿ ಅವರ 100ನೇ ಹುಟ್ಟುಹಬ್ಬದ ಸ್ಮರಣಾರ್ಥ ರಾಜ್ಯ ಮಟ್ಟದ ಚುಟುಕು ಕವಿಗೋಷ್ಠಿಯನ್ನು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಮತ್ತು ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ ಸಂಯುಕ್ತವಾಗಿ ಏರ್ಪಡಿಸಿದೆ.

ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳುವವರು 4 ಸಾಲಿನ 3 ಚುಟುಕುಗಳನ್ನು ತಮ್ಮ ಚುಟುಕು ಪರಿಚಯದೊಂದಿಗೆ ಮಾ.8ರೊಳಗೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 98863 44524 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪುನೀತ್ ರಾಜ್‌ಕುಮಾರ್ ಕಪ್ ಕ್ರಿಕೆಟ್ ಪಂದ್ಯಾವಳಿ

ನಂಜನಗೂಡು, ಮಾ.5– ತಾಲೂಕಿನ ತಾಂಡವಪುರದ ಮಹಾರಾಜ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಮಾ.6, 7 ರಂದು ಅಂತರ ಕಾಲೇಜುಗಳ ಡಿಪ್ಲೋಮಾ ಹಾಗೂ ಸಿವಿಲ್ ಇಂಜಿನಿಯರ್ ವಿಭಾಗದ ವಿದ್ಯಾರ್ಥಿಗಳಿಗಾಗಿ ಪುನೀತ್ ರಾಜ್‌ಕುಮಾರ್ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಸಂಸ್ಥೆ ಜಂಟಿ ಕಾರ್ಯದರ್ಶಿ ಡಾ.ಹೆಚ್.ಕೆ.ಚೇತನ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.6ರಂದು ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಪಂದ್ಯಾವಳಿ ಉದ್ಘಾಟಿಸಲಿದ್ದಾರೆ. ಪಂದ್ಯಾವಳಿಯಲ್ಲಿ ವಿಜೇತರಾದ ತಂಡಗಳಿಗೆ ಒಟ್ಟು 1.5 ಲಕ್ಷ ಮೊತ್ತದ ಬಹುಮಾನ ವಿತರಿಸಲಾಗುವುದು. ಈ ವೇಳೆ ಸಂಸ್ಥೆ ಉಪಾಧ್ಯಕ್ಷ ಪ್ರೊ.ಜಿ.ಹೇಮಂತ್ ಕುಮಾರ್, ಪ್ರಾಂಶುಪಾಲ ಡಾ.ವೈ.ಟಿ. ಕೃಷ್ಣೇಗೌಡ, ರಿಷಿ ಫ್ಯಾಬ್ರಿಕೇಶನ್ ವ್ಯವಸ್ಥಾಪಕ ಜ್ಯೋತಿ ಬಸಿಲ್ ಹಾಗೂ ನಂಜುಂಡೇಶ್ವರ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಪ್ರೊ.ಬಿ.ಸಿ. ನಾಗೇಂದ್ರ ಪ್ರಸಾದ್, ಪ್ರೊ.ಸಲಾಮತ್, ಪಿ.ಗಣೇಶ್ ಉಪಸ್ಥಿತರಿದ್ದರು.



ಮಾ.9, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಕೆ.ಆರ್.ನಗರ, ಮಾ.5– ಪಟ್ಟಣದ ಸ್ಮಾರ್ಟ್ ಲೇಡಿಸ್ ಕ್ಲಬ್ ವತಿಯಿಂದ ಇಲ್ಲಿನ ಪುರಸಭೆ ಬಯಲು ರಂಗ ಮಂದಿರದ ಆವರಣದಲ್ಲಿ ಮಾ.9ರಂದು ಭಾನುವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಂದು ಮಧ್ಯಾಹ್ನ 3 ಗಂಟೆಗೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಡಿ.ರವಿಶಂಕರ್ ವಹಿಸಲಿದ್ದು, ರಾಜ್ಯ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷ ಸೌಮ್ಯರೆಡ್ಡಿ ಕಾರ್ಯಕ್ರಮ ಉದ್ಘಾಟಿಸುವರು. ಈ ವೇಳೆ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡ ಸ್ವಾಮೇಗೌಡರ ಪತ್ನಿ ವನಜಾಕ್ಷಮ್ಮ ಮತ್ತು ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯಸ್ಥೆ ಅಮೃತಕ್ಕ ಅವರನ್ನು ಸನ್ಮಾನಿಸಲಾಗುತ್ತದೆ. ಮುಖ್ಯ ಅತಿಥಿಗಳಾಗಿ ಪುರಸಭೆ ಅಧ್ಯಕ್ಷ ಶಿವುನಾಯಕ್, ಉಪಾಧ್ಯಕ್ಷೆ ವಸಂತಮ್ಮ, ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ಮೈಸೂರು ಒಡಿಪಿ ಸಂಸ್ಥೆ ನಿರ್ದೇಶಕರಾದ ಫಾದರ್ ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಸ್ಮಾರ್ಟ್ ಲೇಡಿಸ್ ಕ್ಲಬ್ ಅಧ್ಯಕ್ಷೆ ಸಿ.ಎಸ್. ಸ್ಮಿತಾ, ಉಪಾಧ್ಯಕ್ಷೆ ಕೆ.ಬಿ.ಸುನೀತ, ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಲತಾ, ರಾಣಿ ಮತ್ತಿತರರು ಭಾಗಹಿಸುವರು.

ಮಾ.8, ಶ್ರೀಶನೇಶ್ವರಸ್ವಾಮಿ 10ನೇ ವಾರ್ಷಿಕೋತ್ಸವ

ಹುಣಸೂರು, ಮಾ.5– ನಗರದ ಕಲ್ಕುಣಿಕೆ ರಂಗನಾಥ ಬಡಾವಣೆಯಲ್ಲಿ ಶ್ರೀಶನೇಶ್ವರಸ್ವಾಮಿಯವರ 10ನೇ ವಾರ್ಷಿಕೋತ್ಸವ ಮಾ.8 ರಂದು ನಡೆಯಲಿದೆ ಎಂದು ಶ್ರೀಶನೇಶ್ವರ ಸೇವಾ ಸಮಿತಿ ಅಧ್ಯಕ್ಷೆ ಕಲಾವತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂದು ಬೆಳಗ್ಗೆ 5.30ಕ್ಕೆ ಪೂಜಾ ಕೈಂಕರ್ಯ ಆರಂಭಗೊಳ್ಳಲಿದ್ದು, 6 ಗಂಟೆಗೆ ಶನಿ ಶಾಂತಿ ಹೋಮ, 8.30ಕ್ಕೆ ಉತ್ಸವ ಮೂರ್ತಿ ಮೆರವಣಿಗೆ, 11 ಗಂಟೆಗೆ ಕಲಶಾಭಿಷೇಕ ನಂತರ ಮಹಾಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಮನವಿ ಮಾಡಿದರು.

ಬೆಳಗ್ಗೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 9 ಗಂಟೆಗೆ ಶ್ರೀನಿವಾಸ್ ಮ್ಯೂಜಿಕ್ ತಂಡದವರಿಂದ ಭಕ್ತಿಗೀತೆಗಳು, 11 ಗಂಟೆಗೆ ಜೀ ಟಿವಿ ಸರಿಗಮಪ ಖ್ಯಾತಿಯ ದೇವಾನಂದ ವರಪ್ರಸಾದ್ ಮತ್ತು ತಂಡದವರಿಂದ ಜನಪದಗೀತೆ ಹಾಡುಗಾರಿಕೆ ಹಾಗೂ ಹುಣಸೂರಿನ ಕುಮಾರಿ ಇಂಚರ ಅವರಿಂದ ಭರತನಾಟ್ಯ ನಡೆಯಲಿದೆ. ಅಂದು ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್, ಎಂಎಲ್‌ಸಿ ಹೆಚ್.ವಿಶ್ವನಾಥ್ ಗಾವಡಗೆರೆ ಮಠದ ಶ್ರೀನಟರಾಜಸ್ವಾಮಿ, ಮಾದಳ್ಳಿ ಮಠದ ಶ್ರೀಸದಾಶಿವಸಾಂಬಸ್ವಾಮಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ನಮ್ಮ ತಂಡದ ಸದಸ್ಯರೆಲ್ಲರೂ ಜಯಗಳಿಸಲಿದ್ದಾರೆ

ಮಾಜಿ ಅಧ್ಯಕ್ಷ ಹೆಳವರಹುಂಡಿ ಪಿ.ನಟರಾಜು ವಿಶ್ವಾಸ

ತಿ.ನರಸೀಪುರ, ಮಾ.5– ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆ ಚುನಾವಣೆಯಲ್ಲಿ ನಮ್ಮ ತಂಡದ ಸದಸ್ಯರೆಲ್ಲರೂ ಜಯ ಗಳಿಸಲಿದ್ದಾರೆ ಎಂದು ಮಾಜಿ ಅಧ್ಯಕ್ಷ ಹೆಳವರಹುಂಡಿ ಪಿ.ನಟರಾಜು ವಿಶ್ವಾಸ ವ್ಯಕ್ತಪಡಿಸಿದರು.

ಮಾ.8ರಂದು ಸಹಕಾರ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ತಮ್ಮ ನೇತೃತ್ವದಲ್ಲಿ ನಿರ್ದೇಶಕರ ಸ್ಥಾನ ಸ್ಪರ್ಧಿಸಿರುವ ಅಭ್ಯರ್ಥಿಗಳೊಂದಿಗೆ ತಾಲೂಕಿನ ಹೆಳವರಹುಂಡಿ ಹಾಗೂ ಮುದ್ದುಬೀರನಹುಂಡಿ ಗ್ರಾಮದಲ್ಲಿ ಮತದಾರರ ಮನೆ ಮನೆಗೆ ತೆರಳಿ ಮತಯಾಚಿಸಿ ಅವರು ಮಾತನಾಡಿದರು.

ಆಲಗೂಡು ಸಹಕಾರ ಸಂಘದಲ್ಲಿ ಕಳೆದ 20 ವರ್ಷಗಳಿಂದಲೂ ಅಭಿವೃದ್ಧಿ ಕೆಲಸ ಮಾಡುತ್ತಾ ಬಂದಿದ್ದೇವೆ. ರೈತಪರ ಕೆಲಸಗಳಿಗೆ ಮೊದಲ ಆದ್ಯತೆ ನೀಡಿ ಅನುಕೂಲ ಕಲ್ಪಿಸಿಕೊಟ್ಟಿದ್ದೇವೆ. ಎಲ್ಲಾ ಷೇರುದಾರರನ್ನು ಸರಿ ಸಮಾನವಾಗಿ ಕಂಡು ಅವರಿಗೆ ತಲುಪಬೇಕಾದ ಸವಲತ್ತುಗಳು ಹಾಗೂ ಸಾಲ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ನೀಡಿದ್ದೇವೆ. ಹಾಗಾಗಿ ರೈತರೊಂದಿಗೆ ನಾವು ಮೊದಲಿನಿಂದಲೂ ನಿಕಟ ಸಂಪರ್ಕ ಹೊಂದಿದ್ದೇವೆ. ಪ್ರಸಕ್ತ ಚುನಾವಣೆಯಲ್ಲಿ ಮತದಾರರು ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಮನ್ನಣೆ ನೀಡಿ ನಮಗೆ ಗೆಲುವು ತಂದುಕೊಡಲಿದ್ದು, ಸಾಲಗಾರರ ಕ್ಷೇತ್ರದಿಂದ ಸ್ಪರ್ಧಿಸಿರುವ 10 ಮಂದಿ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಸ್ಪರ್ಧಿಸಿರುವ ಒಬ್ಬರು ಸೇರಿದಂತೆ 11 ಮಂದಿಯೂ ಗೆಲುವು ಸಾಧಿಸಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ನಟರಾಜು ಬಣದ ಸದಸ್ಯರು ಮತಯಾಚಿಸಿದರು.

ನಿಶ್ಚಿತ ಠೇವಣಿ ಅಡಮಾನ ಇಟ್ಟು ಬಿಲ್ಡಿಂಗ್ ಕಟ್ಟಿದ್ದಾರೆ: ಚುನಾವಣೆಗೆ ಸ್ಪರ್ಧಿಸಿರುವ ಮಾಜಿ ಅಧ್ಯಕ್ಷರು ನಾನೇ ಸಹಕಾರ ಸಂಘದ ಬಿಲ್ಡಿಂಗ್ ಕಟ್ಟಿದೆ ಎಂದು ಹೇಳಿಕೆ ನೀಡುತ್ತಿದ್ದಾರೆ. ಆದರೆ ನಾನು ಅಧ್ಯಕ್ಷನಾಗಿದ್ದ ವೇಳೆ ಬ್ಯಾಂಕ್‌ನಲ್ಲಿ 80 ಲಕ್ಷ ರೂ.ಗಳ ಡಿಪಾಸಿಟ್ ಇಟ್ಟಿದ್ದೆ. ಆ ಹಣವನ್ನು ಬ್ಯಾಂಕ್‌ಗೆ ಅಡಮಾನ ಮಾಡಿ ಸಾಲ ತಂದು ಬಿಲ್ಡಿಂಗ್ ಕಟ್ಟಿದ್ದಾರೆಯೇ ಹೊರತು ಸರ್ಕಾರದ ಸಹಾಯಧನದಿಂದ ಕಟ್ಟಡ ಕಟ್ಟಿಲ್ಲ ಎಂದು ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ಹೇಳಿಕೆಗೆ ಟಾಂಗ್ ನೀಡಿದರು.

ತಾಪಂ ಮಾಜಿ ಸದಸ್ಯ ಎಂ.ರಮೇಶ್ ಮಾತನಾಡಿ ಆಲಗೂಡು ಸಹಕಾರ ಸಂಘವನ್ನು ಅಭಿವೃದ್ಧಿಪಡಿಸಬೇಕೆಂಬ ಪಣತೊಟ್ಟು ಬಿ.ನಟರಾಜು ತಂಡದಿಂದ ಉತ್ಸಾಹಿ ಯುವಕರು ಚುನಾವಣೆಗೆ ಸ್ಪರ್ಧಿಸಿದ್ದಾರೆ. ಕಳೆದ ಬಾರಿ ಇದ್ದ ಆಡಳಿತ ಮಂಡಳಿಗಿಂತ ಇವರು ರೈತರೊಂದಿಗೆ ಉತ್ತಮ ಭಾಂಧವ್ಯ ಹೊಂದಿದ್ದು, ತಂಡದ ಸದಸ್ಯರು ಗೆಲುವು ಸಾಧಿಸಬೇಕಿದೆ ಎಂದರು.

ಈ ವೇಳೆ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳಾದ ಕಾಂತಮ್ಮ, ಜಯಣ್ಣ, ನಾಗಪ್ಪ, ಹೆಚ್.ಮರಿಸ್ವಾಮಿ, ಮಹದೇವ, ಮಹದೇವಮ್ಮ, ಶಿವಣ್ಣ, ಕೆ.ಎಂ.ಶಿವಮೂರ್ತಿ, ಎಂ.ಶೇಖರಪ್ಪ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಸ್ಪರ್ಧಿಸಿರುವ ಎಂ.ಕೆ.ಸಹದೇವ, ಮುಖಂಡರಾದ ಅಮಾಸೇಗೌಡ, ಮಂಜುನಾಥ್, ಅರುಣ್‌ಗೌಡ, ಕುಮಾರ್, ಶಿವಮಲ್ಲು, ರಮೇಶ್, ಬುದ್ದಿವಂತ, ರಾಜು ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಮಿತ್ರ

ಕ್ಯಾತಮಾರನಹಳ್ಳಿ ಹುಲಿಯಮ್ಮ ದೇವಿ ಜಾತ್ರೆಯಲ್ಲಿ
ಸಂಭ್ರಮ–ಸಡಗರದ ಬೆಲ್ಲದ ಆರತಿ

ಮೈಸೂರು, ಮಾ.5(ಎಂಕೆ)– ಗ್ರಾಮೀಣ ಸೊಗಡಿನ ಪಾರಂಪರಿಕ ಸಂಸ್ಕೃತಿಯ ಪ್ರತೀಕವಾಗಿರುವ ಮೈಸೂರಿನ ಕ್ಯಾತಮಾರನಹಳ್ಳಿ ಹುಲಿಯಮ್ಮ ದೇವಿ ಜಾತ್ರಾ ಮಹೋತ್ಸವದ ಮೂರನೇ ದಿನ ಮರಿ ಸೋಳ್ಳು(ಬೆಲ್ಲದ ಆರತಿ) ಸಂಭ್ರಮ–ಸಡಗರದಿಂದ ನೆರವೇರಿತು.

ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಗ್ರಾಮದ ಪ್ರತಿ ಮನೆಯ ಪುಟ್ಟ ಹೆಣ್ಣು ಮಕ್ಕಳು ಹೊಸ ಹೊಸ ಉಡುಗೆ ತೊಡುಗೆ ತೊಟ್ಟು ಬೆಲ್ಲವನ್ನು ತಟ್ಟೆಯಲ್ಲಿಟ್ಟು ಅದರ ಕುಳಿಯಲ್ಲಿ ದೀಪ ಹಚ್ಚಿ ತಲೆಯ ಮೇಲೆ ಹೊತ್ತು ದೇವಸ್ಥಾನದವರೆಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ನಂತರ ದೇವಿಗೆ ಪೂಜೆ ಸಲ್ಲಿಸಿ, ಬೆಲ್ಲವನ್ನು ದೇವಾಲಯದ ಬಾಗಿಲಿನಿಂದ ಭಕ್ತರ ಕಡೆ ಎಸೆಯಲಾಯಿತು. ಎಸೆದ ಬೆಲ್ಲದ ಚೂರು ಸಿಕ್ಕವರು ದೇವಿಯ ಪ್ರಸಾದ ಸಿಕ್ಕಿತೆಂದು ಸಂಭ್ರಮಿಸಿದರಲ್ಲದೆ ಪ್ರಸಾದವನ್ನು ತಮ್ಮ ತಮ್ಮ ಮನೆಗೆ ಕೊಂಡೊಯ್ದರು.

ಅಪಾರ ಭಕ್ತ ಸಮೂಹದ ನಡುವೆ ಜರುಗಿದ ಬೆಲ್ಲದ ಆರತಿಯ ಮೆರವಣಿಗೆ ಕಣ್ಮನ ಸೆಳೆಯುವಂತಿತ್ತು. ದೇವಸ್ಥಾನದ ಆವರಣದಲ್ಲಿ ತುಂಬಿ ತುಳುಕುತ್ತಿದ್ದ ಭಕ್ತ ಸಮೂಹದ ನಡುವೆ ಯುವಕರು ಕುಣಿದು ಕುಪ್ಪಳಿಸಿದರು. ಹುಲಿಯಮ್ಮ ದೇವಿಗೆ ಜೈಕಾರ ಕೂಗುತ್ತಾ ಭಕ್ತಿ ಸುಧೆ ಹರಿಸಿದರು. ಮೆರವಣಿಗೆಯಲ್ಲಿ ತಮಟೆ ಸದ್ದು ಮಾರ್ದನಿಸಿದರೆ, ಜೈಕಾರ ಘೋಷಣೆ ಮುಗಿಲು ಮುಟ್ಟಿತ್ತು.



ಕ್ಯಾತಮಾರನಹಳ್ಳಿ ಹುಲಿಯಮ್ಮ ದೇವಸ್ಥಾನದ ಎದುರು ಬುಧವಾರ ನೆರೆದಿದ್ದ ಭಕ್ತ ಸಮೂಹವನ್ನು ಕಾಣಬಹುದು

ಕರಕಲು ಸಂಪ್ರದಾಯ: ರಾತ್ರಿ 9 ಗಂಟೆ ಸುಮಾರಿಗೆ ಗ್ರಾಮ ದೇವತೆ ಹುಲಿಯಮ್ಮನ ದೇವಸ್ಥಾನದ ಆವರಣದಲ್ಲಿ ಕರಕಲು (ಬೆಂಕಿಹಾಕುವ) ಹಾಕುವ ಸಂಪ್ರದಾಯ ನಡೆಯಿತು. ಸುಮಾರು 10–15 ಅಡಿ ಎತ್ತರದವರೆಗೆ ಹೊತ್ತಿ ಉರಿದ ಕರಕಲು ಬೆಳಕಿನಲ್ಲಿ ಭಕ್ತಾದಿಗಳು ಇಷ್ಟಾರ್ಥ ಸಿದ್ಧಿಗಾಗಿ ದೇವಿಗೆ ಪ್ರಾರ್ಥನೆ ಸಲ್ಲಿಸಿದರು.

ನಿಶಾನೆ ಮರಕ್ಕೆ ಪೂಜೆ: ಇಂದು(ಮಾ.6) ಮಧ್ಯಾಹ್ನದ ವೇಳೆಗೆ ಜಾತ್ರಾ ಮಹೋತ್ಸವಕ್ಕೆ ಮಧುವನದಿಂದ ತಂದಿದ್ದ ಅಡಿಕೆ ಮರಕ್ಕೆ (ಈ ಮರವನ್ನು ಸಂಪ್ರದಾಯದಂತೆ ನಿಶಾನಿ ಮರ ಎಂತಲೇ ಕರೆಯುತ್ತಾರೆ) ವಿಶೇಷ ಪೂಜೆ ಸಲ್ಲಿಸಿ, ಸುಣ್ಣ ಬಣ್ಣ ಬಳಿದು ದೇವಾಲಯದ ಮುಂಭಾಗದಲ್ಲಿ ನೆಟ್ಟಗೆ ನಿಲ್ಲಿಸುತ್ತಾರೆ. ಕಂಬಕ್ಕೆ ವಿಶೇಷ ದೀಪಾಲಂಕಾರವನ್ನು ಮಾಡಲಾಗುವುದು.

ಗ್ರಾಮ ದೇವತೆ ಹುಲಿಯಮ್ಮನ ಜಾತ್ರೆಯಲ್ಲಿ ಈ ಬೆಲ್ಲದ ಆರತಿ ಕಾರ್ಯಕ್ರಮದಲ್ಲಿ ನಿರೀಕ್ಷೆಗಿಂತಲೂ ಹೆಚ್ಚಿನ ಜನ ಬೆಳಗ್ಗೆಯಿಂದಲೂ ದೇವಸ್ಥಾನಕ್ಕೆ ಭೇಟಿ ನೀಡುತ್ತಿದ್ದಾರೆ. ಬೆಲ್ಲದ ಆರತಿ ವಿಶೇಷ ಪೂಜೆ ಹಾಗೂ ಹುಲಿಯಮ್ಮನ ದೇವಿಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆದಿದೆ ಎಂದು ಗ್ರಾಮದ ಮುಖಂಡರಾದ ಹಾಲಿನ ನಾರಾಯಣ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಹಿಳೆಯರ ರಸಪ್ರಶ್ನೆಯಲ್ಲಿ ಮಂಜುಳಾ ಸಿಂಹ, ಲೀಲಾವತಿ ತಂಡ ಪ್ರಥಮ



ವಾಣಿ ವಿಲಾಸ್ ಲೇಡೀಸ್ ಕ್ಲಬ್‌ನಲ್ಲಿ ಮಹಿಳೆಯರಿಗಾಗಿ ರಸಪ್ರಶ್ನೆ ಸ್ಪರ್ಧೆ ನಡೆಯಿತು.

ಮೈಸೂರು, ಮಾ.5(ಎಂಕೆ)– ಮೈಸೂರು ಓದುಗರ ಒಕ್ಕೂಟ ಹಾಗೂ ವಾಣಿ ವಿಲಾಸ್ ಲೇಡೀಸ್ ಕ್ಲಬ್‌ನ ವತಿಯಿಂದ ಮಹಿಳೆಯರಿಗಾಗಿ ರಸಪ್ರಶ್ನೆ ಸ್ಪರ್ಧೆ ನಡೆಯಿತು.

ನಾಲ್ಕು ಸುತ್ತುಗಳಲ್ಲಿ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ನಂಜನಗೂಡು, ಪಿರಿಯಾಪಟ್ಟಣ, ಬೆಂಗಳೂರು, ಚಿಕ್ಕಮಗಳೂರು ಸೇರಿದಂತೆ ರಾಜ್ಯ ಹಲವೆಡೆಯಿಂದ 38 ಮಹಿಳಾ ತಂಡಗಳು ಭಾಗವಹಿಸಿದ್ದವು. ಮೊದಲು ಲಿಖಿತ ಸುತ್ತಿನೊಂದಿಗೆ ಆರಂಭವಾದ ರಸಪ್ರಶ್ನೆ ಸ್ಪರ್ಧೆಯು, ಮೂರು ಸುತ್ತುಗಳು ಮೌಖಿಕವಾಗಿ ನಡೆಯಿತು.

ಕಠಿಣ ಪ್ರಶ್ನೆಗಳಿಂದ ಕೂಡಿದ್ದ ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಪ್ರಬಲ ಪೈಪೋಟಿ ನಡೆಸಿದ 6 ತಂಡಗಳ ಪೈಕಿ ಎ.ಜಿ.ಮಂಜುಳಾ ಸಿಂಹ ಮತ್ತು ಬಿ.ಹೆಚ್.ಲೀಲಾವತಿ ತಂಡ ಪ್ರಥಮ ಬಹುಮಾನ ಪಡೆದರೆ, ಬಿ.ಆರ್.ನಾಗರತ್ನ ಮತ್ತು ಗಿರಿಜಾ ಸಿದ್ಧಪ್ಪಾಜಿ ಅವರ ತಂಡ ದ್ವಿತೀಯ ಹಾಗೂ ಇಂದ್ರಾಣಿ ಮತ್ತು ಸುಚಿತ್ರಾ ಹೆಗಡೆ ಅವರ ತಂಡ ತೃತೀಯ ಬಹು ಮಾನ ಪಡೆಯಿತು. ಹಾಗೆಯೇ ಭಾರ್ಗವಿ ಮತ್ತು ಮನಸ್ವಿನಿ, ಗೀತಾ ಶ್ರೀಹರಿ ಮತ್ತು ಸಿ.ಆರ್.ವಿಜಯಲಕ್ಷ್ಮಿ, ನಾಗರತ್ನ ಗೋಪಿನಾಥ್ ಮತ್ತು ನಿವೇದಿತಾ ವೇಣುಗೋಪಾಲ್ ತಂಡ ಸಮಾಧಾನಕರ ಬಹುಮಾನ ಪಡೆಯಿತು. ಪ್ರಸನ್ನ ಕುಮಾರಿ, ತುಳಸೀ ವಿಜಯ ಕುಮಾರಿ, ಕಲ್ಪನಾ ಚಂದ್ರಶೇಖರ್ ಮತ್ತು ಹೆಚ್.ನಿವೇದಿತಾ, ಡಾ.ಪಾಮೆಲಾ ಸನತ್ ನಿಕ್ಕಂ ಹಾಗೂ ಉದ್ಯಮಿ ಪಲ್ಲವಿ ಅರುಣ್ ತೀರ್ಪುಗಾರರಾಗಿದ್ದರು. ರಸ ಪ್ರಶ್ನೆ ಸ್ಪರ್ಧೆ ಉದ್ಘಾಟಿಸಿ ಮೈಸೂರು ಬುಕ್ ಕ್ಲಬ್ಸ್ ಸಂಸ್ಥಾಪಕಿ ಹಾಗೂ ಉದ್ಯಮಿ ಶುಭಾ ಸಂಜಯ್ ಅರಸ್ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ಸಾಧಕರಾಗುತ್ತಿದ್ದು, ಸ್ಪರ್ಧಾತ್ಮಕ ಯುಗದಲ್ಲಿ ಜ್ಞಾನದ ವೃದ್ಧಿಗೆ ಹೆಚ್ಚಿನ ಗಮನ ಹರಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರತಿನಿತ್ಯ ದಿನ ಪತ್ರಿಕೆಗಳು, ಪುಸ್ತಕಗಳನ್ನು ಓದಬೇಕು. ನಿರಂತರ ಓದಿನಿಂದ ಜ್ಞಾನ ವೃದ್ಧಿಯ ಜೊತೆಗೆ ಮಾನಸಿಕ ಆರೋಗ್ಯವೂ ಲಭಿಸುತ್ತದೆ ಎಂದು ಸಲಹೆ ನೀಡಿದರು. ವಾಣಿ ವಿಲಾಸ್ ಲೇಡೀಸ್ ಕ್ಲಬ್‌ನ ಕಾರ್ಯಕಾರಿ ಸಮಿತಿಯ ಪ್ರೇಮಾ ಡಿ ಸಿಲ್ವಾ, ಖಜಾಂಚಿ ವಿನಯ ಪ್ರಭಾವತಿ, ಶರ್ಲಿ ಮುದ್ದಪ್ಪ, ವಸಂತಮ್ಮ, ಮಾಲಿನಿ, ಶೈಲಾ ಶಂಕರ್ ವಿಜೇತರಿಗೆ ಬಹುಮಾನಗಳನ್ನು ನೀಡಿ ಅಭಿನಂದಿಸಿದರು.

ಮಾ.9ಕ್ಕೆ ನಮ್ಮ ನಡೆ, ನಮ್ಮ ಪೊಲೀಸ್ ಜಾಗೃತಿ ಓಟ

ಮೈಸೂರು, ಮಾ.5(ಎಂಕೆ)– ಕರ್ನಾಟಕ ರಾಜ್ಯ ಪೊಲೀಸ್ ವತಿಯಿಂದ 'ನಮ್ಮ ನಡೆ ನಮ್ಮ ಪೊಲೀಸ್' ಪರಿಕಲ್ಪನೆಯಲ್ಲಿ ಮಾ.9ರಂದು ಬೆಳಗ್ಗೆ 5.30 ಗಂಟೆಗೆ ಮೈಸೂರು ನಗರದ ಅರಮನೆ ಆವರಣದಿಂದ ಜಾಗೃತಿ ಓಟ ಹಾಗೂ ಕಾಲ್ನಡಿಗೆ ಆಯೋಜಿಸಲಾಗಿದೆ.

ವ್ಯಾಯಮದಿಂದ ಎಲ್ಲರಿಗೂ ದೈಹಿಕ ಸಾಮರ್ಥ್ಯದ ಅರಿವು, ಸೈಬರ್ ಅಪರಾಧಗಳು, ಮಾದಕ ದ್ರವ್ಯ ಮುಕ್ತ ಸಮಾಜ ಹಾಗೂ ಸಾರ್ವಜನಿಕರ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು 5ಕೆ ಮತ್ತು 10ಕೆ ಓಟ ಹಾಗೂ ನಡಿಗೆ ಇರಲಿದ್ದು, ಪ್ರವೇಶ ಉಚಿತವಾಗಿರಲಿದೆ. ಸಾರ್ವಜನಿಕರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಕಡ್ಡಾಯವಾಗಿ ತಮ್ಮ ಹೆಸರು ನೊಂದಣಿ ಮಾಡಿಕೊಂಡು ಮೈಸೂರು ನಗರ ಪೊಲೀಸರೊಂದಿಗೆ ಕೈಜೋಡಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಸಂವಾದ

ಮೈಸೂರು, ಮಾ.5(ಎಸ್‌ಪಿಎನ್)– ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿಗಳಲ್ಲೊಂದಾದ ಗೃಹ ಜ್ಯೋತಿ ಜಾರಿಯಿಂದಾಗಿ ವಿದ್ಯುತ್ ಪೂರೈಕೆಯಲ್ಲಿ ಆಗುತ್ತಿರುವ ಸಮಸ್ಯೆಗಳ ಕುರಿತು ಮೈಗ್ರಾಪದಲ್ಲಿ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕ ಪರಿಷತ್ ಕಚೇರಿ ಆವರಣದಲ್ಲಿ ಮಾ.9 ರಂದು ಸಂಜೆ 4 ಗಂಟೆಗೆ ಹಮ್ಮಿಕೊಂಡಿರುವ ಸಂವಾದದಲ್ಲಿ ಸೆಸ್ಕಾಂನ ಅಧಿಕಾರಿಗಳು ಹಾಗೂ ನಿವೃತ್ತ ಸೆಸ್ಕಾಂ ಅಧಿಕಾರಿ ಸುನಿಲ್ ಕುಮಾರ್ ಹಾಗೂ ಎಸ್.ಎಂ.ಸುರೇಶ್ ಭಾಗವಹಿಸಲಿದ್ದಾರೆ.

ಈ ಸಭೆಯಲ್ಲಿ ಗೃಹಜ್ಯೋತಿ ಜಾರಿಯಿಂದ ವಿದ್ಯುತ್ ಪೂರೈಕೆಯ ವೋಲ್ಟೇಜ್‌ನಲ್ಲಿ ಏರಿಳಿತ, ಆಗಾಗ ವಿದ್ಯುತ್ ಪೂರೈಕೆ ಸ್ಥಗಿತ ಸೇರಿದಂತೆ ಇತರೆ ಇಂಧನ ಇಲಾಖೆಯ ಸಮಸ್ಯೆ ಕುರಿತು ಚರ್ಚಿಸಲಾಗುವುದು. ಈ ಕುರಿತು ಹೆಚ್ಚಿನ ವಿವರಗಳಿದ್ದಲ್ಲಿ mygrapa@gmail.com. ಈ–ಮೇಲ್‌ಗೆ ಕಳುಹಿಸುವಂತೆ ತಿಳಿಸಿದೆ.

ಇಂದಿನಿಂದ ಜ್ಞಾನಧ್ವನಿ ಎಫ್‌ಎಂ 90.8ನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬಾನುಲಿ ಪಾಠ

ಮೈಸೂರು, ಮಾ.5(ಎಸ್‌ಪಿಎನ್)– ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರತಿ ದಿನ ಎರಡು ವಿಷಯಗಳಂತೆ ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಬೋಧನೆಯನ್ನು ಮಾ.6ರಿಂದ ಮಾ.8ರವರೆಗೆ ಮೈಸೂರು ಶಾಲಾ ಶಿಕ್ಷಣ ಇಲಾಖೆಯ ದಕ್ಷಿಣ ವಲಯದ ಬಿಇಓ ಕಚೇರಿ ಹಾಗೂ ಮೈಸೂರು ಜ್ಞಾನಧ್ವನಿ ಎಫ್‌ಎಂ 90.8 ಸಮುದಾಯ ಬಾನುಲಿ ಕೇಂದ್ರ ಸಹಯೋಗದೊಂದಿಗೆ ಆಯೋಜಿಸಲಾಗಿದೆ.

ವೇಳಾಪಟ್ಟಿ: ಮಾ.6ರಂದು ಬೆಳಗ್ಗೆ 11.30ರಿಂದ ಮಧ್ಯಾಹ್ನ 12.30ರವರೆಗೆ ಕನ್ನಡ, ಅಪರಾಹ್ನ 2ರಿಂದ 3ರವರೆಗೆ ಸಮಾಜ ವಿಜ್ಞಾನ, ಮಾ.7ರಂದು ಬೆಳಗ್ಗೆ 11.30ರಿಂದ ಮಧ್ಯಾಹ್ನ 12.30ರವರೆಗೆ ವಿಜ್ಞಾನ, ಅಪರಾಹ್ನ 2ರಿಂದ 3ರವರೆಗೆ ಹಿಂದಿ, ಮಾ.8ರಂದು ಬೆಳಗ್ಗೆ 11.30ರಿಂದ ಮಧ್ಯಾಹ್ನ 12.30ರವರೆಗೆ ಗಣಿತ, ಅಪರಾಹ್ನ 2ರಿಂದ 3ರವರೆಗೆ ಇಂಗ್ಲಿಷ್, ಮಾ.10ರಂದು ಬೆಳಗ್ಗೆ 11.30ರಿಂದ ಮಧ್ಯಾಹ್ನ 12.30ರವರೆಗೆ ಪ್ರಥಮ ಭಾಷೆ ಸಂಸ್ಕೃತ, ಅಪರಾಹ್ನ 2ರಿಂದ 3ರವರೆಗೆ ತೃತೀಯ ಭಾಷೆ ಕನ್ನಡ ನಡೆಯಲಿದೆ.

ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರೌಢಶಾಲೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನೀಡಿರುವ ವೇಳಾಪಟ್ಟಿಯಂತೆ ಪ್ರತಿದಿನ ರೇಡಿಯೋ ಕಾರ್ಯಕ್ರಮವನ್ನು ಮಕ್ಕಳಿಗೆ ಕೇಳಿಸಿ, ಸಂಬಂಧಪಟ್ಟ ವಿಷಯಗಳ ಕಿರು ಟಿಪ್ಪಣಿ ಮಾಡಿಸುವಂತೆ ಬಿಇಓ ಸಿ.ಎನ್.ರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪರೀಕ್ಷಾ ದೃಷ್ಟಿಯಿಂದ ಪರೀಕ್ಷೆ ಎದುರಿಸುವ, ಸಿದ್ಧತೆಗೊಳ್ಳುವ ಮತ್ತು ಬರೆಯುವ ಸಮಯ ನಿರ್ವಹಣೆ ಹಾಗೂ ಕ್ಲಿಷ್ಟ ವಿಷಯಗಳ ಸಮಸ್ಯೆಗಳನ್ನು ಪರಿಹರಿಸುವ ಕುರಿತು ರೇಡಿಯೋ ವೇಳಾಪಟ್ಟಿಯಲ್ಲಿ ಸಂಪನ್ಮೂಲ ವ್ಯಕ್ತಿಗಳು ತಿಳಿಸಿಕೊಡಲಿದ್ದಾರೆ.

ಈ ವಿಚಾರವಾಗಿ ರೇಡಿಯೋ ಬಾನುಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಕಡ್ಡಾಯವಾಗಿ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಬಾನುಲಿ ಕಾರ್ಯಕ್ರಮವನ್ನು ಆಲಿಸುವಂತೆ ದಕ್ಷಿಣ ವಲಯದ ಎಲ್ಲಾ ಪೌಢಶಾಲಾ ಶಿಕ್ಷಕರಿಗೆ ಸೂಚಿಸಿದ್ದಾರೆ. ಮಾ.9ರಂದು ಬೆಳಗ್ಗೆ 10ಕ್ಕೆ ದಕ್ಷಿಣ ವಲಯ ಬಿಇಓ ಕಚೇರಿಯಲ್ಲಿ ಪೋನ್ ಇನ್ ಕಾರ್ಯಕ್ರಮ ಆಯೋಜಿಸಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸುತ್ತಿರುವ ವಿದ್ಯಾರ್ಥಿಗಳು ಪರೀಕ್ಷೆಗೆ ಸಂಬಂಧ ಯಾವುದೇ ಸಮಸ್ಯೆಗಳಿದ್ದಲ್ಲಿ ಮೊ. ಸಂ: 9480695306, 9480695315, 9448999349 ಅನ್ನು ಸಂಪರ್ಕಿಸಬಹುದು.

> **"ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆ ಉತ್ತಮ ಸ್ಥಾನಗಳಿಸುವ ಸಂಬಂಧ ಎಲ್ಲಾ ತಾಲೂಕು ಬಿಇಓ ಕಚೇರಿಗಳಲ್ಲಿ ಸಹಾಯವಾಣಿ ಕೇಂದ್ರ ತೆರೆದು ಪರೀಕ್ಷಾ ಸಂಬಂಧ ವಿದ್ಯಾರ್ಥಿಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುವುದು.** – ಜವರೇಗೌಡ, ಡಿಡಿಪಿಐ(ಆಡಳಿತ)

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಶಭಾಷ್ ಬಡ್ಡಿಮಗ್ನೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
1990's (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಅಪಾಯವಿದೆ ಎಚ್ಚರಿಕೆ + FIR (ಕ)	2+2 ಪ್ರದರ್ಶನಗಳು
ಲಿಡೋ	
1990's (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
FOREST (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ



ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರುಗಳಿಗೆ ಸರ್ಕಾರದಿಂದ ಆಯೋಜಿಸಿರುವ ಆರೋಗ್ಯ ತಪಾಸಣೆಯ ಕಾರ್ಯಕ್ರಮವನ್ನು ಬುಧವಾರ ಉದ್ಘಾಟಿಸಲಾಯಿತು. ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಡಾ. ಸೇಕ್ ತನ್ವೀರ್ ಆಸೀಫ್, ಪಾಲಿಕೆಯ ಮುಖ್ಯ ಆರೋಗ್ಯಾಧಿಕಾರಿ ಡಾ. ಎನ್.ಪಿ. ವೆಂಕಟೇಶ್, ಡಾ.ಎನ್.ವಿಜಯ್ ಚೆಲುವರಾಜ್ ವೈದ್ಯಕೀಯ ನಿರ್ದೇಶಕರು, ಭಾನವಿ ಆಸ್ಪತ್ರೆ ಮೈಸೂರು, ಪಾಲಿಕೆಯ ಅಧಿಕಾರಿಗಳು ಮತ್ತು ಪೌರ ಕಾರ್ಮಿಕರ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಎಸ್‌ಸಿಪಿ–ಟಿಎಸ್‌ಪಿ ಅನುದಾನ ದುರ್ಬಳಕೆ: ಬಿಜೆಪಿ ಪ್ರತಿಭಟನೆ

ಬೆಂಗಳೂರು, ಮಾ.5– ರಾಜ್ಯ ಸರ್ಕಾರ ಎಸ್‌ಸಿಪಿ–ಟಿಎಸ್‌ಪಿ ಅನುದಾನ ದುರುಪಯೋಗಪಡಿಸಿಕೊಂಡಿದೆ ಎಂದು ಆರೋಪಿಸಿ ಬಿಜೆಪಿ ಬುಧವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿತು ಮತ್ತು ಇದು ದಲಿತ ವಿರೋಧಿ ಸರ್ಕಾರ ಎಂದು ಟೀಕಿಸಿದೆ. ಈ ವೇಳೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ಗ್ಯಾರಂಟಿಗಳನ್ನು ಸರಿಯಾಗಿ ಜಾರಿಗೊಳಿಸಲು ಸಾಧ್ಯವಾಗದ ಹಿನ್ನಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ನಿಗದಿಪಡಿಸಿದ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಸಿದ್ದರಾಮಯ್ಯ ನೇತೃತ್ವದ ಭ್ರಷ್ಟ ಮತ್ತು ದುಷ್ಟ ಕಾಂಗ್ರೆಸ್ ಸರ್ಕಾರವನ್ನು ಎಚ್ಚರಿಸಬೇಕಾಗಿದೆ ಎಂದರು.

ಭ್ರಷ್ಟ ಮತ್ತು ದಲಿತ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕು. ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯುತ್ತದೆ ಮತ್ತು ಈ ಹೋರಾಟದಲ್ಲಿ ಎಲ್ಲರೂ ಕೈಜೋಡಿಸಬೇಕೆಂದು ನಾನು ಕರೆ ನೀಡುತ್ತೇನೆ. ನಾಳೆ ಬೆಳಗ್ಗೆ ಇದೇ ಸ್ಥಳದಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದೆ ಮತ್ತು ಎಲ್ಲರೂ ಭಾಗವಹಿಸುವಂತೆ ನಾನು ಒತ್ತಾಯಿಸುತ್ತೇನೆ ಎಂದು ಅವರು ಹೇಳಿದರು. ಬಿಜೆಪಿ ಸರ್ಕಾರ, ಎಸ್‌ಸಿ/ಎಸ್‌ಟಿಗಳಿಗೆ ಮೀಸಲಾದ ಹಣವನ್ನು ಎಂದಿಗೂ ದುರುಪಯೋಗಪಡಿಸಿಕೊಂಡಿಲ್ಲ ಎಂದು ಅವರು ಪ್ರತಿಪಾದಿಸಿದರು. ಸರ್ಕಾರದ ದಲಿತ ವಿರೋಧಿ ನೀತಿಗಳ ವಿರುದ್ಧ ಬಿಜೆಪಿ ನಿರಂತರವಾಗಿ ಹೋರಾಡುತ್ತಿದೆ. ಬಿಜೆಪಿ ಯಾವಾಗಲೂ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ಸಮುದಾಯಗಳ ಪರವಾಗಿ ನಿಂತಿದೆ ಎಂದರು. ಬಳಿಕ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು, ರಾಜ್ಯ ಸರ್ಕಾರದ ಖಜಾನೆಯಲ್ಲಿ ಹಣವಿಲ್ಲ. ಹೀಗಾಗಿ ದಲಿತ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿಗಳಿಗೆ ಬಳಸಲಾಗುತ್ತಿದೆ. 'ಸಿದ್ದಣ್ಣ, ಲೂಟಿ ಗ್ಯಾರಂಟಿ ಅಣ್ಣ' ಎಂಬಂತೆ ವರ್ತಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವತ್ಥ ನಾರಾಯಣ್, ಶಾಸಕರಾದ ಎಸ್.ಆರ್. ವಿಶ್ವನಾಥ್, ಬೈರತಿ ಬಸವರಾಜ್, ಮಾನಪ್ಪ ವಜ್ಜಲ್, ಉದಯ್ ಗರುಡಾಚಾರ್, ರಘು, ಭಾಗೀರಥಿ ಮುರುಳಸಿದ್ದಯ್ಯ, ಮಾಜಿ ಶಾಸಕ ಹಾಲಪ್ಪ, ಶರಣು ತಳ್ಳಿಕೇರಿ, ಉಮೇಶ್ ಶೆಟ್ಟಿ, ರವೀಂದ್ರ, ಮತ್ತು ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಹರೀಶ್, ರಾಮಮೂರ್ತಿ, ಮತ್ತು ಸಪ್ತಗಿರಿ ಗೌಡ ಸೇರಿದಂತೆ ಪಕ್ಷದ ಹಲವು ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಎಸ್‌ಸಿಪಿ–ಟಿಎಸ್‌ಪಿ ಅನುದಾನ ದುರುಪಯೋಗಪಡಿಸಿಕೊಂಡಿದೆ ಎಂದು ಆರೋಪಿಸಿ ಬಿಜೆಪಿ ಬುಧವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ವರ್ಷದೊಳಗೆ 20 ಸಾವಿರ ಎಕರೆ ಜಮೀನು ದೇವಾಲಯಗಳ ಹೆಸರಿನಲ್ಲಿ ಇಂಡೀಕರಣ

ಬೆಂಗಳೂರು, ಮಾ5– ರಾಜ್ಯದಲ್ಲಿರುವ 34 ಸಾವಿರ ದೇವಸ್ಥಾನಗಳಲ್ಲಿ ಸುಮಾರು 35 ಸಾವಿರ ಎಕರೆ ಜಮೀನಿದ್ದು, ಈವರೆಗೂ 15,413 ಎಕರೆ ಸ್ಥಳವನ್ನು ದೇವಸ್ಥಾನಗಳ ಹೆಸರಿನಲ್ಲಿ ಇಂಡೀಕರಣಗೊಳಿಸಿದೆ. ಬಾಕಿ 20 ಸಾವಿರ ಎಕರೆಯನ್ನು ಇನ್ನೊಂದು ವರ್ಷದಲ್ಲಿ ಸರ್ವೇ ಕಾರ್ಯ ಮುಗಿಸಿ ತೆರವಿಗೆ ಕ್ರಮ ಕೈಗೊಳಲಾಗುವುದು ಎಂದು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಮುಜರಾಯಿ ಇಲಾಖೆಗೆ ಸೇರಿದ ಆಸ್ತಿಗಳು ಇಷ್ಟು ವರ್ಷಗಳು ಅನಧಿಕೃತವಾಗಿ ಬೇರೆಯವರು ಒತ್ತುವರಿ ಮಾಡಿಕೊಂಡಿದ್ದರು. ಒತ್ತುವರಿ ಗುರುತಿಸಿ ಈ ಸಂಬಂಧ ಭೂಕಬಳಿಕೆ ನ್ಯಾಯಾಲಯ ಸೇರಿ ವಿವಿಧ ನ್ಯಾಯಾಲಯಗಳಲ್ಲಿ ಒತ್ತುವರಿದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದರು. ಹಿಂದೂ ಧಾರ್ಮಿಕ ಸಂಸ್ಥೆ ಅಧೀನದ ಒಳಪಡುವ ಜಾಗದ ರಕ್ಷಣೆಗಾಗಿ ಇದುವರೆಗೆ 15,413 ಎಕರೆ ಜಮೀನು ದೇವಸ್ಥಾನಗಳ ಹೆಸರಿನಲ್ಲಿ ಇಂಡೀಕರಣ ಮಾಡಲಾಗಿದೆ. ಇನ್ನುಳಿದ 20 ಸಾವಿರ ಎಕರೆ ಜಾಗವನ್ನು ಇನ್ನೊಂದು ವರ್ಷದಲ್ಲಿ ಸರ್ವೇ ಕಾರ್ಯ ಮುಗಿಸಿ ಹಂತ–ಹಂತವಾಗಿ ಇಂಡೀಕರಣಗೊಳಿಸಲಾಗುವುದು ಎಂದು ಕಾಂಗ್ರೆಸ್ ಸದಸ್ಯ ಕೆ. ಅಬ್ದುಲ್ ಜಬ್ಬರ್ ಪ್ರಶ್ನೆಗೆ ಸಚಿವರು ಉತ್ತರಿಸಿದರು.



ಮುಜರಾಯಿ ಇಲಾಖೆಗೆ ಸೇರಿದ ಜಮೀನುಗಳನ್ನು ಸಂರಕ್ಷಿಸಲು ಹಾಗೂ ಸರ್ವೇ ಕಾರ್ಯ ಮುಗಿಸಲು ಸರ್ವೇ ಅಧಿಕಾರಿಗಳಿಗೆ ತಿಂಗಳಾವಾರು ಗುರಿ ನಿಗದಿಪಡಿಸಲಾಗಿದೆ. ನ್ಯಾಯಾಲಯದಲ್ಲಿರುವ ವ್ಯಾಜ್ಯಗಳ ನಿರ್ವಹಣೆ ಕುರಿತಂತೆ ಆಯುಕ್ತಾಲಯ ಹಂತದ ಹಿರಿಯ ಅಧಿಕಾರಿಯನ್ನು ಎಸ್ಟೇಟ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಪ್ರೌಢಶಾಲೆ, ಪಿಯು ಬೋಧಕ–ಬೋಧಕೇತರ ನೌಕರರಿಗೆ ವಿವಿಧ ಸವಲತ್ತು ಒದಗಿಸಲು ಅನುದಾನ ಕಲ್ಪಿಸಿ

ಶಿಕ್ಷಣ ಸಚಿವ ಮಧು ಬಂಗಾರಪ್ಪರಿಗೆ ಎಂಎಲ್‌ಸಿ ಕೆ.ವಿವೇಕಾನಂದ ಮನವಿ



ಸಚಿವರಿಗೆ ಎಂಎಲ್‌ಸಿ ವಿವೇಕಾನಂದ ಅವರು ಮನವಿ ಸಲ್ಲಿಸಿದ ಸಂದರ್ಭ.

ಮೈಸೂರು, ಮಾ.5(ಪಿಎಂ)– ರಾಜ್ಯದ ಪ್ರೌಢ'ಶಾಲೆ ಮತ್ತು ಪದವಿಪೂರ್ವ ಕಾಲೇಜು ಬೋಧಕ ಮತ್ತು ಬೋಧಕೇತರ ನೌಕರರ ವಿವಿಧ ಸೌಲಭ್ಯ ಒದಗಿಸುವ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡಬೇಕೆಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಮನವಿ ಸಲ್ಲಿಸಿದರು.

ವಿಧಾನಸೌಧದಲ್ಲಿಂದು ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. 2024–25ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರು ಹಾಗೂ ಅವರ ಅವಲಂಬಿತರ ವೈದ್ಯಕೀಯ ವೆಚ್ಚ ಮರು ಪಾವತಿ, ವೇತನ ಹಿಂಬಾಕಿ, ಸ್ವಯಂಚಾಲಿತ ಬಡ್ತಿ ಹಿಂಬಾಕಿ, ಪರೀಕ್ಷಾ ಕಾರ್ಯ ನಿರ್ವಹಿಸಿದ ಸಂಭಾವನೆ ಸೇರಿದಂತೆ ಇತರೆ ಪಾವತಿಯಾಗಿಲ್ಲ. ಹೀಗಾಗಿ ನೌಕರರು ಸಂಕಷ್ಟಕ್ಕೆ ಸಿಲುಕಿದ್ದು, ಈ ಸಂಬಂಧ ತಮ್ಮ ಇಲಾಖೆಗೆ ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಶೀಘ್ರ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡಬೇಕೆಂದು ಸಚಿವರಲ್ಲಿ ಮನವಿ ಮಾಡಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿರುವ ವಿವೇಕಾನಂದ, ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ, ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆಂದು ತಿಳಿಸಿದ್ದಾರೆ.

ಐಪಿಎಸ್ ಅಧಿಕಾರಿ ವರ್ತಿಕಾ ವರ್ಗಾವಣೆ ಬೆನ್ನಲ್ಲೇ ಡಿ.ರೂಪಾ ಎತ್ತಂಗಡಿ

ಬೆಂಗಳೂರು, ಮಾ.5– ಕಳೆದ ಸೋಮವಾರ ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್ ಅವರನ್ನು ವರ್ಗಾವಣೆ ಮಾಡಿದ್ದ ರಾಜ್ಯ ಸರ್ಕಾರ ಬುಧವಾರ ಹಿರಿಯ ಐಪಿಎಸ್ ಅಧಿಕಾರಿ ಡಿ.ರೂಪಾ ಅವರನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.



ಡಿ.ರೂಪಾ

ಡಿ.ರೂಪಾ ಅವರ ವಿರುದ್ಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಲಿಖಿತ ದೂರು ನೀಡಿದ್ದ ವರ್ತಿಕಾ ಕಟಿಯಾರ್ ಅವರನ್ನು ಸೋಮವಾರ ವರ್ಗಾವಣೆ ಮಾಡಲಾಗಿತ್ತು. ಇದೀಗ ಆಂತರಿಕ ಭದ್ರತಾ ವಿಭಾಗದ ಐಜಿಪಿಯಾಗಿದ್ದ ಡಿ.ರೂಪಾ ಅವರನ್ನು ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ.

ಕಳೆದ ತಿಂಗಳು ವರ್ತಿಕಾ ಕಟಿಯಾರ್ ಅವರು, ರೂಪಾ ಅವರು ತಮ್ಮ ಅನುಪಸ್ಥಿತಿಯಲ್ಲಿ ಇಬ್ಬರು ಕಿರಿಯ ಪೊಲೀಸ್ ಅಧಿಕಾರಿಗಳ ಮೂಲಕ ನಿಯಂತ್ರಣ ಕೊಠಡಿಯಿಂದ ಕೀ ತೆಗೆದುಕೊಂಡು ತಮ್ಮ ಕಚೇರಿ ಪ್ರವೇಶಿಸಿದ್ದಾರೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ದೂರು ನೀಡಿದ್ದರು. ಇದರ ಬೆನ್ನಲ್ಲೇ ರಾಜ್ಯ ಸರ್ಕಾರ ವರ್ತಿಕಾ ಕಟಿಯಾರ್ ಅವರನ್ನು ವರ್ಗಾವಣೆ ಮಾಡಿತ್ತು. ದೂರು ನೀಡಿದವರನ್ನೇ ವರ್ಗಾವಣೆ ಮಾಡಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಇದೀಗ ರೂಪ ಅವರನ್ನೂ ಸಹ ಸರ್ಕಾರ ವರ್ಗಾವಣೆ ಮಾಡಿದ್ದು, ಇಬ್ಬರನ್ನೂ ಬೇರೆ ಕಡೆಗೆ ವರ್ಗಾವಣೆ ಮಾಡಲಾಗಿದೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀಮತಿ ಮೋನಿಕ ಜೈನ್ ಕೋಂ ದೀಪಕ್ ಜೈನ್, ವಾಸ ನಂ: 3657, 19ನೇ ಕ್ರಾಸ್, ಆರ್‌ಪಿ ರಸ್ತೆ, ನಂಜನಗೂಡು ಟೌನ್ ರವರು ಈ ಪ್ರಕಟಣೆಯ ಷೆಡ್ಯೂಲ್ ಆಸ್ತಿಗಳನ್ನು ಸ್ವತ್ತಿನ ಮಾಲೀಕರು ಅಂದರೆ ಕೃಷ್ಣಮೂರ್ತಿ ಇವರ ಮಕ್ಕಳಾದ ಶ್ರೀಮತಿ ಕೆ. ಪದ್ಮ ಕೋಂ. ಎನ್. ನಾಗೇಂದ್ರಪ್ರಸಾದ್, ನಂ.26ಬಿ, ಸೋನಾರ್ಸ್ ಸ್ಟ್ರೀಟ್, ಡಿ. ಸುಬ್ಬಯ್ಯ ರೋಡ್, ಚಾಮರಾಜ ಮೊಹಲ್ಲಾ, ಮೈಸೂರು ಮತ್ತು ಕೆ.ಗೀತ ಕೋಂ ವೆಂಕಟೇಶ್ ನಂ. 1154, ರಾಧಾ ನಿವಾಸ, 3ನೇ ತಿರುವು, 3ನೇ ಹಂತ, ಕನಕದಾಸ ನಗರ ಮೈಸೂರು ಇವರಿಂದ ಕ್ರಯದ ವ್ಯವಹಾರವನ್ನು ನಡೆಸುವ ಇರಾದೆಯನ್ನು ಹೊಂದಿರುತ್ತಾರೆ/ ಉದ್ದೇಶಿಸಿರುತ್ತಾರೆ.

ಈ ಮೂಲಕ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿಗಳಾಗಲಿ/ಸಂಸ್ಥೆಗಳಾಗಲಿ/ ಬ್ಯಾಂಕ್‌ಗಾಗಲಿ ಯಾವುದೇ ರೀತಿಯ ಹಕ್ಕು, ಮಾಲೀಕತ್ವ, ಹಕ್ಕೋತ್ತಾಯ, ಉತ್ತರಾಧಿಕಾರದ ಹಕ್ಕು, ಭೋಗ್ಯ, ಇಳಿಭೋಗ್ಯ ಗುತ್ತಿಗೆ ಅಥವಾ ಇತರೆ ಯಾವುದೇ ರೀತಿಯ ಹಕ್ಕು ಭಾಧ್ಯತೆ ಇದ್ದಲ್ಲಿ ಸದರಿ ಹಕ್ಕಿಗೆ ಸಂಬಂಧಿಸಿದ ದಾಖಲೆಗಳನ್ನು ಈ ಪ್ರಕಟಣೆ ಆದ ಏಳು ದಿನಗಳ ಒಳಗೆ ನಮ್ಮ ಕಕ್ಷಿದಾರರನ್ನಾಗಲಿ ಅಥವಾ ನಮ್ಮ ಕಚೇರಿಯಲ್ಲಾಗಲಿ ಖುದ್ದು ಹಾಜರುಪಡಿಸಿ ಬಗೆಹರಿಸಿಕೊಳ್ಳಲು ಈ ಮೂಲಕ ತಿಳಿಯಪಡಿಸಲಾಗಿದೆ. ನಂತರ ಬಂದುತಹ ಯಾವುದೇ ತಕರಾರನ್ನು/ ಹಕ್ಕೋತ್ತಾಯವನ್ನು ಪರಿಗಣಿಸುವುದಿಲ್ಲ ಎಂದು ಈ ಮೂಲಕ ನಮ್ಮ ಕಕ್ಷಿದಾರರ ಸೂಚನೆ ಮೇರೆಗೆ ಈ ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ.

ಷೆಡ್ಯೂಲ್ ಸ್ವತ್ತುಗಳ ವಿವರ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಹಿರೀಕಾಟಿ ಗ್ರಾಮದ ಸರ್ವೆ ನಂ317/2 ರಲ್ಲಿ 1 ಎಕರೆ 22 ಗುಂಟೆ ಮತ್ತು ಸರ್ವೆ ನಂ: 318/2 ರಲ್ಲಿ 2 ಎಕರೆ 31 ಗುಂಟೆ ಜಮೀನುಗಳು ಮಾತ್ರ.

ಎಸ್.ಎನ್. ನಂದೀಶ್, ವಕೀಲರು,
ವಿವಿ ಕಾಂಪ್ಲೆಕ್ಸ್, ಗುಂಡ್ಲುಪೇಟೆ ಟೌನ್,
ಚಾಮರಾಜನಗರ ಜಿಲ್ಲೆ.
ಮೊ.ನಂ: 9741932493

ದಿನಾಂಕ 05–03–2025

KARNATAKA STATE ROAD TRANSPORT CORPORATION
MANDYA DIVISION, MANDYA

No: KST/MDY/TR/Com/924/2024-25 Date: 04.03.2025

E-Tender and Manual Tender Notification-14/2024-25

K.S.R.T.C, Mandya Division, Mandya. **E-Tender applications are invited Through Karnataka Public Procurement Portal (KPPP)** at Mandya bus stand-Open Place-01 (General Stall) (reserved for Scheduled Caste), Madduru Bus stand-General Stall-04, Srirangapattana Bus Stand-General Stall-03, General Stall-06, General Stall-08, K.R. Pete Bus Stand-General Stall-10 (reserved for Special Challenged persons).

Manual Tender applications are invited at Jakkanahalli Bus Stand-General Stall-03, for the licensee selection. Last date for submitting E-Tender application **submission** through **Karnataka Public Procurement Portal last date: 26.03.2025 at 17.00, E-Tender & Manual tender documents and D.D's submission date: 27.03.2025 at 10.30am to date: 28.03.2025 at 11.00am. Technical bid will be opened on date: 28.03.2025 at 11.30am, Technical Bid documents verification & Manual tender held on Date: 28.03.2025 At 15.00, Financial bid will be opened on date:29.03.2025 at 11.00am** and visit the web site "https://ksrtc.karnataka.gov.in" or The interested tenderer visit the web site "http://Kppp. karnataka.gov.in" or KSRTC, Mandya Division, Mandya for more details. Contact no.7760990652, 7760990661, 7337680837.

Sd/-
Divisional Controller
KSRTC Mandya Division, Mandya

DIPR/CP/5468/MAA/2024-25

KARNATAKA STATE ROAD TRANSPORT CORPORATION
MANDYA DIVISION, MANDYA

No: KST/MDY/TR/Com/923/2024-25 Date: 04.03.2025

Negotiation Notification-13/2024-25
(Negotiation for Advertisement display)

K.S.R.T.C, Mandya Division, has invited Negotiation for Advertisement, the interested individuals/parties/contractors/ Agencies/Firms/Social Organizations etc., are eligible to bid for hoardings arch, Unipoles, Glow Sign Boards, Platform boards, Pillar boards Advertisements at all bus-stands of it's jurisdiction. The period of contract is 05 years. Download negotiation documents from "**https://ksrtc.karnataka.gov.in**" website submitting Negotiation application and Application fee & EMD D.D's submission date: **24.03.2025 at 10.30 am to dt: 25.03.2025 at 11.00 am** and Negotiation will be Held on Date: **25.03.2025 At 12.30 pm.** Visit Division office, KSRTC, Mandya Division, Mandya for more details. And Contact no.7760990652, 7760990661, 7337680837.

Sd/-
Divisional Controller
KSRTC: Mandya Division, Mandya

DIPR/CP/5482/MAA/2024-25

KARNATAKA STATE ROAD TRANSPORT CORPORATION
MANDYA DIVISION, MANDYA

No: KST/MDY/TR/Com/922/2024-25 Date: 04.03.2025

Commercial stalls Negotiation Notification-12/2024-25

K.S.R.T.C, Mandya Division, Mandya. **Negotiation applications are invited** at Madduru Bus stand- General stall-07 & Madduru (Mysuru-Bengaluru Highway) – Mid way plaza (it's included 07 no's. of Constructed Stalls+Hotel (constructed premises)+2000sq.ft., open space for Advertisement display+Toilet/Urinals/plaza area/parking area maintenances of housekeeping) & General Stall-02, Pandavapura Bus Stand-General Stall-05, Melukote Bus Stand-General Stall-01, General Stall-02, General Stall-03 and General Stall-04, Nagamangala Bus Stand-General Stall-03, K.R.Pete Bus Stand-General Stall-03, General Stall-04, General Stall-05, General Stall-06, General Stall-07 & General Stall-08, Srirangapattana Bus Stand-General Stall-05, Koppa Bus Stand-General Stall-03, Chinakurali Bus Stand-General Stall-01 for the licensee, selection Download negotiation documents from "**https://ksrtc.karnataka.gov.in**" website submitting Negotiation application and Application fee & EMD D.D's submission date: **24.03.2025 at 10.30 am to dt: 25.03.2025 at 11.00 am** and Negotiation will be Held on Date: **25.03.2025 At 11.30 am.** Visit Division office, KSRTC, Mandya Division, Mandya for more details. And Contact no.7760990652, 7760990661, 7337680837.

Sd/-
Divisional Controller
KSRTC: Mandya Division, Mandya

DIPR/CP/5467/MAA/2024-25

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕರ ಗಮನಕ್ಕೆ

ಸಂಖ್ಯೆ : GC:PP:10:2025
ದಿನಾಂಕ : 4ನೇ ಮಾರ್ಚ್ 2025

ನನ್ನ ಕಕ್ಷಿದಾರರಾದ ಶ್ರೀ ಆರ್. ವೇತನಾಯಗಂ., Late S/o. M. ರತಿನಂ. # 366, 7ನೇ ಮುಖ್ಯರಸ್ತೆ ಹೆಬ್ಬಾಳ್ 1ನೇ ಹಂತ, ಮೈಸೂರು ನಲ್ಲಿ ವಾಸಿಸುತ್ತಿದ್ದಾರೆ , ಇವರು ಶ್ರೀಮತಿ B.ಸುಧಾ W/o Late. ನಾರಾಯಣನ್.ಪಿ, ನಂ .1346, 4ನೇ ಕ್ರಾಸ್, 2ನೇ ಹಂತ. ಶ್ರೀರಾಂಪುರ ಚಾಮರಾಜ ಮೊಹಲಾ ಮೈಸೂರು. ಅವರಿಂದ ಈ ಕೆಳಗಿನ ಸ್ವತ್ತಿನ ಆಸ್ತಿಯನು ಖರೀದಿಸಲು ಉದ್ದೇಶಿಸಿದ್ದಾರೆ. ಆದ್ದರಿಂದ ನಾನು ಈ ಸೂಚನೆಯನ್ನು ಸಾರ್ವಜನಿಕರಿಗೆ ಮತ್ತು ಯಾವುದೇ ವ್ಯಕ್ತಿಗಳಿಗೆ ಹಕ್ಕು, ಸ್ವಾದೀನ ಇದ್ದಲ್ಲಿ ಮತ್ತು ಕೋರ್ಟಿನಲ್ಲಿ ತಂಟೆ ತಕರಾರುಗಳು ಇದ್ದಲ್ಲಿ ಈ ದಿನದಿಂದ 7 ದಿನಗಳೊಳಗೆ ಈ ಕೆಳಗಿನ ಕಛೇರಿಯಲ್ಲಿ ತಿಳಿಸುವುದಾಗಿ ಸಾರ್ವಜನಿಕರಲ್ಲಿ ಕೇಳಿಕೊಳ್ಳುತ್ತೇನೆ. ಒಂದು ಪಕ್ಷದಲ್ಲಿ ಯಾವುದೇ ದೂರು ಬರದಿದ್ದಲ್ಲಿ ಈ ಆಸ್ತಿಯ ಮೇಲೆ ಯಾರ ಹಕ್ಕು ಇರುವುದಿಲ್ಲ ಎಂದು ಭಾವಿಸುತ್ತೇನೆ.

ಷೆಡ್ಯುಲ್ ಸ್ವತ್ತಿನ ವಿವರ :

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನ ಛತ್ರ ಹೋಬಳಿ, ಕೆಂಬಾಳು ಗ್ರಾಮದ ಸರ್ವೇ ಸಂಖ್ಯೆ 27/4 ರಲ್ಲಿ 24 ಕುಂಟೆಯ ವಾಣಿಜ್ಯ ಪರಿವರ್ತನ ಭೂಮಿಯು ದಿನಾಂಕ 8–7–2023 ರ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪಕ ಪತ್ರದ ಸಂಖ್ಯೆ 506122 ರ ಪ್ರಕಾರ ಪರಿವರ್ತಿತವಾಗಿದೆ ಮತ್ತು ಇದರ ಚಕ್ಕುಬಂದಿ.

ಪೂರ್ವಕ್ಕೆ : ರಸ್ತೆ.
ಪಶ್ಚಿಮಕ್ಕೆ : ಸರ್ವೇ ಸಂಖ್ಯೆ 27/5.
ಉತ್ತರಕ್ಕೆ : ಸರ್ವೇ ಸಂಖ್ಯೆ 26.
ದಕ್ಷಿಣಕ್ಕೆ : ರಸ್ತೆ.

ಸಂಪರ್ಕಿಸುವ ವಿಳಾಸ :
ಅಭಿನಂದನನ್.ಎಚ್, ವಕೀಲರು
ಸಂಖ್ಯೆ 990, 1ನೇ ಹಂತ, ಇ ಮತ್ತು ಎಫ್ ಬ್ಲಾಕ್ ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು.
ದೂರವಾಣಿ ಸಂಖ್ಯೆ : 9964426903

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಸಂಖ್ಯೆ:ಮೈನಪ್ರಾ/ವ.ಕ–6/2024–25 । ದಿನಾಂಕ:04.03.2025

ಪತ್ರಿಕಾ ಪ್ರಕಟಣೆ

ಶ್ರೀ ಜಿ.ಪಿ.ಡ್ಯಾನಿಯಲ್ ರವರು ಸಿದ್ದಾರ್ಥನಗರ ಬಡಾವಣೆಯಲ್ಲಿ ನಿವೇಶನ ಸಂಖ್ಯೆ: 570 ಅಳತೆ 50X80 ಅಡಿ ನಿವೇಶನಕ್ಕೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ಸದರಿ ನಿವೇಶನ ಸಂಖ್ಯೆ:570 ಅಳತೆ 50X80 ಅಡಿ ನಿವೇಶನವು ಶ್ರೀ ಆರ್.ಪ್ರಹ್ಲಾದ್ ರಾವ್ ರವರಿಗೆ ದಿ:30.09.1974 ರಲ್ಲಿ ಮಂಜೂರಾಗಿರುತ್ತದೆ. ದಿ:07.04.1975 ರಲ್ಲಿ ಸ್ವಾಧೀನ ಪತ್ರ ಪಡೆದಿರುತ್ತಾರೆ. ನಂತರ ಸದರಿ ಮಂಜೂರಾತಿ–ದಾರರು ದಿ:05.04.1977 ರಲ್ಲಿ ಮರಣಹೊಂದಿದ್ದು, ಮೃತ ಮಂಜೂರಾತಿದಾರರ ಪತ್ನಿಯಾದ ಶ್ರೀಮತಿ ಚಂದ್ರ.ಪಿ.ರಾವ್ ರವರು ಖಾತಾ ವರ್ಗಾವಣೆಗಾಗಿ ದಿ:24.03.1978 ರಲ್ಲಿ ಅರ್ಜಿ ಸಲ್ಲಿಸಿದ್ದರ ಮೇರೆಗೆ ದಿ:31.03.1978 ರಲ್ಲಿ ನಿವೇಶನದ ಖಾತಾ ವರ್ಗಾವಣೆ ಮಾಡಲಾಗಿರುತ್ತದೆ.

ಮೃತ ಮಂಜೂರಾತಿದಾರರ ಪತ್ನಿಯಾದ ಶ್ರೀಮತಿ ಚಂದ್ರ.ಪಿ.ರಾವ್ ರವರು ಮೇಲ್ಕಂಡ ನಿವೇಶನವನ್ನು ದಿ:20.05.1988 ರಲ್ಲಿ ಡಾ॥ ಜಿ.ಸಾವಿತ್ರಮ್ಮ ರವರಿಗೆ ಶುದ್ಧಕ್ರಯಕ್ಕೆ ಮಾರಾಟ ಮಾಡಿದ್ದು, ಸದರಿ ಶುದ್ಧ ಕ್ರಯಪತ್ರದಲ್ಲಿ ತಮ್ಮ ಪತಿಯ ಹೆಸರನ್ನು ಲೇಟ್ ಆರ್.ಪ್ರಹ್ಲಾದ್ ರಾವ್ ಎಂದು ನಮೂದಿಸುವ ಬದಲು ಶ್ರೀ ಬಿ.ಎನ್.ಪ್ರಕಾಶ್ ರಾವ್ ಎಂದು ನಮೂದಿಸಿರುತ್ತಾರೆ. ನಂತರ ಡಾ। ಜಿ.ಸಾವಿತ್ರಮ್ಮ ರವರು ಶ್ರೀ ಆರ್.ಶ್ರೀನಿವಾಸನ್ ರವರಿಗೆ ದಿ:20.10.1990 ರಲ್ಲಿ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಶ್ರೀ ಆರ್.ಶ್ರೀನಿವಾಸನ್ ರವರು ದಿ:10.07.1995 ರಲ್ಲಿ ಶ್ರೀ ಪಿ.ನಿತ್ಯಾನಂದ ರವರಿಗೆ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಕೊನೆಯದಾಗಿ ಶ್ರೀ ಪಿ.ನಿತ್ಯಾನಂದ ರವರು ದಿ:05.07.2001 ರಲ್ಲಿ ಶ್ರೀ ಜಿ.ಪಿ.ಡ್ಯಾನಿಯಲ್ ರವರಿಗೆ ಶುದ್ಧಕ್ರಯಕ್ಕೆ ಮಾರಾಟ ಮಾಡಿದ್ದು ಸದರಿಯವರು ಶುದ್ಧ ಕ್ರಯಪತ್ರದ ಪ್ರತಿ ಇ.ಸಿ ಮತ್ತು ಇತರೇ ದಾಖಲಾತಿಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿ ಕ್ರಯಪತ್ರ ನೀಡುವಂತೆ ಕೋರಿರುತ್ತಾರೆ.

ಅರ್ಜಿದಾರರಾದ ಶ್ರೀ ಜಿ.ಪಿ.ಡ್ಯಾನಿಯಲ್ ರವರು ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸಿದ್ದು, ಮೃತ ಮೂಲ ಮಂಜೂರಾತಿದಾರರ ಪತ್ನಿಯಾದ ಶ್ರೀಮತಿ ಚಂದ್ರ.ಪಿ.ರಾವ್ ರವರು ಮೇಲ್ಕಂಡ ನಿವೇಶನವನ್ನು ಡಾ॥ ಜಿ.ಸಾವಿತ್ರಮ್ಮ ರವರಿಗೆ ಶುದ್ಧಕ್ರಯಕ್ಕೆ ಮಾರಾಟ ಮಾಡಿದ್ದು, ಸದರಿ ಶುದ್ಧ ಕ್ರಯಪತ್ರದಲ್ಲಿ ತಮ್ಮ ಪತಿಯ ಹೆಸರನ್ನು ಲೇಟ್ ಆರ್.ಪ್ರಹ್ಲಾದ್ ರಾವ್ ಎಂದು ನಮೂದಿಸುವ ಬದಲು ಶ್ರೀ ಬಿ.ಎನ್.ಪ್ರಕಾಶ್ ರಾವ್ ಎಂದು ನಮೂದಿಸಿರುವುದರಿಂದ ಪ್ರಸ್ತುತ ಕ್ರಯದಾರರಾದ ಶ್ರೀ ಜಿ.ಪಿ.ಡ್ಯಾನಿಯಲ್ ರವರು ಕ್ರಯಪತ್ರ ಕೋರಿರುವುದರಿಂದ ಸದರಿಯವರ ಹೆಸರಿಗೆ ಕ್ರಯಪತ್ರ ನೀಡುವ ಸಂಬಂಧ ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಶೀಲ್ದಾರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು